



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 10 ಸೋಮವಾರ 2025
ಸಂಪುಟ: 46 | ಸಂಚಿಕೆ: 202 | ಪುಟಗಳು: 10
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಜನರು ಮನಸ್ಸು ಮಾಡಿದರೆ ನಾಳೆ ಬೆಳಗ್ಗೆಯೇ
ಭಾರತ ಹಿಂದೂ ರಾಷ್ಟ್ರ

ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅಭಿಮತ



ಬೆಂಗಳೂರು, ನ.9– ದೇಶದ 140 ಕೋಟಿ ಜನರು ಮನಸ್ಸು ಮಾಡಿದರೆ ಭಾರತ ನಾಳೆ ಬೆಳಗ್ಗೆಯೆ ಹಿಂದೂ ರಾಷ್ಟ್ರ ಆಗುತ್ತದೆ. ಮುಂದೊಂದು ದಿನ ಭಾರತ ಹಿಂದೂ ರಾಷ್ಟ್ರ ಆಗೇ ಆಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಸರಸಂಘ ಚಾಲಕ ಮೋಹನ್ ಭಾಗವತ್ ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ನಡೆದ ಆರ್‌ಎಸ್‌ಎಸ್ 100 ವರ್ಷದ ಉಪನ್ಯಾಸ ಕಾರ್ಯಕ್ರಮದ ಸಂವಾದದಲ್ಲಿ ಮಾತನಾಡಿದ ಅವರು, ಹಿಂದೂ ರಾಷ್ಟ್ರ ಪರಿಕಲ್ಪನೆ ಮತ್ತಷ್ಟು ಗಟ್ಟಿಗೊಳಿಸಿದ್ದಾರೆ. ಹಿಂದೂ ರಾಷ್ಟ್ರಕ್ಕೆ ಜನರು ಮನಸ್ಸು ಮಾಡಬೇಕು ಎಂದಿದ್ದಾರೆ.

ಬಲಿಷ್ಠ ಭಾರತ ಕಟ್ಟುವುದು ಆರ್‌ಎಸ್‌ಎಸ್ ಗುರಿಯಾಗಿದೆ. ಇದಕ್ಕಾಗಿ ಅವಿರತ ಪ್ರಯತ್ನ ಮಾಡುತ್ತೇವೆ. ಬಲಿಷ್ಠ ಭಾರತ ಕಟ್ಟಲು ಹಿಂದೂ ಸಮಾಜದ ನೆರವು ಬೇಕಿದೆ. ಹೀಗಾಗಿ ಈ ಬಲಿಷ್ಠ ಭಾರತಕ್ಕಾಗಿ ಹಿಂದೂ ಸಮಾಜವನ್ನು ತಯಾರಿಗೊಳಿಸುತ್ತಿದ್ದೇವೆ ಎಂದು ಮೋಹನ್ ಭಾಗವತ್ ಹೇಳಿದ್ದಾರೆ. ಯಾವುದೇ ಧರ್ಮ, ಜಾತಿ ಇರಲಿ, ಭಾರತ ಮಾತೆಯ ಪುತ್ರರಾಗಿ, ಹಿಂದೂಗಳಾಗಿ ಕೆಲಸ ಮಾಡಬೇಕು.

ಹಿಂದೂ ಹೆಣ್ಣು ಮಕ್ಕಳು ಕೆಲವು ಆಕರ್ಷಣೆಗೆ ಒಳಗಾಗಿ, ಮೂರ್ಖರಾಗುತ್ತಿದ್ದಾರೆ. ನಮ್ಮ ಮನೆಯಲ್ಲೇ ಸಂಸ್ಕಾರ ಕಲಿಸಬೇಕು. ಲವ್ ಜಿಹಾದ್‌ಗೆ ಒಳಗಾಗದಂತೆ ಹೆಣ್ಣು ಮಕ್ಕಳನ್ನು ಬೆಳೆಸಬೇಕು. ಇದರಿಂದ ಲವ್ ಜಿಹಾದ್ ಕೊನೆಯಾಗಲಿದೆ. ಎಲ್ಲಾ ಭಾರತೀಯ ಮುಸ್ಲಿಮರನ್ನು ಒಂದೇ ರೀತಿಯಲ್ಲಿ ನೋಡಲು ಆಗಲ್ಲ. ಎಲ್ಲಾ ಮುಸ್ಲಿಮರನ್ನು ಜಿಹಾದಿಗಳು ಎಂದು ಕರೆಯಲು ಆಗಲ್ಲ ಎಂದರು.

ಎಲ್ಲಾ ಧರ್ಮದವರಿಗೂ ಸಂಘದಲ್ಲಿ ಅವಕಾಶವಿದೆ. ಸಂಘದಿಂದ ಯಾರಿಗೂ ಯಾವುದೇ ನಿರೀಕ್ಷೆಗಳು ಇರಬಾರದು. ಜಾತಿ–ಧರ್ಮಗಳ ಹೆಸರಿನಲ್ಲಿ ಸಂಘ ಏನೂ ಮಾಡುವುದಿಲ್ಲ ಎಂದು ಮೋಹನ್ ಭಾಗವತ್ ಹೇಳಿದ್ದರೆ.

ಸಂಘದ ಬಗ್ಗೆ ಟೀಕೆಗಳ ಕುರಿತು ಮಾತನಾಡಿದ ಅವರು, ಹಲವರು ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಾರೆ. ಆರೋಪ, ಟೀಕೆಗಳನ್ನು ಮಾಡುತ್ತಾರೆ. ಆದರೆ ನಾವು ಉತ್ತರ ನೀಡಲು ಹೋಗುವುದಿಲ್ಲ. ಸಂಘಕ್ಕೆ ಮಾಡಲು ಸಾಕಷ್ಟು ಕೆಲಸವಿದೆ. ಟೀಕೆಗಳು, ಆರೋಪಗಳಿಗೆ ಪ್ರಚಾರ ಸಿಗುತ್ತದೆ. ಅದು ಜನಪ್ರಿಯತೆ ಪಡೆದುಕೊಳ್ಳುತ್ತದೆ. ಕರ್ನಾಟಕದಲ್ಲೂ ಅದೇ ಆಗುತ್ತಿದೆ. ನಾವು ಯಾಕೆ ಇದಕ್ಕೆಲ್ಲಾ ಬೆಂಬಲ ನೀಡಬೇಕು. ಸ್ವಯಂ ಸೇವಕರಿಗೆ ಎಲ್ಲಾ ರಾಜಕೀಯ ಪಕ್ಷಗಳ ಬಾಗಿಲು ಬಂದ್ ಆಗಿತ್ತು. ಹಾಗಾಗಿ ಬಿಜೆಪಿಗೆ ಹೋದರು. ಬೇರೆ ಪಕ್ಷಗಳಲ್ಲಿ ಸ್ವಯಂ ಸೇವಕರು ಯಾಕಿಲ್ಲ ಎಂದು ಆಯಾ ಪಕ್ಷದವರನ್ನೇ ಕೇಳಿ. ಸಂಘ ರಾಷ್ಟ್ರ ನೀತಿಯನ್ನು ಬೆಂಬಲಿಸುತ್ತದೆ. ರಾಜನೀತಿಯನ್ನಲ್ಲ ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

ಹಿಂದೂ ಧರ್ಮವು ನೋಂದಣಿಯಾಗಿಲ್ಲ: 1925ರಲ್ಲಿ ಸಂಘ ಸ್ಥಾಪನೆಯಾಯಿತು. ಬ್ರಿಟಿಷರ ಕಾಲದಲ್ಲಿ ಸಂಘ ರಿಜಿಸ್ಟ್ರೇಶನ್ ಆಗುವುದನ್ನು ನೀವು ನಿರೀಕ್ಷೆ ಮಾಡುತ್ತೀರಾ? ಬ್ರಿಟಿಷರ ವಿರುದ್ಧವೇ ಹೋರಾಟ ಮಾಡಿದ್ದೆವು. ಸ್ವತಂತ್ರ ಭಾರತದಲ್ಲಿ ನೋಂದಣಿ ಕಡ್ಡಾಯವಲ್ಲ. ಆರ್‌ಎಸ್‌ಎಸ್ ಸ್ವತಂತ್ರ ಸಂಸ್ಥೆ ಎಂದು ಕೋರ್ಟ್ ಹೇಳಿದೆ. ■6ನೇ ಪುಟಕ್ಕೆ

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಘಟಿಕೋತ್ಸವ
ಕಂಡ ಕನಸಿನ ಸಾಕಾರಕ್ಕೆ ಸೋಲಿನಿಂದ ಕುಗ್ಗದೆ ಗುರಿಯತ್ತ ಮುನ್ನುಗ್ಗಬೇಕು

ವಿದ್ಯಾರ್ಥಿಗಳಿಗೆ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಕಿವಿ ಮಾತು

ಮೈಸೂರು,ನ.9(ಎಂಟಿವೈ)– ಯುವ ಜನರು ಯಾವುದೇ ಕ್ಷೇತ್ರದಲ್ಲಾದರೂ ಸರಿ ತಾವು ಕಂಡ ಕನಸನ್ನು ಸಾಕಾರಗೊಳಿಸಿಕೊಳ್ಳಲು ಹಿನ್ನಡೆ ಅಥವಾ ಸೋಲುಗಳಿಂದ ಕುಗ್ಗದೆ ಗುರಿಯತ್ತ ಮುನ್ನುಗ್ಗಿ ನಿರಂತರವಾಗಿ ಪರಿಶ್ರಮಿಸಬೇಕು. ಆಗ ಮಾತ್ರ ಯಶಸ್ಸು ಗಳಿಸಬಹುದು ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ಭಾನುವಾರ ಆಯೋಜಿಸಿದ್ದ 16ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಯಾವುದೇ ಪ್ರಯತ್ನದಲ್ಲಿ ಜಯ–ಅಪಜಯಗಳೆರಡೂ ಎದುರಾಗುತ್ತವೆ. ಸೋಲಾದಾಗ ಅದರಿಂದ ಕುಗ್ಗಬಾರದು. ಗುರಿ ಸಾಧಿಸುವ ವೇಳೆ ವಿರಾಮ ತೆಗೆದುಕೊಳ್ಳಬಾರದು. ಅಲ್ಲದೆ, ಗುರಿ ತಲುಪುವ ದಾರಿಯಿಂದಲೂ ನಿರ್ಗಮಿಸಬಾರದು. ನಿಗದಿತ ಗುರಿ ತಲುಪುವವರೆಗೂ ತನ್ನ ಚಿತ್ತ ಇರಬೇಕು. ಯಾವುದೇ ಕಾರಣಕ್ಕೂ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳಬಾರದು. ನಿಮ್ಮ ಸಮಸ್ಯೆ ನಿಮಗೆ ಮಾತ್ರ ತಿಳಿದಿರುತ್ತದೆ. ವಿಫಲತೆ ಸೋಲು ಅಲ್ಲ. ಅದು ವ್ಯಕ್ತಿಯನ್ನು ಇನ್ನಷ್ಟು ಸದೃಢ ಮತ್ತು ಗಟ್ಟಿಗೊಳಿಸುತ್ತದೆ ಎಂದು ತಿಳಿಸಿದರು.



ಮೈಸೂರಿನ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ಭಾನುವಾರ ಆಯೋಜಿಸಿದ್ದ 16ನೇ ಘಟಿಕೋತ್ಸವ ಸಮಾರಂಭದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು.

ನಾನು ಇದುವರೆಗೂ ಐದು ಬಾರಿ ಚುನಾವಣೆ ಎದುರಿಸಿದ್ದೇನೆ. ಎರಡು ಬಾರಿ ಚುನಾವಣೆಯಲ್ಲಿ ಗೆದ್ದು, ಮೂರು ಬಾರಿ ಸೋತಿದ್ದೇನೆ. ಸೋಲಿಗೆ ಕಾರಣ ನನಗೆ ಗೊತ್ತಿರಲ್ಲ. ನಾನು ಚುನಾವಣೆಯಲ್ಲಿ ಸೋತ ಮಾತ್ರಕ್ಕೆ ಸುಮ್ಮನೆ ಕೂರಲಿಲ್ಲ. ಸೇವಾ ಕಾರ್ಯವನ್ನು ಮುಂದುವರೆಸಿಕೊಂಡು ಹೋದೆ. ಆ ಕಾರಣದಿಂದ ಇಂದು ದೇಶದ ಎರಡನೇ ಅತ್ಯುನ್ನತ ಹುದ್ದೆಯಾದ ಉಪ ರಾಷ್ಟ್ರಪತಿಯಾಗಿದ್ದೇನೆ. ಸೋಲು–ಗೆಲುವು ನಮ್ಮ ಕೈಯಲ್ಲಿ ಇರುವುದಿಲ್ಲ. ಹೀಗಾಗಿ, ಮಾಡುತ್ತಿರುವ ಕೆಲಸವನ್ನು ನಿಲ್ಲಿಸಬಾರದು. ಅದನ್ನು ಮುಂದುವರಿಸಬೇಕು. ನಿರಂತರ ಪರಿಶ್ರಮ ಮಾತ್ರ ನಿಮ್ಮ ಕೈ ಹಿಡಿಯಲಿದೆ. ■6ನೇ ಪುಟಕ್ಕೆ

ಭಾರತ ನಾವೀನ್ಯತೆ, ಸಂಶೋಧನೆಯ ಯುಗವನ್ನು ಪ್ರವೇಶಿಸುತ್ತಿದೆ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯ

ಮೈಸೂರು,ನ.9(ಎಂಟಿವೈ)– 2047ಕ್ಕೆ ಸ್ವಾವಲಂಬಿ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತ ಗುರಿ ಹೊಂದಲಾಗಿದ್ದು, ಯುವಕರು ತಮ್ಮ ಪ್ರತಿಭೆ, ನಾವೀನ್ಯತೆ, ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ದಿಕ್ಕನ್ನು ನೀಡಬೇಕಾದ ಅನಿವಾರ್ಯತೆ ಇದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ಭಾನುವಾರ ಆಯೋಜಿಸಿದ್ದ 16ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತವು ನಾವೀನ್ಯತೆ ಮತ್ತು ಸಂಶೋಧನೆಯ ಯುಗವನ್ನು ಪ್ರವೇಶಿಸುತ್ತಿದೆ. ಆರೋಗ್ಯ, ಜೈವಿಕ ತಂತ್ರಜ್ಞಾನ, ಔಷಧಾಲಯ, ಕೃತಕ ಬುದ್ಧಿಮತ್ತೆ, ಸುಸ್ಥಿರ ಅಭಿವೃದ್ಧಿ ಕ್ಷೇತ್ರಗಳಲ್ಲಿ ಅಪಾರ ಅವಕಾಶವಿದೆ. 2047ಕ್ಕೆ ಸ್ವಾವಲಂಬಿ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತ ಗುರಿ ಹೊಂದಲಾಗಿದೆ. ಯುವಕರು ತಮ್ಮ ಪ್ರತಿಭೆ, ನಾವೀನ್ಯತೆ, ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ದಿಕ್ಕನ್ನು ನೀಡಬೇಕಾಗಿದೆ. ಯುವಜನತೆ ಉದ್ಯೋಗಾಕಾಂಕ್ಷಿಗಿಂತ ಉದ್ಯೋಗ ಕಲ್ಪಿಸುವವರ ಜವಾಬ್ದಾರಿ ಹೆಚ್ಚಾಗಬೇಕು. ಭಾರತೀಯ ಸಂಸ್ಕೃತಿ ನಮಗೆ ಕಲಿಸುತ್ತದೆ. ಅದು ನಮ್ರತೆಯನ್ನು ತುಂಬುತ್ತದೆ ಮತ್ತು ನಮ್ರತೆಯು ವ್ಯಕ್ತಿಯನ್ನು ಸಮರ್ಥನನ್ನಾಗಿ ಮಾಡುತ್ತದೆ. ಆದ್ದರಿಂದ ನಿರಂತರ ಕಲಿಕೆ ಮತ್ತು ನಿರಂತರ ಸೇವೆಯ ■6ನೇ ಪುಟಕ್ಕೆ

ಮದಗಜಗಳ ಕಾದಾಟ
ಕಾಡಾನೆ ಭೀಮನ ದಂತ ಮುರಿತ



ಹಾಸನ, ನ.9– ಮಲೆನಾಡು ಭಾಗದ ಜನರ ಅಚ್ಚುಮೆಚ್ಚಿನ ಕಾಡಾನೆ ಭೀಮ ಮತ್ತೊಂದು ಕಾಡಾನೆ ಜೊತೆ ಕಾಳಗ ನಡೆಸುತ್ತಿದ್ದಾಗ ತನ್ನ ದಂತ ಮುರಿದುಕೊಂಡಿದೆ. ಹಾಸನ ಸಮೀಪದ ಅರಣ್ಯ ಪ್ರದೇಶದಲ್ಲಿ ನಡೆದ ಕಾಡಾನೆಗಳ ಕಾಳಗದಲ್ಲಿ ಕಾಡಾನೆ ಭೀಮನ ದಂತ ಮುರಿದಿದೆ ಎಂದು ತಿಳಿದುಬಂದಿದೆ. ಕಳೆದ ಒಂದು ವಾರದಿಂದ ಬೇಲೂರು ತಾಲೂಕಿನ ಬಿಕ್ಕೋಡು ಹೋಬಳಿಯ ಹಲವು ಗ್ರಾಮಗಳ ಮುಖ್ಯಬೀದಿಯಲ್ಲಿ ಓಡಾಡುತ್ತಿದ್ದ ■6ನೇ ಪುಟಕ್ಕೆ

ಚಾಮುಂಡಿಬೆಟ್ಟದ ನಂದಿ ರಸ್ತೆ ತಡೆಗೋಡೆ ಕಾಮಗಾರಿ ಮತ್ತೆ ಸ್ಥಗಿತ

- ಮಡಿಕೇರಿಯಲ್ಲಿ ಇದೇ ಮಾದರಿಯ ಕಾಮಗಾರಿಯಲ್ಲಿ ಗುತ್ತಿಗೆದಾರ ನಿರತರಾಗಿರುವುದರಿಂದ ವಿಳಂಬ
- ಒಪ್ಪಂದ ರದ್ದುಗೊಳಿಸಿ, ಉಳಿಕೆ ಕಾಮಗಾರಿಗೆ ಹೊಸ ಟೆಂಡರ್ ಕರೆಯಲು ಲೋಕೋಪಯೋಗಿ ಇಲಾಖೆ ನಿರ್ಧಾರ

ಮೈಸೂರು, ನ.9(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದ ವ್ಯೂ ಪಾಯಿಂಟ್ ಮತ್ತು ನಂದಿ ಪ್ರತಿಮೆ ನಡುವೆ ಕೈಗೊಂಡಿರುವ ತಡೆಗೋಡೆ ನಿರ್ಮಾಣ ಕಾಮಗಾರಿ ಮತ್ತೆ ಸ್ಥಗಿತಗೊಂಡಿದೆ.

ಯೋಜನೆ ವಹಿಸಿಕೊಂಡಿರುವ ಗುತ್ತಿಗೆದಾರ ಕೊಡಗು ಜಿಲ್ಲೆಯ ಮಡಿಕೇರಿಯಲ್ಲೂ ಅದೇ ಮಾದರಿಯ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಇಲ್ಲಿನ ಕೆಲಸ ವಿಳಂಬವಾಗಿದೆ ಎಂದು ತಿಳಿದುಬಂದಿದ್ದು, ಎರಡೂ ಕಡೆ ಏಕಕಾಲದಲ್ಲಿ ಕಾಮಗಾರಿ ನಿರ್ವಹಿಸಲಾಗದ ಕಾರಣ ವಿಳಂಬಕ್ಕೆ ಕಾರಣವಾಗಿದೆ. ಅದರಿಂದ ಬೇಸತ್ತ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆಯಲ್ಲಿ ಪ್ರಗತಿಯಲ್ಲಿರುವ ತಡೆಗೋಡೆ ನಿರ್ಮಾಣದ ಕಾಮಗಾರಿಯ ಗುತ್ತಿಗೆದಾರನ ಸೇವೆಯನ್ನು ರದ್ದುಗೊಳಿಸಿ, ಉಳಿಕೆ ಕಾಮಗಾರಿ ಪೂರ್ಣಗೊಳಿಸಲು ಹೊಸದಾಗಿ ಟೆಂಡರ್ ಕರೆಯಲು ನಿರ್ಧರಿಸಿದ್ದಾರೆ.



ಭಾರೀ ಮಳೆಯಿಂದಾಗಿ ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆಯಲ್ಲಿ ಆಗ್ಗಿಂದಾಗ್ಗೆ ಭೂ ಕುಸಿತ ಉಂಟಾಗಿ ಹಾನಿಯಾಗುತ್ತಿದೆ. ಮೊದಲು 2019ರಲ್ಲಿ ಭೂ ಕುಸಿತ ಸಂಭವಿಸಿತ್ತು. ನಂತರ 2021ರ ಅಕ್ಟೋಬರ್ 21ರಂದು ಅದೇ ರಸ್ತೆಯಲ್ಲಿ ದೊಡ್ಡ ಭೂ ಕುಸಿತವಾಗಿತ್ತು. ಕೇವಲ ಹನ್ನೊಂದು ದಿನಗಳ ಬಳಿಕ ಅಕ್ಟೋಬರ್ 31ರಂದು ಮತ್ತೆ ಕುಸಿದಿತ್ತು. ಅದೇ ರೀತಿ 2021 ನವೆಂಬರ್ 4ರಂದು ಕೇವಲ 10 ಮೀಟರ್ ದೂರದಲ್ಲಿ ಮತ್ತೊಂದು ಭೂ ಕುಸಿತವಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ■6ನೇ ಪುಟಕ್ಕೆ

ಪರಪ್ಪನ ಅಗ್ರಹಾರ ಜೈಲಲ್ಲಿ ರಾಜಾತಿಥ್ಯ ಪ್ರಕರಣ
ಹಾಸಿಗೆ, ದಿಂಬಿಗಾಗಿ ನಟ ದರ್ಶನ್ ಕೋರ್ಟ್‌ಗೆ... ಆದ್ರೆ ಇವ್ರಿಗೆ ಎಲ್ಲಾ ಸುಲಭವಾಗಿ ಸಿಗುತ್ತೆ...

ಜೈಲಾಧಿಕಾರಿಗಳ ವಿರುದ್ಧ ಪರಮೇಶ್ವರ್ ಗರಂ

- ವರದಿ ನೀಡುವಂತೆ ಎಡಿಜಿಪಿ ದಯಾನಂದ ಅವರಿಗೆ ಸೂಚನೆ
- ವರದಿ ಸೂಕ್ತವಿಲ್ಲದಿದ್ದರೆ ತನಿಖೆಗೆ ಸಮಿತಿ

ಬೆಂಗಳೂರು, ನ.9– ನಟ ದರ್ಶನ್ ಅವರಿಗೆ ಒಂದು ಹಾಸಿಗೆ, ದಿಂಬು ತೆಗೆದುಕೊಳ್ಳಲು ಕೋರ್ಟಿಗೆ ಹೋಗಬೇಕಾಗುತ್ತದೆ. ಆದರೆ ಇವರಿಗೆ ಎಲ್ಲವೂ ಬಹಳ ಸುಲಭವಾಗಿ ಸಿಗುತ್ತಿದೆ.ಇವೆಲ್ಲವನ್ನೂ ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಜೈಲು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.



ಡಾ.ಜಿ.ಪರಮೇಶ್ವರ್

ಈ ಕುರಿತು ಇಂದು ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಈಗ ವೈರಲ್ ಆಗಿರುವುದು ಹಳೆ ವಿಡಿಯೋ ಆದರೂ, ಹೊಸ ವಿಡಿಯೋ ಆದರೂ ಸರಿಯೇ. ಈ ರೀತಿ ನಡೆಯಬಾರದು ಎಂಬುದು ನಮ್ಮ ಉದ್ದೇಶ. ಈ ಬಗ್ಗೆ ವರದಿ ನೀಡಲು ಎಡಿಜಿಪಿ ದಯಾನಂದ್ ಅವರಿಗೆ ಹೇಳಿದ್ದೇನೆ. ಪೊಲೀಸರು ಕೊಡುವ ವರದಿ ಸೂಕ್ತ ಎನಿಸಿಲ್ಲ ಎಂದರೆ ತನಿಖೆಗೆ ಸಮಿತಿಯೊಂದನ್ನು ನೇಮಕ ಮಾಡುತ್ತೇವೆ. ಈ ಸಂಬಂಧ ನಾನೇ ಅಧಿಕಾರಿಗಳ ಸಭೆ ಕರೆಯುತ್ತೇನೆ, ನಾವು ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ತಿಳಿಸಿದರು.

ಈ ಹಿಂದೆ ಕೂಡ ಈ ರೀತಿ ಆದ ವೇಳೆ ಬೆಂಗಳೂರು, ಬೆಳಗಾವಿಯಲ್ಲಿ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡಿದ್ದೇವೆ, ಹಲವಾರು ಅಧಿಕಾರಿಗಳನ್ನು ನಾವು ಸಸ್ಪೆಂಡ್ ಕೂಡ ಮಾಡಿದ್ದೆವು. ಪದೇ ಪದೆ ಈ ರೀತಿ ಆಗುತ್ತಿದೆ. ಇದಕ್ಕೆ ಯಾರು ಹೊಣೆ ಆಗಬೇಕು? ಯಾರ ವಿರುದ್ಧ ಕ್ರಮಕೈಗೊಳ್ಳಬೇಕು? ಯಾರು ಉಸ್ತುವಾರಿ ಇದ್ದಾರೆ ಅವರ ವಿರುದ್ಧ ಕ್ರಮ ಆಗಲೇಬೇಕು. ಎಂದು ತಿಳಿಸಿದರು.

ಸರಗೂರು ಬಳಿ ಮಧ್ಯರಾತ್ರಿ ಕೂಂಬಿಂಗ್‌ನಲ್ಲಿ ಹುಲಿ ಸೆರೆ
ಬೇಟೆಗಾರರ ಉರುಳಿಗೆ ಸಿಲುಕಿ ಕೊರಳಲ್ಲಿ ಗಾಯಗೊಂಡಿರುವ ಗಂಡು ಹುಲಿ

ಮೈಸೂರು, ನ.9(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಜನ–ಜಾನುವಾರುಗಳ ಮೇಲೆ ದಾಳಿ ಮಾಡುತ್ತಿದ್ದ ಹುಲಿಯನ್ನು ಕೊನೆಗೂ ಅರಣ್ಯ ಇಲಾಖೆ ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ಬೇಟೆಗಾರರ ಉರುಳಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡು ಬೇಟೆಯಾಡುವ ಶಕ್ತಿ ಕಳೆದುಕೊಂಡ ಹಿನ್ನೆಲೆಯಲ್ಲಿ ಹುಲಿ ಜನ–ಜಾನುವಾರುಗಳ ಮೇಲೆರಗುತ್ತಿತ್ತು ಎಂದು ಅಂದಾಜಿಸಲಾಗಿದೆ.

ಸರಗೂರು ತಾಲೂಕಿನ ಹಳೆ ಹೆಗ್ಗುಡಿಲು ಗ್ರಾಮದ ಬಳಿ ನ.7ರಂದು ದಂಡನಾಯಕ ಅಲಿಯಾಸ್ ಚೌಡನಾಯಕ(42) ಎಂಬುವರ ಮೇಲೆ ದಾಳಿ ನಡೆಸಿದ್ದ ಸ್ಥಳದಿಂದ ಒಂದು ಕಿ.ಮಿ ದೂರದಲ್ಲಿ 12ರಿಂದ 13 ವರ್ಷದ ಗಂಡು ಹುಲಿಯನ್ನು ಅರಣ್ಯ ಸಿಬ್ಬಂದಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಸೆರೆ ಸಿಕ್ಕಿರುವ ಹುಲಿಯ ಕೊರಳಿಗೆ ಉರುಳು ಸುತ್ತಿಕೊಂಡು ಕೊರೆತ ಉಂಟಾಗಿ ಗಾಯಗೊಂಡಿದೆ. ಬೇಟೆಗಾರರು ಕಾಡಂದಿ ಸೇರಿದಂತೆ ಯಾವುದೋ ಪ್ರಾಣಿಯ ಬೇಟೆಗಾಗಿ ಇಟ್ಟಿದ್ದ ಉರುಳಿಗೆ ಹುಲಿ ಸಿಲುಕಿದ್ದು, ಅದನ್ನು ಬಿಡಿಸಿಕೊಳ್ಳಲು ಹುಲಿ ಸೆಣಸಾಟ ನಡೆಸಿರುವುದರಿಂದ ಹುಲಿಯ ಕೊರಳಿನ ಸುತ್ತ ಕೊರೆತವಾಗಿದೆ. ಸುಮಾರು ಒಂದೂವರೆ ತಿಂಗಳಿಂದ ಹುಲಿ ಕೊರಳಿನ ಗಾಯದಿಂದ ಬಳಲುತ್ತಿದ್ದು, ಅಲ್ಲದೆ ಗಾಯ ಗ್ಯಾಂಗ್ರಿನ್ ಸ್ವರೂಪ ಪಡೆದು ಹುಲಿ ಜೀವಕ್ಕೆ ಅಪಾಯ ತಂದೊಡ್ಡಿದೆ. ಆ ಕಾರಣದಿಂದ ನೈಸರ್ಗಿಕವಾಗಿ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಸಾಧ್ಯವಾಗದೆ ಕಾಡಂಚಿನ ಗ್ರಾಮಗಳ ಹೊಲದಲ್ಲಿ ಮೇಯುತ್ತಿದ್ದ ಜಾನುವಾರುಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡುವ ಪರಿಪಾಠ ಹೊಂದಿದ್ದು, ನ.7ರಂದು ಉಳುಮೆ ಮಾಡುತ್ತಿದ್ದ ರೈತ ದಂಡನಾಯಕ ಅವರನ್ನು ಹಿಂಭಾಗದಿಂದ ದಾಳಿ ಮಾಡಿ ಹತ್ಯೆ ಮಾಡಿತ್ತು.



ಸರಗೂರು ತಾಲೂಕಿನ ಹಳೆ ಹೆಗ್ಗುಡಿಲು ಗ್ರಾಮದ ಕಾಡಂಚಿನಲ್ಲಿ ಸೆರೆ ಸಿಕ್ಕ ಹುಲಿ.

ಸೆರೆ ಸಿಕ್ಕಿರುವ ಹುಲಿ ದಂಡನಾಯಕರ ಮೇಲೆ ದಾಳಿ ಮಾಡಿರುವ ಹುಲಿ ಎಂದು ಬಹುತೇಕ ಖಚಿತವಾಗಿದ್ದರೂ, ವೈಜ್ಞಾನಿಕ ತಪಾಸಣೆಗಾಗಿ ■6ನೇ ಪುಟಕ್ಕೆ

ಮೂವರ ಬಲಿ ಪಡೆದಿದ್ದ ಹುಲಿ

- ಅರಣ್ಯ ಸಚಿವರಿಗೆ ಅಧಿಕಾರಿಗಳ ಮಾಹಿತಿ
- ಖಚಿತಪಡಿಸಿಕೊಳ್ಳಲು ಡಿಎನ್‌ಎ ಪರೀಕ್ಷೆಗೆ ಸೂಚನೆ

ಬೆಂಗಳೂರು, ನ.9(ಎಂಟಿವೈ)– ಸರಗೂರು ತಾಲೂಕಿನಲ್ಲಿ ಪದೇ ಪದೆ ಜನರ ಮೇಲೆ ದಾಳಿ ಮಾಡಿ ಜನ, ಜಾನುವಾರುಗಳ ಸಾವಿಗೆ ಕಾರಣವಾಗಿದ್ದ ಗಂಡು ಹುಲಿಯನ್ನು ಸೆರೆ ಹಿಡಿಯಲಾಗಿದೆ ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಮೂವರ ಮೇಲೆ ದಾಳಿ ಮಾಡಿ, ಅವರ ಸಾವಿಗೆ ಕಾರಣವಾಗಿದ್ದ, ಈ ಹುಲಿಯನ್ನು ಸೆರೆಹಿಡಿದಿರುವುದಾಗಿ ಅರಣ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ ಅದನ್ನು ಖಚಿತಪಡಿಸಿಕೊಳ್ಳಲು ಮೃತರ ಮರಣೋತ್ತರ ಪರೀಕ್ಷೆಯ ವರದಿ ಮತ್ತು ಈ ಹುಲಿಯ ಡಿಎನ್‌ಎ ಎರಡನ್ನೂ ಉನ್ನತಾಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದ್ದಾರೆ.

ಬಂಡೀಪುರ ಮತ್ತು ನಾಗರಹೊಳೆಯ ಅರಣ್ಯದಂಚಿನಲ್ಲಿ ಹುಲಿಗಳು ಮನುಷ್ಯರು ಮತ್ತು ಜಾನುವಾರಗಳ ಮೇಲೆ ದಾಳಿ ಮಾಡುವ ಪ್ರಕರಣಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಬಂಡೀಪುರ ಮತ್ತು ನಾಗರಹೊಳೆಯ ಸಫಾರಿ ಸ್ಥಗಿತಗೊಳಿಸಿ, ಅಲ್ಲಿನ ಸಿಬ್ಬಂದಿಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. ಬಂಡೀಪುರ ಮತ್ತು ನಾಗರಹೊಳೆಯ ವಿವಿಧ ವಲಯಗಳ ಅಧಿಕಾರಿಗಳ ಜೊತೆಗೆ ಇತರ ವಲಯಗಳ ಅಧಿಕಾರಿ ಮತ್ತು ಸಿಬ್ಬಂದಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿ ಹುಲಿಯನ್ನು ಹಿಡಿದಿದ್ದಾರೆ. ಈ ಹುಲಿಗೆ ಸುಮಾರು 12–13 ವರ್ಷ ವಯಸ್ಸಾಗಿದ್ದು, ಹಲ್ಲುಗಳು ಬಲಹೀನವಾಗಿವೆ. ಹೀಗಾಗಿ ಅರಣ್ಯದಲ್ಲಿ ಸಸ್ಯಾಹಾರಿ ವನ್ಯಜೀವಿಗಳ ಬೇಟೆ ಆಡಲು ಅಶಕ್ತವಾಗಿದ್ದ ಈ ಗಂಡು ಹುಲಿ, ಪಕ್ಕದ ಗ್ರಾಮಗಳಿಗೆ ನುಗ್ಗಿ ಜನ, ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿರುವುದಾಗಿ ಈಶ್ವರ ಬಿ.ಖಂಡ್ರೆ ವಿವರಿಸಿದ್ದಾರೆ.

'ಹೊಸ ಪಲ್ಲವ', 'ಬುವಿ ನೀಡಿದ ಅರಿವು' ಕೃತಿಗಳ ಬಿಡುಗಡೆ



ಲೇಖಕರಾದ ಪ್ರೊ.ಕೆ.ಬಿ.ವೆಂಕಟೇಶ್ ರಚಿತ 'ಹೊಸ ಪಲ್ಲವ' ಹಾಗೂ ಪ್ರೊ.ಎಸ್.ಬಿ.ತೇಜ ರಚಿತ 'ಬುವಿ ನೀಡಿದ ಅರಿವು' ಕೃತಿಗಳನ್ನು ಮಾಜಿ ಸಂಸದ ಪ್ರತಾಪ್‌ಸಿಂಹ ಲೋಕಾರ್ಪಣೆಗೊಳಿಸಿದರು. ಜಾನಪದ ವಿದ್ವಾಂಸ ಡಾ.ರಾಗೌ, ಬಾದಾಮಿ ಸಿದ್ದರಾಮೇಶ್ವರ ಮಠದ ಶ್ರೀ ಮಂಜುನಾಥ ಸ್ವಾಮೀಜಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಮತ್ತಿತರರಿದ್ದರು.

ಮೈಸೂರು,ನ.9(ಎಂಕೆ)–ಲೇಖಕರಾದ ಪ್ರೊ.ಕೆ.ಬಿ.ವೆಂಕಟೇಶ್ ರಚಿತ 'ಹೊಸ ಪಲ್ಲವ' ಹಾಗೂ ಪ್ರೊ.ಎಸ್.ಬಿ. ತೇಜ ರಚಿತ 'ಬುವಿ ನೀಡಿದ ಅರಿವು' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಡಾ.ರಾಗೌ ಗುರುಗಳು ಮತ್ತು ಮಣಿ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಪ್ರತಾಪ್‌ಸಿಂಹ ಎರಡೂ ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಜಗತ್ತಿನ ಎಲ್ಲಾ ಕ್ರಾಂತಿಗಳಿಗೂ ಬರವಣಿಗೆಯೇ ಪ್ರೇರಣೆ. ನನಗೆ ರಾಜಕೀಯದಲ್ಲಿ ವೇದಿಕೆ ಸೃಷ್ಟಿಸಿದ್ದೆ ಬರವಣಿಗೆ. ಅತೀ ದೊಡ್ಡ ಶಕ್ತಿಯುಳ್ಳ ಬರವಣಿಗೆ ಪರಿಶ್ರಮವಿದ್ದರೆ ಮಾತ್ರವೇ ಒಲಿಯಲಿದೆ. ಬರವಣಿಗೆ ವೈಯಕ್ತಿಕವಾಗಿ ನೀಡುವ ಖುಷಿಗಿಂತ ಸಾಮಾಜಿಕವಾಗಿ ನೀಡುವ ಖುಷಿಯೇ ಹೆಚ್ಚು. ಪೋಷಕರು ಮಕ್ಕಳಿಗೆ ಆಸ್ತಿ–ಅಂತಸ್ತು ಮಾಡುವ ಮುನ್ನ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು. ವಿದ್ಯೆ ಎಂಬುದು ಕೈಯಲ್ಲಿದ್ದರೆ, ಅದರ ಬಲದಿಂದ ಜೀವನ ರೂಪಿಸಿಕೊಳ್ಳುತ್ತಾರೆ. ಮಕ್ಕಳನ್ನು ಓದಿಗೆ ಹಚ್ಚಬೇಕು. ಹಾಗಾಗಿ ನನ್ನ ಮೂಲ ನಿಷ್ಠೆ, ಕೃತಜ್ಞತೆ ಬರವಣಿಗೆ ಮೇಲಿದೆ ಎಂದರು.

ಜಾನಪದ ವಿದ್ವಾಂಸ ಡಾ.ರಾಗೌ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಾದಾಮಿ ಸಿದ್ದರಾಮೇಶ್ವರ ಮಠದ ಶ್ರೀ ಮಂಜುನಾಥ ಸ್ವಾಮೀಜಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ವಿದ್ಯಾಶ್ರಮ ಪದವಿ ಕಾಲೇಜು ಪ್ರಾಂಶುಪಾಲರಾದ ಎ.ಎಂ.ಋಷಿ, ಹಿರಿಯ ಪ್ರಾಧ್ಯಾಪಕ ಡಾ.ಬಿ.ಎಸ್.ಸುಬ್ರಹ್ಮಣ್ಯ, ಮಣಿ ಪ್ರಕಾಶನದ ಮಂಜೇಗೌಡ ಮತ್ತಿತರರಿದ್ದರು.

ಬದಲಾದ ಜೀವನದಿಂದ ಭಾರತ ಮಧುಮೇಹಿಗಳ ರಾಜಧಾನಿಯಾಗುತ್ತಿದೆ

● ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಆತಂಕ ● ಮೈಸೂರಲ್ಲಿ ಸಂಯೋಜನಂ–2025ರ ರಾಷ್ಟ್ರೀಯ ಸಮ್ಮೇಳನ ಸಮಾರೋಪ

ಮೈಸೂರು,ನ.9(ಎಸ್‌ಪಿಎನ್)–ಪ್ರಸ್ತುತ ಭಾರತದ ದೊಡ್ಡದೊಡ್ಡ ನಗರಗಳ ಜೀವನ ಶೈಲಿ ಬದಲಾಗಿದ್ದು, ಬಹುತೇಕ ಜನರು ಮಧುಮೇಹ, ರಕ್ತದೊತ್ತಡ ಸೇರಿದಂತೆ ಇತರೆ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ತಜ್ಞರ ಪ್ರಕಾರ 'ಭಾರತ ಮಧುಮೇಹಿ'ಗಳ ರಾಜಧಾನಿಯೆಂದೇ ಜಗತ್ತಿನಲ್ಲಿ ಪ್ರಸಿದ್ಧಿ ಪಡೆಯುತ್ತಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ಮುಕ್ತ ವಿವಿ ಆವರಣದ ಘಟಿಕೋತ್ಸವ ಭವನದಲ್ಲಿ ಕನ್ನಡ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಸುಶ್ರುತ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಹಾಗೂ ವಿಶ್ವ ಆಯುರ್ವೇದ ಪರಿಷತ್ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಸಂಯೋಜನಂ–2025'ರ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ವಿಶ್ವದ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಜನರು ಚಯಾಪಚಯ (ಮೆಟಾಬೋಲಿಕ್) ಅಸಮತೋಲನದಿಂದ ಬಳಲುತ್ತಿದ್ದಾರೆ. ಈ ಪರಿಸ್ಥಿತಿಯು ಭಾರತದಲ್ಲಿಯೂ ಕಳವಳಕಾರಿಯಾಗಿದೆ ಎಂದರು.

ವೈದ್ಯಕೀಯ ಶಾಖೆಯ ಜನಕ: ಆಚಾರ್ಯ ಚರಕರನ್ನು ಆಯುರ್ವೇದ ವೈದ್ಯಕೀಯ ಶಾಖೆಯ ಜನಕ ಎಂದು ಪರಿಗಣಿಸಲಾಗಿದೆ. ಅವರು ಚರಕ ಸಂಹಿತವನ್ನು ಬರೆದಿದ್ದಾರೆ. ಇದು ರೋಗ ನಿರ್ಣಯ, ಚಿಕಿತ್ಸೆ, ಔಷಧೀಯ ಗುಣಗಳು, ಆಹಾರ ಪದ್ಧತಿಗಳು, ಜೀವನ ಶೈಲಿಯ ತತ್ವಗಳ ವಿವರಣೆಯನ್ನು ಒದಗಿಸುತ್ತದೆ. ಅವರು ರೋಗಕ್ಕಿಂತ ಮೊದಲು ಆರೋಗ್ಯವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಪರಿಚಯಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಜಾಗತ್ತಿನಲ್ಲೆಡೆ ಬೇಡಿಕೆ ಹೆಚ್ಚುತ್ತಿದೆ: ಈಗಿನ ಜಗತ್ತಿನಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಹೆಚ್ಚಿನ ಬೇಡಿಕೆಯಿದೆ. ಆಧುನಿಕ ಜೀವನ ಶೈಲಿ, ಅನಿಯಮಿತ ಆಹಾರ ಪದ್ಧತಿ ಮತ್ತು ಪರಿಸರ ಅಸಮತೋಲನದ ಒತ್ತಡಗಳ ನಡುವೆ, ಆಯುರ್ವೇದವು ಸಮತೋಲಿತ ಜೀವನಕ್ಕೆ ಒಂದು ಮಾರ್ಗಸೂಚಿ ಕಲ್ಪಿಸುತ್ತದೆ ಎಂಬ ಭಾವನೆ ಭಾರತೀಯರಲ್ಲಿ ಮೂಡಿದೆ. ಇದು ರೋಗ ಚಿಕಿತ್ಸೆಗೆ ಮಾತ್ರವಲ್ಲದೆ ರೋಗ ತಡೆಗಟ್ಟುವಿಕೆ ಮತ್ತು ಸಮಗ್ರ ಆರೋಗ್ಯಕ್ಕೂ ಒತ್ತು ನೀಡುತ್ತದೆ ಎಂದು ಪ್ರತಿಪಾದಿಸಿದರು.

ಶಸ್ತ್ರಚಿಕಿತ್ಸೆಯ ಪಿತಾಮಹ: ಸುಶ್ರುತಾಚಾರ್ಯರನ್ನು 'ಶಸ್ತ್ರಚಿಕಿತ್ಸೆಯ ಪಿತಾಮಹ' ಎಂದು ಪರಿಗಣಿಸಲಾಗುತ್ತದೆ. ಅವರ ಸುಶ್ರುತ ಸಂಹಿತ, ನೇತ್ರವಿಜ್ಞಾನ, ಮೂಳೆ ಚಿಕಿತ್ಸೆ ಮತ್ತು ದಂತವೈದ್ಯಶಾಸ್ತ್ರ ಸೇರಿದಂತೆ ಶಸ್ತ್ರಚಿಕಿತ್ಸೆಯ ವಿವರಣೆಗಳನ್ನು ಒದಗಿಸುತ್ತದೆ. ಇಬ್ಬರೂ ಆಚಾರ್ಯ(ಆಚಾರ್ಯ ಚರಕ ಮತ್ತು ಸುಶ್ರುತಾಚಾರ್ಯ)ರು ಒಟ್ಟಾಗಿ ಆಯುರ್ವೇದಕ್ಕೆ ವೈಜ್ಞಾನಿಕ, ತಾತ್ವಿಕ ಮತ್ತು ಪ್ರಾಯೋಗಿಕ ವೈದ್ಯಕೀಯ ವ್ಯವಸ್ಥೆಯ ರೂಪವನ್ನು ನೀಡಿದರು. ಈ ಸಮ್ಮೇಳನದ ಮೂಲಕ ಸಮಾಜದಲ್ಲಿ ಆರೋಗ್ಯಕರ ಜೀವನಶೈಲಿ ಮತ್ತು ಜಾಗೃತಿ ಸಂದೇಶವನ್ನು ಹರಡಲು ಸಾಧ್ಯವಾದರೆ, ಅದು ಅದರ ದೊಡ್ಡ ಯಶಸ್ಸಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆರೋಗ್ಯ ಯೋಜನೆಗಳು ಜನರಿಗೆ ತಲುಪಲಿ: ವೈದ್ಯಕೀಯ ಸಂಶೋಧನೆಯ ಜೊತೆಗೆ, ನೀತಿ ನಿರೂಪಣೆ ಮತ್ತು ಸಾರ್ವಜನಿಕ ಆರೋಗ್ಯವು ಪ್ರಮುಖ ಪಾತ್ರ ವಹಿಸುತ್ತದೆ. ರಾಷ್ಟ್ರೀಯ ಸಾಂಕ್ರಾಮಿಕವಲ್ಲದ ರೋಗ ನಿಯಂತ್ರಣ ಕಾರ್ಯಕ್ರಮ, ಫಿಟ್ ಇಂಡಿಯಾ ಆಂದೋಲನ ಮತ್ತು ಈಟ್ ರೈಟ್ ಇಂಡಿಯಾದಂತಹ ಸರ್ಕಾರಿ ಅಭಿಯಾನಗಳು ಈ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಯೋಜನೆಗಳು ಯಶಸ್ವಿಯಾಗಲು ಸಾರ್ವಜನಿಕರ ಪಾಲ್ಗೊಳ್ಳುವಿಕೆ ಬಹುಮುಖ್ಯ. ಹಾಗಾಗಿ ಶಾಲಾ–ಕಾಲೇಜುಗಳು, ಸರ್ಕಾರಿ ಕಚೇರಿಗಳು ಮತ್ತು ಸಮುದಾಯಗಳಲ್ಲಿ ಆಯುರ್ವೇದ ಆರೋಗ್ಯ ಶಿಕ್ಷಣವನ್ನು ಉತ್ತೇಜಿಸಬೇಕು. ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಅಗತ್ಯವಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ವರಾಹಮಿಹಿರ್, ಸುಧಾರಿತ ವೇದಿಕ್ ತಂತ್ರಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ರಾಮಚಂದ್ರ ಜಿ. ಭಟ್, ಬೆಂಗಳೂರಿನ ಎಸ್ ವ್ಯಾಸ, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ.ಭಾಷ್ಯಂ ಸ್ವಾಮೀಜಿ, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲ್ಸೆ, ಆರ್‌ಜಿಯುಎಚ್‌ಎಸ್ ಕುಲಪತಿ ಡಾ.ಬಿ.ಸಿ.ಭಗವಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



'ಸಂಯೋಜನಂ–2025' ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಸನ್ಮಾನಿಸಲಾಯಿತು.

ರೋಗಗಳ ತಡೆಗಟ್ಟುವಿಕೆ ಅತೀಮುಖ್ಯ

"ಚಯಾಪಚಯ ಅಸ್ವಸ್ಥತೆಗಳು(ಮೆಟಾಬೋಲಿಕ್ ಡಿಸಾರ್ಡರ್) ಎಂಬ ಅರ್ಥಪೂರ್ಣ ಮತ್ತು ದೂರದೃಷ್ಟಿಯ ವಿಷಯದ ಕುರಿತು ರಾಷ್ಟ್ರೀಯ ಸಮ್ಮೇಳನ ಸಂಯೋಜನಂ 2025ಕ್ಕೆ ಯಶಸ್ಸು ಸಿಗಲಿ ಎಂದು ಆಶಿಸುತ್ತೇನೆ. ಈ ಸಮ್ಮೇಳನವನ್ನು ಕೇಂದ್ರೀಕರಿಸಿದ ವಿಷಯವು ವೈದ್ಯಕೀಯ ಜಗತ್ತಿಗೆ ಮತ್ತು ಇಡೀ ಸಮಾಜಕ್ಕೆ ಬಹಳ ಪ್ರಸ್ತುತವಾಗಿದೆ. ಚಯಾಪಚಯ ಅಸ್ವಸ್ಥತೆಗಳು ಇಂದಿನ ಅತಿದೊಡ್ಡ ಆರೋಗ್ಯ ಸವಾಲುಗಳಲ್ಲಿ ಒಂದಾಗಿವೆ. ಮಧುಮೇಹ, ಬೊಜ್ಜು, ಥೈರಾಯ್ಡ್ ಅಸ್ವಸ್ಥತೆಗಳು, ಅಧಿಕ ರಕ್ತದೊತ್ತಡ, ಹೃದ್ರೋಗ–ಈ ಎಲ್ಲಾ ಸಮಸ್ಯೆಗಳು ನಮ್ಮ ಆಧುನಿಕ ಜೀವನಶೈಲಿ, ಒತ್ತಡ ಮತ್ತು ಅನಿಯಮಿತ ಆಹಾರ ಪದ್ಧತಿಗಳೊಂದಿಗೆ ಸಂಬಂಧ ಹೊಂದಿವೆ.

–ಥಾವರ್‌ಚಂದ್ ಗೆಹ್ಲೋಟ್, ರಾಜ್ಯಪಾಲರು

ಶಾಸಕ ತನ್ವೀರ್ ಸೇಠ್‌ಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಪತ್ರ ಚಳುವಳಿ



ಶಾಸಕ ತನ್ವೀರ್ ಸೇಠ್‌ಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಮೈಸೂರಿನ ಗಾಂಧಿಚೌಕ ಬಳಿ ಪತ್ರ ಚಳುವಳಿ ನಡೆಸಲಾಯಿತು.

ಮೈಸೂರು,ನ.9(ಜಿಎ)–ಶಾಸಕ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಮೈಸೂರಿನ ಗಾಂಧಿ ಚೌಕ ಬಳಿ ಪತ್ರ ಚಳುವಳಿ ನಡೆಸಲಾಯಿತು.

ಈ ವೇಳೆ ಮಾಧ್ಯಮಗಳೊಂದಿಗೆ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಎಸ್.ರಾಜೇಶ್ ಮಾತನಾಡಿ, 6 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ತನ್ವೀರ್ ಸೇಠ್ ಅವರು ಎನ್.ಆರ್. ಕ್ಷೇತ್ರದಲ್ಲಿ ಜನಪರವಾಗಿ ಕೆಲಸ ಮಾಡುತ್ತಿದ್ದು, ಕೋಮು ಸಂಘರ್ಷಕ್ಕೆ ಅವಕಾಶ ನೀಡದೇ ಆಡಳಿತ ನಡೆಸುತ್ತಿದ್ದಾರೆ. ವಸತಿ ನಿಲಯಗಳು, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅನುಕೂಲಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಈ ಎಲ್ಲಾ ಮಾನದಂಡಗಳ ಮೇಲೆ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಪತ್ರದ ಮೂಲಕ ಕಾಂಗ್ರೆಸ್ ಹೈಕಮಾಂಡ್ ಅನ್ನು ಆಗ್ರಹಿಸುತ್ತೇವೆ ಎಂದು ತಿಳಿಸಿದರು.

ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ಪ್ರದೀಪ್‌ಚಂದ್ರು, ಸತ್ಯರಾಜ್, ಯೂತ್ ಕಾಂಗ್ರೆಸ್ ಕಾರ್ಯದರ್ಶಿ ಪ್ರತಾಪ್, ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ರಾಸೂಲ್, ಹಿರಿಯ ಉಪಾಧ್ಯಕ್ಷ ರಾಮು ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿಯವರು ರಾಜ್ಯದ ಅಭಿವೃದ್ಧಿ ವಿರೋಧಿಗಳು

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿ



ಮೈಸೂರು,ನ.9(ಜಿಎ)–ಬಿಜೆಪಿಯವರು ರಾಜ್ಯದ ಅಭಿವೃದ್ಧಿಯ ವಿರೋಧಿಗಳು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿಕಾರಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನದಿಂದ ದಿನಕ್ಕೆ ವಾಹನ ದಟ್ಟಣೆ ಹೆಚ್ಚಳಗೊಂಡಿದ್ದು, ಮುಂದಿನ ಹತ್ತು ವರ್ಷದಲ್ಲಿ ದುಪ್ಪಟಾಗಲಿರುವ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಗಮ ಸಂಚಾರಕ್ಕೆ ಅನುವಾಗುವಂತೆ ನಗರದಲ್ಲಿ ಎರಡು ಫ್ಲೈಓವರ್ ನಿರ್ಮಾಣ ಮಾಡಲು ಪಿಡಬ್ಲ್ಯುಡಿಗೆ ಸೂಚಿಸಿದ್ದಾರೆ. ಆದರೆ, ಬಿಜೆಪಿ ಅವರು ಮೈಸೂರಿನ ಅಭಿವೃದ್ದಿಗೆ ಅಡ್ಡಿಪಡಿಸುವ ಮೂಲಕ ಅಭಿವೃದ್ದಿ ವಿರೋಧಿಗಳಂತೆ ವರ್ತಿಸುತ್ತಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದ 2013ರಿಂದ 18ರ ಅವಧಿಯಲ್ಲಿ ಮೈಸೂರು ನಗರ ಅಭಿವೃದ್ಧಿಗೆ 3,200 ಕೋಟಿ ರೂ. ನೀಡಿದ್ದು, 2023ರಿಂದ 25ರವರೆಗೆ 3,500 ಕೋಟಿ ಅನುದಾನ ನೀಡಿ ಮೈಸೂರಿನ ಅಭಿವೃದ್ಧಿಗೆ ದೊಡ್ಡ ದೊಡ್ಡ ಯೋಜನೆಗಳನ್ನು ತರುತ್ತಿದ್ದಾರೆ. ಆದರೆ, ಅವರ ಉತ್ತಮ ಕೆಲಸವನ್ನು ಸಹಿಸದೇ ಬಿಜೆಪಿಯವರು ಅವರನ್ನು ತೇಜೋವಧೆ ಮಾಡುತ್ತಿದ್ದಾರೆ ಎಂದು ಎಂ.ಲಕ್ಷ್ಮಣ್ ಆರೋಪಿಸಿದರು.

ಬಿಜೆಪಿಯವರು ಕೇಂದ್ರದಿಂದ ಕಳೆದ 11 ವರ್ಷದಲ್ಲಿ ಮೈಸೂರು ನಗರ ಮತ್ತು ಜಿಲ್ಲೆ ಹಾಗೂ ಕೊಡಗು ಅಭಿವೃದ್ದಿಗೆ 5 ರೂ. ತಂದಿಲ್ಲ. ಈ ಹಿಂದಿನ ಸಂಸದರು ಕೋಮು ಸೌಹಾರ್ದತೆ ಕದಡುವುದು, ಸುಳ್ಳು ಹೇಳುವುದನ್ನೇ ಕೆಲಸ ಮಾಡಿಕೊಂಡ ಹಿನ್ನೆಲೆಯಲ್ಲಿ ಟಿಕೆಟ್ ತಪ್ಪಿತು. ಮೈಸೂರು ಮಹಾರಾಜ ಎಂಬ ಕಾರಣಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಟಿಕೆಟ್ ನೀಡಲಾಗಿದ್ದು, ಅವರು ಸಂಸದರಾಗಿದ್ದಾರೆ. ಆದರೆ, ಅವರು ರಾಜ್ಯದ ಅಭಿವೃದ್ದಿಗೆ ಸಹಕಾರ ನೀಡುವುದಿಲ್ಲ. ಮತ್ತೊಂದೆಡೆ ಅವರು ಗೆದ್ದು 18 ತಿಂಗಳು ಕಳೆದರೂ ಕ್ಷೇತ್ರಕ್ಕೆ 18 ರೂ. ಅನ್ನು ತಂದಿಲ್ಲ. ಪಾರಂಪರಿಕತೆಗೆ ಧಕ್ಕೆ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಈ ಯೋಜನೆಗಳು ಅರಮನೆ ಮೇಲೆ, ಪಕ್ಕದಲ್ಲಿ ಮಾಡುತ್ತಿಲ್ಲ ಎಂದ ಲಕ್ಮಣ್, ವಾಹನದಟ್ಟಣೆಯಿಂದ ಸುಗಮ ಸಂಚಾರಕ್ಕೆ ನೀವೇ(ಸಂಸದರು) ಪರಿಹಾರ ನೀಡಿ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ಅವಧಿ ಮುಗಿದ ನಂತರ ಮುಂದಿನ 55 ವರ್ಷದವರೆಗೂ ಮೈಸೂರು ಭಾಗದಿಂದ ಯಾರೂ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಮೈಸೂರಿನ ಬಗ್ಗೆ ವಿಶೇಷ ಕಾಳಜಿ ಇರುವ ಹಿನ್ನೆಲೆಯಲ್ಲಿ ನಗರಕ್ಕೆ ದೊಡ್ಡ ಯೋಜನೆಗಳು, ಆಸ್ಪತ್ರೆ ನಿರ್ಮಾಣಗಳನ್ನು ಮಾಡಿರುವ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸೇರುತ್ತದೆ. ಅವರು ಇರುವವರೆಗೂ ಅವರೊಟ್ಟಿಗೆ ಸಾಥ್ ನೀಡಿ ಎಂದು ಸಲಹೆ ನೀಡಿದರು.

ಮತ್ತೊಂದೆಡೆ ಬೆಂಗಳೂರಿನಲ್ಲಿ 5 ರಾಷ್ಟ್ರೀಯ ರಸ್ತೆ ಸಂಪರ್ಕಿಸುವ 190 ಕಿಮೀ ಟನಲ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಇದನ್ನು ಮಾಡಲು ಕೇಂದ್ರ ಸರ್ಕಾರಿಂದ ಪ್ರಸ್ತಾವನೆ ಬಂದಿದೆ. ಇದರಲ್ಲಿ ಕಮಿಷನ್ ಎಂಬ ಮಾತೇ ಇಲ್ಲ. ಅಶೋಕ್ ಸುಳ್ಳು ಹೇಳುವುದರಲ್ಲಿ ಪಿಹೆಚ್‌ಡಿ ಮಾಡಿದ್ದಾರೆ. ಟೋಲ್‌ಗೆ 4 ಸಾವಿರ ನೀಡಬೇಕು ಎಂದು ಹೇಳುತ್ತಾರೆ. ಆದರೆ, ಅದಕ್ಕೆ ಕೇವಲ 20 ರೂ. ಆಗುತ್ತದೆ ಅಷ್ಟೇ ಎಂದ ಅವರು, ವಿಧಾನಸೌಧದ ಕೆಳಭಾಗದಲ್ಲಿ ಟನಲ್ ನಿರ್ಮಾಣವಾಗಿದೆ. ವಿಧಾನಸೌಧಕ್ಕೆ ಯಾವುದೇ ಹಾನಿಯಾಗಿಲ್ಲ. ಹಾಗೇ ಈ ಟನಲ್ ನಿರ್ಮಾಣದಿಂದ ಲಾಲ್‌ಬಾಗ್‌ಗೂ ಯಾವುದೇ ಹಾನಿಯಾಗಲ್ಲ ಎಂದರು.

ವಿದ್ಯಾಸಿರಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪಿಯುಸಿ ಹೊರತುಪಡಿಸಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ, ಮತ್ತು ವಿದ್ಯಾಸಿರಿ ಊಟ, ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ನ.15ರಂದು ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು https://ssp.postmatric.karnataka.gov.in ಮೂಲಕ ಸಲ್ಲಿಸಬೇಕು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ಅಥವಾ ಸಹಾಯವಾಣಿ ಸಂ: 8050770005, ಇಮೇಲ್ ವಿಳಾಸ bcwdhelpline@gmail.com ಅಥವಾ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ದೂ.ಸಂ: 1902, ಇಮೇಲ್ ವಿಳಾಸ postmatrichelp @karnataka.gov.in ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಗ್ರೇಟರ್ ಮೈಸೂರ್'ನಿಂದ ರಿಯಲ್ ಎಸ್ಟೇಟ್‌ಗೆ ಲಾಭ, ಜನಸಾಮಾನ್ಯರಿಗೆ ಅನಾನುಕೂಲ

ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಎಚ್ಚರಿಕೆ



ಎಲ್.ರಂಗಯ್ಯ

ಮೈಸೂರು,ನ.9(ಜಿಎ)–ಗ್ರೇಟರ್ ಮೈಸೂರು ಯೋಜನೆ ರಿಯಲ್ ಎಸ್ಟೇಟ್‌ಗೆ ಲಾಭದಾಯಕವಾಗಿದ್ದು, ಸಾರ್ವಜನಿಕರಿಗೆ ಅನಾನುಕೂಲವಾಗಲಿದೆ. ಇದರ ಬಗ್ಗೆ ಜನಸಾಮಾನ್ಯರು ಎಚ್ಚರ ವಹಿಸಬೇಕು. ಇಲ್ಲವಾದರೆ ನಿಮ್ಮ ಬದುಕು ನರಕಕ್ಕೆ ತಳ್ಳುವುದು ಗ್ಯಾರಂಟಿ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಎಚ್ಚರಿಸಿದ್ದಾರೆ.

ಈಗಾಗಲೇ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು, ಉದ್ಯಾನವನ, ಚರಂಡಿ ವ್ಯವಸ್ಥೆ ಸರಿ ಇಲ್ಲದೇ ಸಮಸ್ಯೆಗಳ ಆಗರವಾಗಿದ್ದು, ಸರ್ಕಾರವು ಸ್ಥಳೀಯ ಚುನಾವಣೆ ನಡೆಸದೇ ಬೇಜವಾಬ್ದಾರಿಯಿಂದ ಹಾಗೂ ಸರ್ವಾಧಿಕಾರಿ ಧೋರಣೆಯಿಂದ ಆಡಳಿತ ನಡೆಸುತ್ತಿದೆ. ಇದರ ಮಧ್ಯೆ ಅಕ್ಕ ಪಕ್ಕದ ಗ್ರಾಮಗಳನ್ನು ಸೇರಿಸಿ ಗ್ರೇಟರ್ ಮೈಸೂರು ಮಾಡಲು ಮುಂದಿನ ಅಧಿವೇಶನದಲ್ಲಿ ಅನುಮೋದನೆ ನೀಡುತ್ತಾರೆ. ವಿರೋಧ ಪಕ್ಷದವರು ಮೇಲ್ನೋಟಕ್ಕೆ ವಿರೋಧ ಮಾಡುತ್ತಾ ಗ್ರೇಟರ್ ಮೈಸೂರು ಯೋಜನೆಗೆ ಸಹಕರಿಸುತ್ತಿದ್ದಾರೆ ಎಂದು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಗ್ರಾಮಾಂತರ ಪ್ರದೇಶದಲ್ಲಿರುವ ಭೂಮಿ ಈಗಾಗಲೇ ರಿಯಲ್ ಎಸ್ಟೇಟ್ ಉದ್ಯಮಿಗಳ ಕೈಯಲ್ಲಿದೆ. ಈ ರಿಯಲ್ ಎಸ್ಟೇಟ್ ಉದ್ಯಮಿಗಳು ಸರ್ಕಾರದಲ್ಲಿರುವ ರಾಜಕಾರಣಿಗಳಿದ್ದು, ಗ್ರೇಟರ್ ಮೈಸೂರ್‌ನಿಂದ ಸಾಮಾನ್ಯ ಜನರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಲಿದ್ದು, 500 ರೂ. ಕಂದಾಯ ಕಟ್ಟುವವರು 5000 ರೂ. ಕಂದಾಯ ಕಟ್ಟಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ನಿವೇಶನಗಳ ಬೆಲೆ ಗಗನಕ್ಕೇರಿ ಸಾಮಾನ್ಯ ಜನರು ನಿವೇಶನ ಖರೀದಿಸಲು ಸಾಧ್ಯವಾಗುವುದಿಲ್ಲ. ಹೊರ ರಾಜ್ಯದವರು ಮೈಸೂರಿಗೆ ಬರುತ್ತಾರೆ. ಸರ್ಕಾರದ ಭೂಮಿ, ಕೆರೆಗಳು ಎಲ್ಲವೂ ಮಾಯವಾಗುತ್ತಾ ಉತ್ಕೃಷ್ಟವಾದ ಕೃಷಿ ಭೂಮಿ ಮಾಯವಾಗುತ್ತದೆ. ಎಲ್ಲಿ ನೋಡಿದರೂ ಹಚ್ಚ ಹಸಿರು, ಮಾವು, ತೆಂಗು, ಬಾಳೆ, ಕಬ್ಬು, ಹೂವುಗಳ ತೋಟದಿಂದ ಕಂಗೊಳಿಸುತ್ತಿರುವ ಭೂಮಿ ಗ್ರೇಟರ್ ಮೈಸೂರು ಆದ ಮೇಲೆ ಎತ್ತ ನೋಡಿದರೂ ಬೃಹತ್ ಕಟ್ಟಡಗಳು, ಸರ್ಕಲ್‌ಗಳು, ಮಾಲ್‌ಗಳು, ಭವನಗಳು, ಆದರ್ಶ ವ್ಯಕ್ತಿಗಳ ಮೂರ್ತಿಗಳು, ದೇವಸ್ಥಾನ, ಮಸೀದಿ, ಚರ್ಚ್‌ಗಳು, ಹೊಗೆ, ಮಳೆಗಾಲದಲ್ಲಿ ಮನೆಯೊಳಗೆ ನೀರು ತುಂಬಿರುವುದು ಕಾಣಸಿಗುತ್ತವೆ. ಈಗಲೇ ಜನಸಾಮಾನ್ಯರು ಎಚ್ಚರ ವಹಿಸಬೇಕು. ಇಲ್ಲವಾದರೆ ನಿಮ್ಮ ಬದುಕು ನರಕಕ್ಕೆ ತಳ್ಳುವುದು ಗ್ಯಾರಂಟಿ ಎಂದು ರಂಗಯ್ಯ ಎಚ್ಚರಿಸಿದ್ದಾರೆ.

ಅಭಿನಂದನೆ...



ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಶಿಕ್ಷಣ ತಜ್ಞರು, ಚಿಂತಕರು, ದಾನಿಗಳೂ ಆದ ಮಂಗಳ ಮುದ್ದುಮಾದಪ್ಪ ಅವರನ್ನು ಸೇವಾಯಾನ ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು. ಸೇವಾಯಾನ ಸಂಸ್ಥೆಯ ಅಧ್ಯಕ್ಷೆ ಪ್ರಭಾಮಣಿ.ಎಸ್, ಶರಣ ಸಾಹಿತ್ಯ ಪರಿಷತ್ತಿನ ಚೆನ್ನಬಸಪ್ಪ ಹಾಗೂ ಇತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.11.2025 ಸೋಮವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಶ್ರೀ ವೀರಭದ್ರೇಶ್ವರ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ, ಮಧ್ಯಾಹ್ನ 12 ಗಂಟೆಗೆ ಪ್ರಾಕಾರದ ಸುತ್ತಲೂ ಉತ್ಸವ, ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ಸ್ವಾಮಿಯ ಉಯ್ಯಾಲೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಶ್ರೀ ಆವನಿ ಶೃಂಗೇರಿ ಜಗದ್ಗುರು ಶಂಕರಚಾರ್ಯ ಮಹಾ ಸಂಸ್ಥಾನಂ (ಶ್ರೀ ಆವನಿ ಶೃಂಗೇರಿ ಮಠ, ಮೈಸೂರು ಶಾಖೆ):** ಶ್ರೀ ವಿಶ್ವಾವಸು ನಾಮ ಸಂವತ್ಸರ–2025, ಕಾರ್ತಿಕ ಮಾಸದ ವಿಶೇಷ ಪೂಜೆ, ಬೆಳಗ್ಗೆ 8 ಗಂಟೆಗೆ ಮಹಾ ಸಂಕಲ್ಪ, ಅಭಿಷೇಕ ಮತ್ತು ವಿಶೇಷ ಪೂಜೆ, ಮಹಾಮಂಗಳಾರತಿ, ಸಂಜೆ 6.30ಕ್ಕೆ ಮಹಾರಾಜ ಜೂನಿಯರ್ ಕಾಲೇಜಿನ ನಿವೃತ್ತ ಉಪನ್ಯಾಸಕರಾದ ಡಾ. ನಾಗಲಕ್ಷ್ಮಿ, ಚಂದ್ರಶೇಖರ್ ಅವರಿಂದ 'ಶಿವ, ಮಹಿಮ್ನ ಸ್ತೋತ್ರಂ' ವಿಷಯ ಕುರಿತು ಉಪನ್ಯಾಸ, ರಾತ್ರಿ 8.15ಕ್ಕೆ ದೀಪಾರಾಧನೆ, ಮಹಾಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ವಿದ್ಯಾರಣ್ಯಪುರಂ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಬೆಳಗ್ಗೆ 6 ಗಂಟೆಗೆ ಶ್ರೀ ಸ್ವಾಮಿಗೆ ಮಹಾರುದ್ರಾಭಿಷೇಕ ಮತ್ತು ವಿಶೇಷ ಪೂಜೆ, ಸಂಜೆ 7 ಗಂಟೆಗೆ ಶ್ರೀ ಸ್ವಾಮಿಯ ಹುಲಿವಾಹನ ಮತ್ತು ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ–ಮೈಸೂರು), ವಿಶ್ವೇಶ್ವರಯ್ಯ ಟೆಕ್ನೋಲಜಿಕಲ್ ಯೂನಿವರ್ಸಿಟಿ (ವಿಟಿಯು, ಬೆಳಗಾವಿ):** ವಿಟಿಯು ಕನ್ಸೋರ್ಟಿಯಮ್ ಇ–ಸಂಪನ್ಮೂಲಗಳ ತರಬೇತಿ ಕಾರ್ಯಕ್ರಮ, ಸ್ಥಳ: ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಸೆಮಿನಾರ್ ಹಾಲ್, ಎನ್‌ಐಇ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಅಸ್ತಮಾ, ಉಬ್ಬಸಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಕಾಲೇಜು ಶಿಕ್ಷಣ ಇಲಾಖೆ, ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಂಸ್ಕೃತಿಕ ಸಮಿತಿ ಮತ್ತು ಕನ್ನಡ ವಿಭಾಗ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಹಬ್ಬ–2025, ಎರಡನೆಯ ರಾಜ್ಯ ಮಟ್ಟದ ಭಾವಗೀತೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ ಹಾಗೂ ಕವಿಗೋಷ್ಠಿ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯೋತ್ಸವ ಭಾಷಣ, ಗಂಗೂಬಾಯಿ ಹಾನಗಲ್ ಸಂಗೀತ ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ. ಎಂ.ಜಿ. ಮಂಜುನಾಥ್, ಮುಖ್ಯ ಅತಿಥಿ: ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಡಾ. ಡಿ.ಎಸ್. ಪ್ರತಿಮಾ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ಜಾನಪದ ಕಲಾವಿದ ಎಲ್. ಮಹದೇವಪ್ಪ ಉಡಿಗಾಲ, ಸ್ಥಳ: ಕಾಲೇಜಿನ ಆಡಿಟೋರಿಯಂ, ಕುವೆಂಪುನಗರ, ಬೆಳಗ್ಗೆ 10 ಗಂಟೆಗೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ 52 ವಾರಗಳ ಕಾಲ ನಡೆದ ಶಾಸ್ತ್ರೀಯ ಕನ್ನಡ ನಿತ್ಯೋತ್ಸವ ಅಂತರಜಾಲ ಉಪನ್ಯಾಸ ಸರಣಿಯ ಸಮಾರೋಪ ಸಮಾರಂಭ, ಉದ್ಘಾಟನೆ: ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಸಮಾರೋಪ ನುಡಿ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ, ಅಧ್ಯಕ್ಷೀಯ ನುಡಿ: ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ, ಸ್ಥಳ: ಭಾರತೀಯ ಭಾಷಾ ಸಂಸ್ಥೆಯ ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 10.30ರಿಂದ.

■ **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು, ಕನ್ನಡ ವಿಭಾಗ ಮತ್ತು ಎನ್‌ಎಸ್‌ಎಸ್ ಘಟಕ:** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ:** 'ಶ್ರೀಮತ್ ಭಾಗವತ್' ಪ್ರವಚನ, ಪಂಡಿತ್ ಬಾದರಾಮಣಾಚಾರ್ಯ ಅವರಿಂದ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ಸೂತ್ರ ಫೌಂಡೇಷನ್:** ದೃಶ್ಯ ರಾಗ ರಂಗಸಂಗಮ, ಉಚಿತ ರಂಗ ತರಬೇತಿ ಶಿಬಿರ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಸಂಜೆ 6.30ಕ್ಕೆ

■ **ಶ್ರೀ ಸಂಗಮೇಶ್ವರ ದೇವಸ್ಥಾನ:** ಕಾರ್ತಿಕ ಮಾಸ–ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವಗಳು, ಶರಣ ಚಿಂತನೆ, ದಿವ್ಯ ಸಾನ್ನಿಧ್ಯ: ಚಿದರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಉದ್ಘಾಟನೆ ಮತ್ತು ಪ್ರವಚನ: ಕೊಡಗು ವಿವಿ ಕುಲಪತಿ ಪ್ರೊ. ಅಶೋಕ್ ಎಸ್. ಆಲೂರು, ವಿಷಯ: ನಿಜಗುಣರ ಆಧ್ಯಾತ್ಮದ ನೆಲೆಗಳು, ಸುಗಮ ಸಂಗೀತ: ಶ್ರೀಮತಿ ವರಲಕ್ಷ್ಮೀ ಸುಗಮ ಸಂಗೀತ ತಂಡ (ಮೈಸೂರು), ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಮುನಿರಾಜ ರೆಂಜಾಳ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ರೋಹಿಣಿ ಸುಧಾಮ್, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 7.45 ಚಿತ್ರಗೀತೆಗಳು, 8.30–ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕವಿ ಪ್ರೊ.ಎಂ.ಅಕ್ಬರ್ ಅಲಿ ಅವರೊಂದಿಗೆ ರಾಜಶೇಖರ ಜಮದಂಡಿ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಅಕ್ಕರೈ ಸುಬ್ಬಲಕ್ಷ್ಮಿ ಹಾಡುಗಾರಿಕೆ ಮತ್ತು ವಯೋಲಿನ್ ವಾದನ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ 12.05 ವನಿತಾ ವಿಹಾರ, **ಮಧ್ಯಾಹ್ನ:** 12.35–ದೇವರನಾಮ, 12.45 ನಮ್ಮ ಆರೋಗ್ಯ ವಿಶ್ವ ಲಸಿಕಾ ದಿನದ ಸಂದರ್ಭದಲ್ಲಿ ಮಕ್ಕಳಿಗೆ ಲಸಿಕೆಗಳ ಅಗತ್ಯ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಮೈಸೂರಿನ ವಿಭಾಗೀಯ ಸಹ ನಿರ್ದೇಶಕ ಡಾ.ಮಲ್ಲಿಕಾ ಬಿ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ –ಪ್ರಧಾನಮಂತ್ರಿ ಜೀವನ್ ಜ್ಯೋತಿ, ಭಿಮಾ ಯೋಜನೆ. 1.20 ಭಾವಗೀತೆಗಳು, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್ – ಚಿತ್ರವೀಣೆ, 4.00 ಮಹಿಳಾರಂಗ ಡಾಕ್ಟರ್ ಸಮಯ – ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಸಂದರ್ಭದಲ್ಲಿ ಸ್ತನ ಕ್ಯಾನ್ಸರ್ ಕುರಿತು ಕನ್ಸಲ್ಟೆಂಟ್ ರೇಡಿಯೇಷನ್ ಆಂಕಾಲಜಿಸ್ಟ್ ಡಾ.ಮೇಖಲಾ ಶ್ವೇತಾದ್ರಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ದಿಗ್ವಿಜಯ್.ಬಿ, 4.30–ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ –ಪ್ರಸ್ತುತಿ : ಶಾಂತಾ.ಡಿ.ಕಿಣಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ವಿ.ಸಿ. ಫಾರಂ ಕೃಷಿಮೇಳದ ವೈಶಿಷ್ಟ್ಯತೆಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ –ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕ ಡಾ.ಬಿ.ಎಸ್.ಬಸವರಾಜ್ ಹಾಗೂ ಪ್ರಾಧ್ಯಾಪಕ ಡಾ.ವಿ.ಬಿ.ಸನತ್‌ಕುಮಾರ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಸಹೋದರಿಯರ ಯುಗಳ ಹಾಡುಗಾರಿಕೆ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30–ಸವಿನೆನಪು.

ಬಿಪಿಎಲ್ ಕಾರ್ಡ್ ಹೊಂದಿರುವ 75 ವರ್ಷ ಮೇಲ್ಪಟ್ಟ ಒಬ್ಬಂಟಿ ಹಿರಿಯ ನಾಗರೀಕರ ಮನೆಗೇ ಪಡಿತರ ಕಿಟ್

ಎಂಜಿಪಿ ಸಂವಾದದಲ್ಲಿ ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಮಾಹಿತಿ



ಡಿ.24ರ ಗ್ರಾಹಕರ ದಿನಾಚರಣೆ ಕುರಿತು ಜಾಗೃತಿ ಮೂಡಿಸುವ ಪೋಸ್ಟರ್ ಬಿಡುಗಡೆಗೊಳಿಸುತ್ತಿರುವುದು.

ಮೈಸೂರು, ನ.9(ಎಸ್‌ಪಿಎನ್)– ಬಿಪಿಎಲ್ ಕಾರ್ಡ್ ಇರುವ 75 ವರ್ಷ ಮೇಲ್ಪಟ್ಟ ಹಿರಿಯರಿ(ಒಬ್ಬಂಟಿಗರಿಗೆ)ಗೆ ಪಡಿತರ ಕಿಟ್ ಅನ್ನು ಮನೆಗೆ ತಲುಪಿಸುವ 'ಅನ್ನ ಸುವಿದಾ' ಯೋಜನೆಯನ್ನು ಈ ತಿಂಗಳಿಂದಲೇ ರಾಜ್ಯ ಸರ್ಕಾರ ಜಾರಿಗೊಳಿಸಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಮಂಟೆಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ಮಾಸಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ 'ಆಹಾರ ಇಲಾಖೆಯ ಪಡಿತರ ವಿತರಣೆ ಅನುಷ್ಠಾನ ಕುರಿತು' ಸಂವಾದದಲ್ಲಿ ಭಾಗವಹಿಸಿ ಮಾತನಾಡಿದರು.

75 ವರ್ಷ ಮೇಲ್ಪಟ್ಟ ಹಿರಿಯರು ಒಬ್ಬಂಟಿಯಾಗಿರುವವರನ್ನು ಗುರುತಿಸಿ ಪಡಿತರ ಸಾಮಾಗ್ರಿಗಳನ್ನು ಅವರ ಮನೆಗೆ ತಲುಪಿಸಲು ಆಹಾರ ಇಲಾಖೆ 'ಅನ್ನ ಸುವಿದಾ' ಜಾರಿಗೊಳಿಸಿದೆ. ಇದರಿಂದ ರಾಜ್ಯದಲ್ಲಿ ಒಬ್ಬರೂ ಹಸಿವಿನಿಂದ ಬಳಲದಂತೆ ನೋಡಿಕೊಳ್ಳುವುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕೆ ಆಹಾರ ಇಲಾಖೆ ಕೈ ಜೋಡಿಸಿದೆ. ಅಲ್ಲದೆ, ಹಿರಿಯರು ಒಬ್ಬಂಟಿ ಜೀವನ ನಡೆಸುವವರಿದ್ದು, ಅವರಿಗೆ ನ್ಯಾಯಬೆಲೆ ಅಂಗಡಿಗಳಿಗೆ ಹೋಗಿ ಪಡಿತರ ಪಡೆಯಲು ಸಾಧ್ಯವಿಲ್ಲದವರಿಗೆ 'ಅನ್ನ ಸುವಿದಾ' ಯೋಜನೆ ಸಹಕಾರಿಯಾಗಲಿದೆ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ಡಿ.24 ರಂದು ಗ್ರಾಹಕರ ದಿನಾಚರಣೆ: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಮತ್ತು ಮೈಸೂರು ಗ್ರಾಹಕರ ಪರಿಷತ್ ಸಹಯೋಗದೊಂದಿಗೆ ಈ ಬಾರಿ ಡಿ.24 ಮತ್ತು ಮಾರ್ಚ್ ತಿಂಗಳಲ್ಲಿ ಗ್ರಾಹಕರ ಹಕ್ಕು ಕುರಿತು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಹಕರ ಹಕ್ಕುಗಳ ರಕ್ಷಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉತ್ತಮ ಕಾಯ್ದೆಯನ್ನು ರೂಪಿಸಿವೆ ಇದರ ಕುರಿತು ಯುವಕರು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಯಾವುದೇ ಅಂಗಡಿ, ಮಾಲ್‌ಗಳಲ್ಲಿ ಸಾಮಾಗ್ರಿಗಳನ್ನು ಖರೀದಿಸಿದರೂ ಅದಕ್ಕೆ ಬಿಲ್ ತೆಗೆದುಕೊಳ್ಳುವುದನ್ನು ಮರೆಯಬೇಡಿ. ಬಿಲ್ ಇಲ್ಲದಿದ್ದರೆ, ಎಲ್ಲಿಯೂ ನಿಮಗೆ ನ್ಯಾಯ ಕೇಳಲು ಸಾಧ್ಯವಿಲ್ಲ. ಒಂದು ವೇಳೆ ವಸ್ತುಗಳನ್ನು ಖರೀದಿಸಿ, ಬಿಲ್ ಇದ್ದಲ್ಲಿ ಅಂತಹ ಗ್ರಾಹಕರು ಕರ್ನಾಟಕ ರಾಜ್ಯ ಗ್ರಾಹಕ ವಿವಾದ ಪರಿಹಾರ ಆಯೋಗದಲ್ಲಿ ದೂರು ದಾಖಲಿಸಿ, ನ್ಯಾಯ ಪಡೆಯಬಹುದು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ವ್ಯವಹಾರಗಳಲ್ಲಿ ಮೋಸ ಹೋಗುವ ಗ್ರಾಹಕರು ಹೆಚ್ಚಾಗುತ್ತಿದ್ದಾರೆ. ಆನ್‌ಲೈನ್ ವ್ಯವಹಾರದಲ್ಲಿ ತಿಳುವಳಿಕೆ ಇದ್ದಲ್ಲಿ ಮಾತ್ರ ವ್ಯವಹಾರಕ್ಕೆ ಮುಂದಾಗಿ, ಇಲ್ಲವಾದ್ದಲ್ಲಿ ಗ್ರಾಹಕರು ಖರೀದಿಸದಂತೆ ಸಲಹೆ ನೀಡಿದ ಜಂಟಿ ನಿರ್ದೇಶಕರು, ಆನ್‌ಲೈನ್ ಮೂಲಕ ವ್ಯವಹಾರ ಮಾಡಿದ್ದಲ್ಲಿ ಅದಕ್ಕೆ ಬೇಕಾದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಕಿವಿ ಮಾತು ಹೇಳಿದರು.

ವೇದಿಕೆಯಲ್ಲಿ ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಭತ್ಕೆರೆ, ರೇಣು ಅಗ್ರವಾಲ್, ಕೆ.ವಿ.ಕೆ.ನಾಯ್ಡು, ಪಿ.ರಾಕೇಶ್, ಮಾಳವಿಕಾ ಗುಬ್ಬಿವಾಣಿ, ಎಸ್.ಹರೀಶ್, ಎ.ದುರ್ಗಾಪ್ರಸಾದ್, ಎನ್.ಪುನೀತ್, ಎಸ್.ಎಲ್.ಅಭಿನಂದನ್, ಎಸ್.ಕೆ.ದಿನೇಶ್ ಉಪಸ್ಥಿತರಿದ್ದರು. ಈ ವೇಳೆ ಡಿ.24ರಂದು ಗ್ರಾಹಕರ ದಿನಾಚರಣೆ ಕುರಿತು ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು.

ಸದಸ್ಯರ ಸಲಹೆಗಳು

- ಎಪಿಎಲ್ ಇಲ್ಲದ ಮನೆಗಳನ್ನು ಗುರುತಿಸಿ, ಎಪಿಎಲ್ ಕಾರ್ಡ್‌ಗಳನ್ನು ವಿತರಿಸುವ ಕಾರ್ಯಕ್ಕೆ ರಾಜ್ಯ ಸರ್ಕಾರ ಕೂಡಲೇ ಚಾಲನೆ ನೀಡಬೇಕು.
- ಅನರ್ಹರು ಪಡೆದುಕೊಂಡಿರುವ ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತಿಸಬೇಕು.
- ಗ್ರಾಹಕರ ಕಾಯ್ದೆ ಕುರಿತು ಶಾಲಾ–ಕಾಲೇಜು, ವಿಶ್ವವಿದ್ಯಾನಿಲಯ, ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆಯಿಂದ ಸುತ್ತೋಲೆ ಹೊರಡಿಸಬೇಕು.
- ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಜಿಲ್ಲಾ ಕೇಂದ್ರಗಳಲ್ಲಿ ಗ್ರಾಹಕ ಸ್ನೇಹಿಯಾಗಿಸುವ ನಿಟ್ಟಿನಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಮಾರ್ಗಸೂಚಿ ಹೊರಡಿಸಬೇಕು.

ಫ್ಲೈಓವರ್ ನಿರ್ಮಾಣಕ್ಕೆ ಮೈಗ್ರಾಪ ವಿರೋಧ

ಮೈಸೂರು ಹೃದಯ ಭಾಗದಲ್ಲಿ ಟ್ರಾಫಿಕ್ ಸಮಸ್ಯೆ ನೆಪವೊಡ್ಡಿ ಜೆಎಲ್‌ಬಿ ರಸ್ತೆ, ವಿನೋಭಾ ರಸ್ತೆ ಮೂಲಕ ಮೈಸೂರು–ಹುಣಸೂರು ಮಾರ್ಗವಾಗಿ ನಿರ್ಮಾಣಗೊಳ್ಳುತ್ತಿರುವ ಫ್ಲೈಓವರ್ ಕಾಮಗಾರಿಗೆ ಮೈಸೂರು ಗ್ರಾಹಕರ ಪರಿಷತ್‌ನ ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಭತ್ಕೆರೆ, ಡಿ.ವಿ.ದಯಾನಂದ ಸಾಗರ್ ಸೇರಿದಂತೆ ಇತರರು ಬಲವಾಗಿ ವಿರೋಧಿಸಿದರು. ಈ ಹಿಂದೆ ಚಾಮಲಾಪುರ ಅಣುವಿದ್ಯುತ್ ಯೋಜನೆಗೆ ಮೊದಲ ವಿರೋಧದ ದನಿಯಾಗಿದ್ದು ಮೈಗ್ರಾಪ. ಹಾಗಾಗಿ ಯೋಜನೆಯ ವಿರುದ್ಧ ಸಾಧಕ–ಬಾಧಕಗಳನ್ನು ಪರಿಶೀಲಿಸಿ, ಪ್ರತಿಭಟನೆ ಹಮ್ಮಿಕೊಳ್ಳಬೇಕು.

ಜಿಂಕೆ, ಮೌಸ್ ಡೀರ್ ಬೇಟೆ; ಇಬ್ಬರ ಬಂಧನ


ಆರೋಪಿಗಳನ್ನು ಮಾಲು ಸಮೇತ ಬಂಧಿಸಿರುವ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ.

ಮತ್ತೊಬ್ಬನಿಗಾಗಿ ಶೋಧ

ಮೈಸೂರು,ನ.9(ಪಿಎಂ)– ಹುಣಸೂರು ವನ್ಯಜೀವಿ ವಲಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಗುಂಡಿಕ್ಕಿ ಜಿಂಕೆ ಮತ್ತು ಕೂರ (ಮೌಸ್ ಡೀರ್) ಬೇಟೆಯಾಡಿದ ಸಂಬಂಧ ಇಬ್ಬರನ್ನು ಬಂಧಿಸಿರುವ ಅರಣ್ಯ ಇಲಾಖೆಯು, ತಲೆಮರಿಸಿಕೊಂಡಿರುವ ಮತ್ತೊಬ್ಬನಿಗಾಗಿ ಶೋಧ ಕಾರ್ಯ ಆರಂಭಿಸಿದೆ.

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲೂಕಿನ ಚೆನ್ನಾಪುರ ಗ್ರಾಮದ ಜಿ.ಜೆ.ರೂಪೇಶ್ (49), ಗಂಧದ ಕೋಟಿ ಗ್ರಾಮದ ಸಿ.ಎಲ್.ಅರುಣ್ (28) ಬಂಧಿತರು. ಇದೇ ತಾಲೂಕಿನ ಚಿಕ್ಕ ತೋಳೂರು ಗ್ರಾಮದ ಜೀವಿತ್ (23) ತಲೆಮರೆಸಿಕೊಂಡಿರುವ ಆರೋಪಿ.

ಶನಿವಾರ ರಾತ್ರಿ 11.50ರ ಸಮಯದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯದ ಆನೆ ಚೌಕೂರು ಭಾಗ–1ರ ಶಾಖೆಯ ಉಪ ವಲಯ ಅರಣ್ಯಾಧಿಕಾರಿಗಳು, ಸಿಬ್ಬಂದಿ ಜೊತೆಗೆ ಬೂದಿತಿಟ್ಟು ಮುಖ್ಯ ರಸ್ತೆಯಲ್ಲಿ ಗಸ್ತಿನಲ್ಲಿ ದ್ದಾಗ, ಆನೆಚೌಕೂರು ಅಂಕಣ–3ರ ಗಸ್ತಿನ ಭುಂಗಲೆ ಕೂಪು ಅರಣ್ಯ ಪ್ರದೇಶದಲ್ಲಿ ಈ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ.

ಆರೋಪಿಗಳಿಂದ ಒಂದು ಕಾರು (ಕೆಎ–04, ಎಂಎ–8111), ಒಂಟಿ ನಳಿಕೆ ಬಂದೂಕು, 2 ಖಾಲಿ ಕಾಡುತೂಸುಗಳು, 1 ಜೀವಂತ ಕಾಡುತೂಸು, 1 ಹೆಡ್‌ಟಾರ್ಚ್, ಎರಡು ಮೊಬೈಲ್‌ಗಳು ಹಾಗೂ ಬೇಟೆಯಾಡಿದ ಗಂಡು ಜಿಂಕೆ, ಕೂರ ಮೃತದೇಹಗಳನ್ನು ವಶಪಡಿಸಿಕೊಂಡು, ಹುಣಸೂರು ವನ್ಯಜೀವಿ ವಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಹಣ್ಣು–ಹಂಪಲು ವಿತರಣೆ


ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಲೋಕನಾಯಕನಗರ ಸಂಜೀವಿನಿ ನಾಗರೀಕರ ಹಿತರಕ್ಷಣಾ ವೇದಿಕೆ ವತಿಯಿಂದ ಕೆಆರ್‌ಎಸ್ ರಸ್ತೆಯ ಜಿಲ್ಲಾಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ವೇದಿಕೆ ಅಧ್ಯಕ್ಷ ಸಂಜೀವಿನಿ ಕುಮಾರ್, ಮುಖಂಡರಾದ ಕೃಷ್ಣಪ್ಪ ಶ್ರೀನಿವಾಸ್, ನಾಗೇಂದ್ರ ಶಿವಕುಮಾರ್, ಮೋಹನ್, ದೇವೇಗೌಡ, ದಿನೇಶ್ ಮತ್ತಿತರರಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ.ರಾಘವೇಂದ್ರ ಆಯ್ಕೆ


ಮೈಸೂರಿನ ಅಗ್ರಹಾರದಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಭಾನುವಾರ ಬಿ.ರಾಘವೇಂದ್ರ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಸೇರಿದಂತೆ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು,ನ.9(ಪಿಎಂ)– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ಮೈಸೂರು ಜಿಲ್ಲಾ ಘಟಕದಿಂದ ಹಿರಿಯ ಪತ್ರಕರ್ತ ಬಿ.ರಾಘವೇಂದ್ರ ಆಯ್ಕೆಯಾಗಿದ್ದಾರೆ.

ಮೈಸೂರಿನ ಅಗ್ರಹಾರದಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಭಾನುವಾರ ಮತದಾನ ಪ್ರಕ್ರಿಯೆ ನಡೆಯಿತು. 9 ಮತಗಳ ಅಂತರದಲ್ಲಿ ಬಿ.ರಾಘವೇಂದ್ರ ಗೆಲುವು ಸಾಧಿಸಿದರು.

ರಾಜ್ಯ ಕಾರ್ಯಕಾರಿ ಸಮಿತಿಯ ಒಂದು ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಇವರೊಂದಿಗೆ ಹಿರಿಯ ಪತ್ರಕರ್ತ ವಿ.ಮಹೇಶ್ ಕುಮಾರ್ (ಕೊಳ್ಳೇಗಾಲ ಮಹೇಶ್) ಹಾಗೂ ಪತ್ರಿಕಾ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್ ಕಣದಲ್ಲಿದ್ದರು. 172 ಮತಗಳನ್ನು ಗಳಿಸಿ ಬಿ.ರಾಘವೇಂದ್ರ ಗೆಲುವು ಸಾಧಿಸಿದರೆ, ಇವರಿಗೆ ತೀವ್ರ ಪೈಪೋಟಿ ನೀಡಿ ಕೊಳ್ಳೇಗಾಲ ಮಹೇಶ್ 162 ಮತಗಳನ್ನು ಗಳಿಸಿದರು. ಎಸ್.ಆರ್.ಮಧುಸೂದನ್ 21 ಮತಗಳನ್ನು ಪಡೆದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ (ಮೈಸೂರು ಜಿಲ್ಲಾ ಘಟಕ) ಒಟ್ಟು 415 ಮತದಾರರು (ಸದಸ್ಯರು) ಇದ್ದು, ಈ ಪೈಕಿ 359 ಮಂದಿ ಮತದಾನ ಮಾಡಿದರು. ಇದರಲ್ಲಿ ನಾಲ್ವರ ಮತಪತ್ರಗಳು ಅಸಿಂಧುವಾಗಿ ತಿರಸ್ಕೃತಗೊಂಡವು. ಹಿರಿಯ ಪತ್ರಕರ್ತ ಎಂ.ಎಸ್.ಕಾಶೀನಾಥ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಮೇಘಾಲಯ-ಅರುಣಾಚಲ ಪ್ರದೇಶ ರಣಜಿ ಟ್ರೋಫಿ

ಸತತ 8 ಎಸೆತಗಳಲ್ಲಿ 8 ಸಿಕ್ಸ್ ಬಾರಿಸಿ ಹೊಸ ವಿಶ್ವ ದಾಖಲೆ ಸೃಷ್ಟಿಸಿದ ಆಕಾಶ್...!


ಅರುಣಾಚಲ ಪ್ರದೇಶ ಆಟಗಾರ ಆಕಾಶ್ ಕುಮಾರ್ ಚೌಧರಿ

ಮೈಸೂರು, ನ.9(ವಿವಿಹೆಚ್)– 2025–26ರ ರಣಜಿ ಆವೃತ್ತಿಯ 4ನೇ ಸುತ್ತು ನಡೆಯುತ್ತಿದೆ. ಈ ಸುತ್ತಿನಲ್ಲಿ ಮೇಘಾಲಯದ ಯುವ ಬ್ಯಾಟ್ಸ್‌ಮನ್ ಆಕಾಶ್ ಕುಮಾರ್ ಚೌಧರಿ ಅರುಣಾಚಲ ಪ್ರದೇಶ ವಿರುದ್ಧದ ಈ ಪಂದ್ಯದಲ್ಲಿ ಕೇವಲ 11 ಎಸೆತಗಳಲ್ಲಿ ಅರ್ಧಶತಕ ಗಳಿಸುವ ಮೂಲಕ ವಿಶ್ವ ದಾಖಲೆಯನ್ನು ಬರೆದಿದ್ದಾರೆ. ಈ ಇನ್ನಿಂಗ್ಸ್‌ನೊಂದಿಗೆ ಆಕಾಶ್ ಕುಮಾರ್ ಚೌಧರಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅತ್ಯಂತ ವೇಗದ ಅರ್ಧಶತಕ ಬಾರಿಸಿದ ದಾಖಲೆಯನ್ನು ನಿರ್ಮಿಸಿದ್ದಾರೆ.

ಉಭಯ ತಂಡಗಳ ನಡುವಿನ ಪಂದ್ಯದಲ್ಲಿ, ಮೇಘಾಲಯ ತನ್ನ ಮೊದಲ ಇನ್ನಿಂಗ್ಸ್ ಅನ್ನು ಆರು ವಿಕೆಟ್ ನಷ್ಟಕ್ಕೆ 628 ರನ್ ಗಳಿಸಿ ಡಿಕ್ಲೇರ್ ಮಾಡಿತು. ತಂಡದ ಪರ ಆಕಾಶ್‌ಕುಮಾರ್ ಚೌಧರಿ 14 ಎಸೆತಗಳಲ್ಲಿ ಅಜೇಯ 58 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರು ಕೇವಲ 11 ಎಸೆತಗಳಲ್ಲಿ ಐವತ್ತು ರನ್ ಗಳಿಸುವ ಮೂಲಕ 13 ವರ್ಷಗಳ ಹಳೆಯ ವಿಶ್ವ ದಾಖಲೆಯನ್ನು ಮುರಿದರು. ಇದಕ್ಕೂ ಮೊದಲು, ವೇಯ್ನ್ ವೈಟ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅತಿ ವೇಗದ ಅರ್ಧಶತಕದ ದಾಖಲೆಯನ್ನು ಹೊಂದಿದ್ದರು. ವೇಯ್ನ್ ವೈಟ್ 2012 ರಲ್ಲಿ ಎಸೆಕ್ಸ್ ವಿರುದ್ಧ 12 ಎಸೆತಗಳಲ್ಲಿ ಈ ಸಾಧನೆ ಮಾಡಿದ್ದರು. ಇದೀಗ ಆಕಾಶ್ ಕುಮಾರ್ ಒಂದು ಎಸೆತ ಕಡಿಮೆ ತೆಗೆದುಕೊಂಡು ಈ ಇತಿಹಾಸ ನಿರ್ಮಿಸಿದರು.

ಈ ಐತಿಹಾಸಿಕ ಇನ್ನಿಂಗ್ಸ್‌ನಲ್ಲಿ, ಆಕಾಶ್ ಕುಮಾರ್ ಚೌಧರಿ ಕೂಡ ಲಿಮರ್ ದಾಬಿ ಎಸೆದ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸಿದರು. ರವಿಶಾಸ್ತ್ರಿ ನಂತರ ರಣಜಿ ಟ್ರೋಫಿಯಲ್ಲಿ ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸಿದ ಎರಡನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಬಾರಿಸಿದ ನಂತರ, ಆಕಾಶ್ ಕುಮಾರ್ ಚೌಧರಿ ಮುಂದಿನ ಎರಡು ಎಸೆತಗಳಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಈ ಮೂಲಕ ಎಂಟು ಎಸೆತಗಳಲ್ಲಿ ಎಂಟು ಸಿಕ್ಸರ್‌ಗಳನ್ನು ಬಾರಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಸಿಎಫ್‌ಟಿಆರ್‌ಐ ನೂತನ ನಿರ್ದೇಶಕರಿಗೆ ಸನ್ಮಾನ



ಸಿಎಫ್‌ಟಿಆರ್‌ಐ ನೂತನ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಅವರನ್ನು ಅವರ ಪತ್ನಿ ಗೀತಾ ಅವರ ಜೊತೆಯಲ್ಲಿ ಸನ್ಮಾನಿಸಲಾಯಿತು.

ಮೈಸೂರು,ನ.9(ಪಿಎಂ)–ವಿಜಯನಗರ 3ನೇ ಹಂತದ ಗರುಡಾಚಾರ್ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾನುವಾರ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ನೂತನ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಅವರನ್ನು ಸನ್ಮಾನಿಸಲಾಯಿತು.

ಬಡಾವಣೆಯ ಉದ್ಯಾನವನದ ಆವರಣದಲ್ಲಿ ಹಮ್ಮಿಕೊಂಡಿದ್ದ ಸದರಿ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಗರುಡಾಚಾರ್ ಬಡಾವಣೆಯ ನಿವಾಸಿಯೂ ಆಗಿರುವ ಡಾ.ಗಿರಿಧರ್ ಪರ್ವತಂ ಅವರನ್ನು ಅವರ ಪತ್ನಿ ಗೀತಾ ಅವರ ಜೊತೆಯಲ್ಲಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಎಸ್.ಮಂಜಪ್ಪ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ವಾರ್ಷಿಕ ವರದಿಯನ್ನು ನಿರ್ದೇಶಕ ಜಿ.ಎಂ.ಮಂಜುನಾಥ್ ಮಂಡಿಸಿದರು. ಸಂಘದ ಲೆಕ್ಕಪತ್ರಗಳ ವರದಿಯನ್ನು ಖಜಾಂಚಿ ರಾಮಚಂದ್ರ ಕಾಮತ್ ಮಂಡಿಸಿದರು. ಕಾರ್ಯದರ್ಶಿಗಳಾದ ಬಿ.ಚಿನ್ಮಯಾನಂದ ಬಾಬು, ಸಂಘದ ನಿರ್ದೇಶಕರು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಕುಂಭಾಭಿಷೇಕ


ಮೈಸೂರಿನ ಕನ್ನೇಗೌಡನಕೊಪ್ಪಲು ಪೈಲ್ವಾನ್ ಬಸವಯ್ಯನವರ ವೃತ್ತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 15ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ಭಾನುವಾರ ಅದ್ದೂರಿಯಾಗಿ ನೆರವೇರಿತು. ಈ ವೇಳೆ ದೇವಸ್ಥಾನದ ಪದಾಧಿಕಾರಿಗಳು, ಕನ್ನೇಗೌಡನಕೊಪ್ಪಲು ಹಾಗೂ ಜಯನಗರದ ಮುಖಂಡರು ಸೇರಿದಂತೆ ಅಪಾರ ಭಕ್ತರು ದೇವರ ದರ್ಶನ ಪಡೆದರು.

ಇಂದು ಹೆಬ್ಬಾಳಲ್ಲಿ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವ

ಮೈಸೂರು,ನ.9(ಪಿಎಂ)– ಮೈಸೂರಿನ ಹೆಬ್ಬಾಳ 1ನೇ ಹಂತದ ಎಸ್‌ಬಿಐ ಮುಖ್ಯ ರಸ್ತೆಯ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಮತ್ತು ಸಮುದಾಯ ಭವನ ಹಾಗೂ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಕಾರ್ತಿಕ ಮಾಸದ ಪ್ರಯುಕ್ತ ನ.10ರಂದು ಸಂಜೆ 6ಕ್ಕೆ 30ನೇ ವರ್ಷದ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವ ಏರ್ಪಡಿಸಲಾಗಿದೆ.

ಕಂಡಾಯೋತ್ಸವ ಪ್ರಯುಕ್ತ ಹೆಬ್ಬಾಳಿನ ಪ್ರಮುಖ ಬೀದಿಗಳಲ್ಲಿ ಶ್ರೀ ಸಿದ್ದಪ್ಪಾಜಿ ಕಂಡಾಯದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಸೇವಾ ಸಮಿತಿ ಪ್ರಕಟಣೆ ತಿಳಿಸಿದೆ.

ಮತ್ತೆ ಇ–ಖಾತೆ ಅಭಿಯಾನಕ್ಕೆ ಮೈಸೂರು ನಗರಪಾಲಿಕೆ ಸಿದ್ಧತೆ

ಮುಂದಿನ ಶುಕ್ರವಾರದಿಂದ ವಲಯವಾರು ಅಭಿಯಾನ

ಮೈಸೂರು, ನ.9(ಎಸ್‌ಪಿಎನ್)– ಇತ್ತೀಚೆಗೆ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಗ್ರೇಟರ್ ಮೈಸೂರು ಪ್ರಸ್ತಾವನೆ ಮಾಡಿದ ಬೆನ್ನಲ್ಲೇ ಮೈಸೂರು ಮಹಾ ನಗರ ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿಗಳು ವಲಯವಾರು ಮತ್ತೆ ಇ–ಖಾತೆ ಅಭಿಯಾನ ಆರಂಭಿಸಲು ಸಿದ್ದತೆ ಮಾಡಿಕೊಂಡಿದ್ದಾರೆ.

ಈಗಾಗಲೇ ಇ–ಖಾತೆ ನೀಡುವಲ್ಲಿ ರಾಜ್ಯದಲ್ಲಿ ಮೊದಲನೇ ಸ್ಥಾನದಲ್ಲಿರುವ ಮೈಸೂರು ನಗರಪಾಲಿಕೆಯೂ ಶೇ.100ರಷ್ಟು ಗುರಿ ಸಾಧಿಸಲು ಮುಂದಿನ ವಾರದಿಂದ ವಲಯವಾರು ಅಭಿಯಾನ ನಡೆಸಲು ನಿರ್ಧರಿಸಿದೆ.

ಪಾಲಿಕೆ ವ್ಯಾಪ್ತಿಯ ಪ್ರತಿ ವಾರ್ಡ್‌ಗಳಲ್ಲಿಯೂ ಸಾರ್ವಜನಿಕರು ಹಾಗೂ ನಗರಪಾಲಿಕೆ ಮಾಜಿ ಸದಸ್ಯರ ನೇತೃತ್ವದಲ್ಲಿ ಅಲ್ಲಲ್ಲಿ ಜಾಗೃತಿ ಸಭೆಗಳನ್ನು ನಡೆಸಿ, ಈ ಮೂಲಕ ಶೇ.100ರಷ್ಟು ಗುರಿ ಸಾಧಿಸಲು ಕ್ರಮ ವಹಿಸಲಾಗಿದೆ ಎನ್ನುತ್ತಾರೆ, ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗಣಿ.

ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 2,27,893 ಆಸ್ತಿಗಳಿದ್ದು, ಅದರಲ್ಲಿ ಅತಿ ಹೆಚ್ಚು ಎ–ಖಾತೆ ನೀಡುವ ಪಟ್ಟಿಯಲ್ಲಿದ್ದರೆ, ರೆವಿನ್ಯೂ ಬಡಾವಣೆಗಳಲ್ಲಿ ಇರುವ ಆಸ್ತಿಯೂ ಬಿ–ಖಾತೆ ನೀಡುವ ಪಟ್ಟಿಯಲ್ಲಿವೆ. ಸರಕಾರದ ಆದೇಶದಂತೆ ಮೈಸೂರು ನಗರದ ಇ–ಖಾತೆ ನೀಡಲು ವಿಶೇಷ ಅಭಿಯಾನದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದ ಪಾಲಿಕೆ ಅಧಿಕಾರಿಗಳು, ಅತಿ ಹೆಚ್ಚು ಇ–ಖಾತೆಯನ್ನು ನೀಡುವ ಮೂಲಕ ಮೈಸೂರನ್ನು ರಾಜ್ಯದ ಮೊದಲನೇ ಸ್ಥಾನಕ್ಕೆ ತಂದ ಕೀರ್ತಿ ಅಧಿಕಾರಿಗಳು, ಕಂದಾಯ ಸಿಬ್ಬಂದಿಗಳಿಗೆ ಸಲ್ಲುತ್ತದೆ.


ಪ್ರತಿಯೊಂದು ವಲಯಕ್ಕೂ ಒಬ್ಬರು ನೋಡಲ್ ಅಧಿಕಾರಿಯನ್ನು ನಿಯೋಜಿಸಿದ್ದಾರೆ. ಅಭಿಯಾನ ಆಯಾ ವಲಯ ಕಚೇರಿಯಲ್ಲಿಯೇ ನಡೆಯಲಿದೆ. ಇ–ಖಾತೆ ನೀಡುವ ಸಂಬಂಧ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ವಲಯ ಕಚೇರಿಯಲ್ಲಿಯೇ ಇದ್ದು, ಸಾರ್ವಜನಿಕರಿಂದ ಬರುವ ಇ–ಖಾತೆ ಅರ್ಜಿಗಳನ್ನು ಸ್ವೀಕರಿಸಿ, ಮೂರ್ನಾಲ್ಕು ದಿನಗಳಲ್ಲಿ ವಿಲೇವಾರಿ ಮಾಡಲು ಕ್ರಮ ವಹಿಸಲಿದ್ದಾರೆ.

ವಲಯವಾರು ವಿವರ

ವಲಯ ಕಚೇರಿ –01	6921
ವಲಯ ಕಚೇರಿ –02	8567
ವಲಯ ಕಚೇರಿ –03	11926
ವಲಯ ಕಚೇರಿ –04	4254
ವಲಯ ಕಚೇರಿ –05	5731
ವಲಯ ಕಚೇರಿ –06	5864
ವಲಯ ಕಚೇರಿ –07	6112
ವಲಯ ಕಚೇರಿ –08	5002
ವಲಯ ಕಚೇರಿ –09	6740

ವಲಯವಾರು ಆಸ್ತಿಗಳ ವಿವರ

ಮೈಸೂರು ನಗರ ವ್ಯಾಪ್ತಿಯಲ್ಲಿ ಒಟ್ಟು ಆಸ್ತಿ ಸಂಖ್ಯೆ:	2,27,893
ಇಲ್ಲಿಯವರೆಗೆ ಇ–ಖಾತೆ ವಿತರಣೆ	61,117
ಎ–ಖಾತೆ ವಿತರಣೆ	56,922
ಬಿ–ಖಾತೆ	41,117



"ಮುಂದಿನ ಶುಕ್ರವಾರದಿಂದ ವಲಯವಾರು ಇ–ಖಾತೆ ಅಭಿಯಾನ ನಡೆಸಲಿದ್ದು, ಪ್ರತಿ ವಲಯ ಕಚೇರಿ ವ್ಯಾಪ್ತಿಗೆ ಒಬ್ಬರು ನೋಡಲ್ ಅಧಿಕಾರಿಯನ್ನು ನಿಯೋಜನೆ ಮಾಡಲಾಗುವುದು. ಸಾರ್ವಜನಿಕರು, ನಗರ ಪಾಲಿಕೆ ಮಾಜಿ ಸದಸ್ಯರು ನೇತೃತ್ವದಲ್ಲಿ ಅಲ್ಲಲ್ಲಿ ಸಭೆಗಳನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.

– **ಸೋಮಶೇಖರ್ ಜಿಗಣಿ** ಉಪ ಆಯುಕ್ತ(ಕಂದಾಯ) ಪಾಲಿಕೆ

"ಆನ್‌ಲೈನ್ ಮೂಲಕವೇ ಜನರೇ ಅರ್ಜಿ ಸಲ್ಲಿಸಿ ಇ–ಖಾತೆ ಪಡೆಯುವ ವ್ಯವಸ್ಥೆ ಅಕ್ಕ–ಪಕ್ಕದ ರಾಜ್ಯಗಳಲ್ಲಿದೆ. ಈ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲೂ ಜಾರಿಗೊಳಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಆದರೆ, ನಮ್ಮ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಕಚೇರಿಗೆ ತೆರಳಿ ಇ–ಖಾತೆ ಅರ್ಜಿ ಹಾಕುವ ಪರಿಸ್ಥಿತಿಯಿದೆ ಹಾಗಾಗಿ ಅಭಿಯಾನಕ್ಕಿಂತ ಇ–ಖಾತೆ ನೀಡುವ ಪ್ರಕ್ರಿಯೆಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

– **ಎ.ಪಿ.ವಿರೂಪಾಕ್ಷ**, ಬಸವೇಶ್ವರನಗರ ನಿವಾಸಿ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಕೇಳಿ ಇಲ್ಲಿ
ಗಂಡ : ಹೇಳು
ಹೆಂಡತಿ : ಡಾಕ್ಟರ್ ಹೇಳಿದ್ದಾರೆ, ನನಗೆ ಆರಾಮ ತಗೋಳ್ಳೋಕೆ ಲಂಡನ್, ಪ್ಯಾರಿಸ್‌ಗೆ ಹೋಗಿ ಅಂದಿದ್ದಾರೆ. ಅದಕ್ಕೆ ಮೊದಲು ನಾವು ಎಲ್ಲಿಗೆ ಹೋಗೋಣ?
ಗಂಡ : ನಾವು, ಮೊದಲು ಬೇರೆ ಡಾಕ್ಟರ್ ಹತ್ತಿರ ಹೋಗೋಣ.

ಮೈಸೂರು ಮಿತ್ರ

ಸೋಮವಾರ, 10 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ಸ್ವೀಕರಿಸುವುದೆಲ್ಲವೂ – ಮಾಹಿತಿ
ನಾವು ಸಂರಕ್ಷಿಸುವುದೆಲ್ಲವೂ – ತಿಳುವಳಿಕೆ
ನಾವು ಉಪಯೋಗಿಸುವುದೆಲ್ಲವೂ – ಬುದ್ಧಿವಂತಿಕೆ
ಆದರೆ, ನಾವು ಏನು, ಯಾವಾಗ, ಹೇಗೆ ಉಪಯೋಗಿಸುತ್ತೇವೆ ಎಂಬುದೇ ವಿವೇಕ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ.

ನಿಮ್ಮ ಪತ್ರಗಳು

ಇ–ಖಾತೆ ಎಂಬ ಗಜ ಪ್ರಸವ ಯೋಜನೆ ಬೇಕಿತ್ತಾ?

ಮಾನ್ಯರೆ,

ಕೆಲವು ಜನರಿಗಷ್ಟೇ ಸೀಮಿತವಾಗಿರುವ ಗ್ಯಾರಂಟಿ ಯೋಜನೆಯಿಂದ ಬರಿದಾಗುತ್ತಿರುವ ಸರ್ಕಾರದ ಖಜಾನೆಯನ್ನು ಸರಿದೂಗಿಸಲು ಸಮಸ್ತರನ್ನು ಗುರಿಯಾಗಿಸಿ ಹೇರುತ್ತಿರುವ ಹೊಸ ನಿಯಮಗಳಲ್ಲಿ ಇ–ಖಾತೆಯು ಒಂದು. ಪ್ರಸ್ತುತ ಹಳೆಯ ಆಸ್ತಿ ಖಾತೆ ಹೊಂದಿರುವವರು ಕೂಡ ಇ–ಖಾತೆ ಮಾಡಿಸಬೇಕೆಂಬ ನಿಯಮವು ಅಪ್ರಸ್ತುತವೆನ್ನಬಹುದು. ಜನಸಾಮಾನ್ಯರ ಜೇಬಿಗೆ ಹೆಜ್ಜೆ ಹೆಜ್ಜೆಗೂ ಕತ್ತರಿ ಬೀಳುವ ಈ ಯೋಜನೆಯಲ್ಲಿ ಎಲ್ಲವನ್ನು ಕಂಪ್ಯೂಟರೀಕರಣಗೊಳಿಸಿ, ಸುಲಭ ದಾಖಲಾತಿ ಮಾಡುವ ನೆಪದಲ್ಲಿ ಇ–ಖಾತೆ ಎಂಬ ಗಜ ಪ್ರಸವದಂತಹ ಯೋಜನೆಯ ಭಾರ ಬೇಕಿತ್ತಾ? ಎಂಬುದು ಜನಸಾಮಾನ್ಯರ ಪ್ರಶ್ನೆಯಾಗಿದೆ.

ನಮ್ಮ ಮನೆಗೆ ನಾವೇ ಬಾಡಿಗೆ ಕಟ್ಟುವಷ್ಟು ಹೇರಿಕೆಯಾಗಿದೆ ಆಸ್ತಿ ತೆರಿಗೆ. ಈಗ ಮತ್ತೊಂದು ಭಾರ. ಇಲ್ಲಿ ವೇದನೆ ಜನರಿಗೆ, ಖುಷಿ ಅಧಿಕಾರಿಗಳಿಗೆ. ಎಲ್ಲ ಯೋಜನೆಯಲ್ಲೂ ಇದೆ ಕಥೆ. ಹಲವು ಅಭಾಸಗಳ ಪಟ್ಟಿಯ ಸರಮಾಲೆಯೇ ಇದರಲ್ಲಿದೆ. ಪ್ರಾರಂಭದಲ್ಲಿ ಅಗತ್ಯ ದಾಖಲೆ ಒದಗಿಸುವ ಪ್ರಕಟಣೆಯಲ್ಲೇ ಹಲವು ಗೊಂದಲ ಆರಂಭವಾಗುತ್ತದೆ. ಒಂದೆಡೆ ಕ್ರಯಪತ್ರ ಸಾಕೆಂದರೆ, ಮತ್ತೊಂದೆಡೆ ಲಿಂಕ್ ಡೀಡ್ ಬೇಕೆನ್ನುತ್ತಾರೆ, GPS ನೊಂದಿಗೆ ಆಸ್ತಿ ಫೋಟೋ, ನಕ್ಷೆ, ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ(CR)ನೀಡಬೇಕು, ಈ ಕ್ಲಿಯರಿಂಗ್ ರಿಪೋರ್ಟ್ ಎಲ್ಲಾ ಬಡಾವಣೆಗಳಲ್ಲು ನೀಡಿರುವುದಿಲ್ಲ. ಅದಕ್ಕಾಗಿ ಹೆಚ್ಚು ತೆರಿಗೆ ಪಡೆಯಲಾಗುತ್ತಿದೆ.

ನಗರ ಪ್ರದೇಶದಲ್ಲಿ ಸಣ್ಣ ಸೈಟ್‌ಗಳಿಗೆ CR ಸಿಗುವುದು ಕಷ್ಟ, 30–40 ವರ್ಷಗಳ ಹಿಂದಿನ ಮನೆಗಳು ನಕ್ಷೆಯೊಂದಿಗೆ ನಿರ್ಮಾಣ ಆಗಿರುವುದಿಲ್ಲ. ಜೊತೆಗೆ 2004ರಿಂದ ತಹಲ್‌ವರೆಗೂ ಒಂದೇ ದಾಖಲೆಯಲ್ಲಿ EC ಕೇಳಲಾಗಿದೆ. ವಿಶೇಷವೆಂದರೆ 2024 ರವರೆಗೂ ನಮ್ಮಲ್ಲಿ EC ಲಭ್ಯವಿದ್ದರೆ ಅದು ಪ್ರಯೋಜನಕ್ಕೆ ಬರುವುದಿಲ್ಲ. ಹೊಸ EC ಬೇಕೆನ್ನುತ್ತಾರೆ. ಈಗ ಆನ್‌ಲೈನ್‌ನಲ್ಲಿ EC ಪಡೆಯುವ ವ್ಯವಸ್ಥೆ ಇದೆ. ಇಲ್ಲೂ ಸರ್ಕಾರಕ್ಕೆ ಕನಿಷ್ಠ ಮೊತ್ತವೆ!!. EC ಕೊಡಿಸಲು ಈಗ ಮಧ್ಯವರ್ತಿಗಳ ಸಾಲೆ ಲಭ್ಯವಿದೆ.

ಇದರೊಂದಿಗೆ ಕಂದಾಯ ರಶೀದಿ SAS ಫಾರ್ಮ್‌ನೊಂದಿಗೆ, ನೀರು, ವಿದ್ಯುತ್ ಬಿಲ್, ಪಾನ್‌ಕಾರ್ಡ್ ನಕಲು, ಹಳೆ ಖಾತಾ, ಭಾವಚಿತ್ರ ಇವೆಲ್ಲವನ್ನೂ ಕರ್ನಾಟಕ ಒನ್ ಅಥವಾ ಸೈಬರ್ ಸೆಂಟರ್‌ನಲ್ಲಿ ಸ್ಕ್ಯಾನಿಂಗ್ ಮಾಡಿ ಶುಲ್ಕ ನೀಡಿ ದಾಖಲಿಸಿಕೊಂಡ ನಂತರ ನಗರಪಾಲಿಕೆಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗೆ ನೀಡಬೇಕು. ಇಲ್ಲಿಂದ ಆರಂಭವಾಗುವುದು ನಿಜವಾದ ಪ್ರಸವ ವೇದನೆ.

ದಾಖಲಾತಿ ನೋಡಿ ಖುದ್ದಾಗಿ ಪರಿಶೀಲಿಸಿ ಸಹಿಯೊಂದಿಗೆ ಇ–ಖಾತೆ ನೀಡಬಹುದು. ಕೊಟ್ಟರೆ ನಮ್ಮ ಪುಣ್ಯ. ಆದರೆ ಎಲ್ಲಾ ದಾಖಲಾತಿಗಳು ಸರಿ ಇದ್ದರೂ ಕೆಲವು ಭ್ರಷ್ಟ ಅಧಿಕಾರಿಗಳು ಮೊಸರಲ್ಲಿ ಕಲ್ಲು ಹುಡುಕುವ ಕೆಲಸಕ್ಕೆ ಕೈ ಹಾಕುತ್ತಾರೆ.ಅರ್ಧದಲ್ಲಿ ನಿಲ್ಲಲಾಗುವುದಿಲ್ಲ ನಮ್ಮ ಶಕ್ತಿಯಾನುಸಾರ ಓಡಿ EC ಪಡೆಯಲೇಬೇಕಾದ ಅನಿವಾರ್ಯತೆ ನಮಗೆ. ಇದೆಲ್ಲಾ ನೋಡಿದರೆ ಹಿಂದಿನ ವ್ಯವಸ್ಥೆಯೇ ಸರಿಯೇನಿಸುತ್ತದೆ. ಸರ್ಕಾರ ನೇರವಾಗಿ ಆಸ್ತಿ ಘೋಷಣೆ ಮಾಡಿ ಕಂದಾಯ ಕಟ್ಟುವಂತೆ ಇರುವ ಸಂಪ್ರದಾಯವನ್ನೇ ಇಲ್ಲೂ ಸಹ ಅನುಸರಿಸಿ ಸ್ವ–ದಾಖಲಾತಿ ಮಾಡಿ, ಸುಲಭ ವಿಧಾನ ಅನುಸರಿಸುವ ಕ್ರಮವಹಿಸಬೇಕೇಂಬುದೇ ಜನ ಸಾಮಾನ್ಯರ ಒತ್ತಾಯ. ಇತ್ತೀಚಿಗೆ ಸರ್ಕಾರಿ ಕಚೇರಿಗೆ ಭೇಟಿ ಎಂದರೆ ಸಾಕು ಜನರು ಭಯ ಪಡುವಂತಾಗಿದೆ. ಇಲ್ಲಿ ಒಂದು ಗಾದೆ ನೆನಪಾಗುತ್ತೆ 'ಮೂಗಿಗಿಂತ ಮೂಗುತಿ ಭಾರ' ಎನ್ನುವಂತಾಗಿದೆ ಇ–ಖಾತೆ ವ್ಯವಸ್ಥೆ. ಸರ್ಕಾರ ಈಗಲಾದರೂ ಜನತೆ ಹಿಡಿಶಾಪ ಹಾಕುವ ಮುನ್ನ ಸರ್ಕಾರ ಎಚ್ಚೆತ್ತು ವ್ಯವಸ್ಥೆಯನ್ನು ಸುಲಭ ದಾಖಲು ವಿಧಾನ ಜಾರಿಗೊಳಿಸಲಿ. **–ಎನ್ ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.**

ಪಿಯುಸಿಗೂ ಬಿಸಿಯೂಟ ಯೋಜನೆ ವಿಸ್ತರಿಸಲಿ

ಮಾನ್ಯರೆ,

ಮಕ್ಕಳ ಅಪೌಷ್ಟಿಕತೆ ತೊಡೆದು ಹಾಕಿ, ಅವರ ಆರೋಗ್ಯ ಮತ್ತು ಶೈಕ್ಷಣಿಕ ಪ್ರಗತಿಯನ್ನು ಉತ್ತೇಜಿಸುವ ಉದ್ದೇಶದಿಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವ ಬಿಸಿಯೂಟ ಯೋಜನೆ ಈಗ ಸರಕಾರಿ ಪದವಿ ಪೂರ್ವ ಕಾಲೇಜು (ಪಿಯುಸಿ) ಹಂತದ ವಿದ್ಯಾರ್ಥಿಗಳಿಗೆ ಸಹ ವಿಸ್ತರಿಸುವ ಅಗತ್ಯವಿದೆ. ಈ ಕುರಿತು ರಾಜ್ಯ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಬೇಕಾಗಿದೆ.

ಪಿಯುಸಿ ಹಂತದ ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದ ಅತ್ಯಂತ ಸೂಕ್ಷ್ಮ ಹಂತದಲ್ಲಿದ್ದಾರೆ. ಈ ಹಂತದಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಅವರು ಕಲಿಕೆಯಲ್ಲಿ ಏಕಾಗ್ರತೆ ಕಳೆದುಕೊಳ್ಳುವುದಲ್ಲದೆ, ದೈಹಿಕ ಮತ್ತು ಮಾನಸಿಕ ಆಯಾಸ ಮತ್ತು ಫಲಿತಾಂಶದಲ್ಲಿ ಹಿನ್ನಡೆಗೆ ಒಳಪಡುತ್ತಿದ್ದಾರೆ. ಇನ್ನೂ ಪಿಯುಸಿ ವಿದ್ಯಾರ್ಥಿಗಳ ದಾಖಲಾತಿ, ಕಾಲೇಜು ಬಿಟ್ಟು ಬಿಡುವ ಪ್ರಮಾಣ, ಪೌಷ್ಟಿಕ ಸ್ಥಿತಿ, ಕಲಿಕಾ ಸ್ಥಿರತೆ, ಮೈಕ್ರೋ ನ್ಯೂಟ್ರಿಯಂಟ್ ಐಷ್ಕಿಯತೆ ಇತ್ಯಾದಿ ಸೂಕ್ಷ್ಮತೆಗಳು ಎಲ್ಲವೂ ಬಹು ಮುಖ್ಯ ಆದ್ದರಿಂದ, ಬಿಸಿಯೂಟ ಯೋಜನೆ ಪಿಯುಸಿ ಹಂತಕ್ಕೂ ವಿಸ್ತರಿಸಿದರೆ ಸರಿಸುಮಾರು ಮೂರು ಲಕ್ಷ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ದೈಹಿಕ ಆರೋಗ್ಯ, ಮಾನಸಿಕ ಬೆಳವಣಿಗೆ, ಏಕಾಗ್ರತೆ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯನ್ನು ವೃದ್ಧಿಸಲು ಇದು ಮಹತ್ವದ ಪಾತ್ರವಹಿಸುತ್ತದೆ.ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇದು ಪೌಷ್ಟಿಕ ಆಹಾರ ದೊರಕಿಸುವುದರ ಜೊತೆಗೆ ಹಾಜರಾತಿ ಪ್ರಮಾಣವನ್ನೂ ಹೆಚ್ಚಿಸಲು ಸಹಕಾರಿ ಆಗುತ್ತದೆ. ಶಿಕ್ಷಣ ಮತ್ತು ಆರೋಗ್ಯದ ನಡುವಿನ ಆಂತರಿಕ ನಂಟನ್ನು ಬಲಪಡಿಸಲು ಇದು ಅತ್ಯಂತ ಅಗತ್ಯವಾಗಿದೆ.

–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

ನಂದಿನಿ ತುಪ್ಪ ದುಬಾರಿ: ಜಿಎಸ್‌ಟಿ ಇಳಿಕೆ ಲಾಭ ಗ್ರಾಹಕರಿಗೆ ಸಲ್ಲಬೇಕು

ಮಾನ್ಯರೆ,

ಹಲವಾರು ಸರಕುಗಳ ಮೇಲೆ ಸರಕು ಮತ್ತು ಸೇವಾ ತೆರಿಗೆಯ ಪ್ರಮಾಣ ಕಡಿತಗೊಂಡ ನಂತರ ಅದರ ಲಾಭ ಗ್ರಾಹಕರಿಗೆ ಸಲ್ಲಬೇಕು ಎಂಬುದು ಕೇಂದ್ರ ಸರ್ಕಾರದ ಉದ್ದೇಶವಾಗಿತ್ತು. ಅದರಂತೆ ಹಲವು ವಸ್ತುಗಳ ಲಾಭ ಗ್ರಾಹಕರಿಗೆ ಸಂದಿದೆ. ಆದರೂ ಕೆಲವೊಂದು ಸರಕು ತಯಾರಕರು ರಂಗೋಲಿ ಕೆಳಗೆ ನುಸುಳುವ ಪ್ರಯತ್ನ ಮಾಡುತ್ತಿದ್ದಾರೆ. ಜಿಎಸ್‌ಟಿ ಇಳಿಕೆ ನಂತರ ಕೇಂದ್ರ ವಿತ್ತ ಸಚಿವರು, ನಾವು ಬೆಲೆಗಳ ಮೇಲೆ ಗಮನ ಇಟ್ಟಿದ್ದೇವೆ. ಇದರ ಪ್ರಯೋಜನವನ್ನು ಗ್ರಾಹಕರಿಗೆ ತಲುಪಿಸುವತ್ತ ಹೆಜ್ಜೆ ಇಟ್ಟಿದ್ದೇವೆ. ಇದರ ಲಾಭವನ್ನು ಕಂಪನಿಗಳು ಕಡ್ಡಾಯವಾಗಿ ಗ್ರಾಹಕರಿಗೆ ವರ್ಗಾಯಿಸಬೇಕು ಎಂದು ಹೇಳಿಕೆ ನೀಡಿದ್ದರು. ಈಗ ಕೆಎಂಎಫ್ ಸ್ವಲ್ಪ ದಿನದಮಟ್ಟಿಗೆ ಮಾತ್ರ ಗ್ರಾಹಕರ ಮೂಗಿಗೆ ತುಪ್ಪ ಹಚ್ಚಿ ಅದು ಬಾಯಿ ತಲುಪುವ ಮುನ್ನವೇ ತುಪ್ಪ ಮತ್ತು ಬೆಣ್ಣೆಯ ಬೆಲೆಯನ್ನು ಏರಿಸುವ ಮೂಲಕ ತಾವೇ ಜಿಎಸ್‌ಟಿ ಇಳಿಕೆ ಲಾಭವನ್ನು ಇಟ್ಟುಕೊಂಡು ಗ್ರಾಹಕರನ್ನು ವಂಚಿಸಿದ್ದಾರೆ. ಬೆಲೆಗಳ ಮೇಲೆ ಗಮನ ಇಟ್ಟಿರುತ್ತೇವೆಂದು ಹೇಳಿಕೆ ನೀಡಿದ್ದ ಕೇಂದ್ರ ಸಚಿವರು ಈಗ ಕೆಎಂಎಫ್ ಮೇಲೆ ಯಾವ ಕ್ರಮ ಕೈಗೊಳ್ಳುತ್ತಾರೆ. **–ಕೆ.ಎಂ.ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಬುದ್ಧಿ ಬಂತು ನೆಮ್ಮದಿ ಹೋಯ್ತು ಡುಂ..ಡುಂ..ಡುಂ...!


ಬೆಳಗೆದ್ದು ದೇವರಿಗೆ ನಮಿಸುವಾಗ ಮನೆಯ ಹಿರಿಯರು ಒಳ್ಳೆ ವಿದ್ಯೆ–ಬುದ್ಧಿ ಕೊಡಪ್ಪ ಅಂತ ಕೇಳು ಎಂದು ಹೇಳುವುದು ವಾಡಿಕೆ. ಮನುಷ್ಯನಿಗೆ ಬೇರೆಲ್ಲಾ ಪ್ರಾಣಿಗಳಿಗಿಂತ ಹೆಚ್ಚಿನ ಬುದ್ಧಿ ಪ್ರಕೃತಿದತ್ತವಾಗಿಯೇ ಒಲಿದಿರುತ್ತದೆ. ಆದರೆ ಎಷ್ಟೋ ಜನರಿಗೆ ಆ ಬುದ್ಧಿಯು ಮನುಷ್ಯನಲ್ಲಿನ ನೆಮ್ಮದಿಯನ್ನು ಕಸಿಯುವ ಮಟ್ಟಕ್ಕೆ ಇರುವುದು ದುರದೃಷ್ಟಕರ. ಮನುಷ್ಯನಿಗೆ ಹೆಚ್ಚೆಚ್ಚು ಬುದ್ಧಿ ಇದ್ದಷ್ಟು ಹೆಚ್ಚೆಚ್ಚು ಸಮಾಧಾನ ಹಾಗೂ ತೃಪ್ತಿ ಎಂಬುದು ದುರ್ಲಭವಾಗಿಬಿಡುತ್ತದೆ. ಹೆಚ್ಚು ಬುದ್ಧಿಯಿಂದ ಹೆಚ್ಚು ಸುಖಪಡಬಹುದು, ಆದರೆ ಹೆಚ್ಚು ನೆಮ್ಮದಿ ಪಡೆಯುವುದು ಕಷ್ಟವಾಗಬಹುದು. ಸುಪ್ಪತ್ತಿಗೆಯು ಸುಖವಾದ ನಿದ್ರೆಯನ್ನು ನೀಡಬಹುದೇ ವಿನಃ ನೆಮ್ಮದಿಯ ನಿದ್ರೆಯನ್ನಲ್ಲ. ಸುಖವಾದ ನಿದ್ರೆಯನ್ನು ಯಾರು ಬೇಕಾದರೂ ಹೊಂದಬಹುದು, ಆದರೆ ನಿದ್ರಾಸುಖವನ್ನು ಅನುಭವಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ನಿದ್ರಾಸುಖ ಎಂದರೆ ಇಂದಿನ ಕರ್ಮಕ್ಕೆ ಯಾವುದೇ ಪಶ್ಚಾತ್ತಾಪವಿಲ್ಲದೆ, ನಾಳೆಯ ಚಿಂತೆಯಿಲ್ಲದೆ, ಯಾವುದೇ ಆತಂಕವಿಲ್ಲದೆ ಮೈಮರೆತು ಆನಂದದಿಂದ ಅನುಭವಿಸುವ ನಿದ್ರೆ. ಇದೇ ಸಾರ್ಥಕ ಬದುಕಿನ ಸೂಚ್ಯಂಕ.

ಕಡಿಮೆ ಲಗೇಜು ಇದ್ದಷ್ಟು ಪ್ರಯಾಣ ಸುಖಕರವಾಗಿರುತ್ತದೆ. ಹಾಗೆಯೇ ಕಡಿಮೆ ಬುದ್ಧಿ ಇದ್ದಷ್ಟು ನೆಮ್ಮದಿ ಹೆಚ್ಚಾಗಿರುತ್ತದೆ. ಅನೇಕರ ಮನೆಗಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಮನೆಯ ಮಾಲೀಕರಿಗೆ ಹೆಚ್ಚು ಬುದ್ಧಿ ಇರುತ್ತದೆ, ಐಷಾರಾಮದ ಬದುಕನ್ನು ಕಂಡುಕೊಂಡಿರುತ್ತಾರೆ. ಆದರೆ ಆ ಮನೆಯ ಸೇವಕರಿಗೆ ಇರುವಷ್ಟು ನಿದ್ರಾಸುಖ ಅವರಿಗೆ ಇರುವುದಿಲ್ಲ. ಸೇವಕರು ತಮಗೆ ಇರುವ ಕಡಿಮೆ ಸೌಕರ್ಯದಲ್ಲಿಯೇ ಅತ್ಯಾನಂದವನ್ನು ಅನುಭವಿಸುವ ಮನೋಭಾವ ಹೊಂದಿರುತ್ತಾರೆ. ಮಾಲೀಕರ ಐಷಾರಾಮದ ಬದುಕಿಗೆ ಹೊಟ್ಟೆಕಿಚ್ಚು ಪಡದೆ, ಪಾಲಿಗೆ ಬಂದದ್ದು ಪಂಚಾಮೃತ ಎಂದು ಭಾವಿಸಿ, ಅವರ ಬದುಕು ಅವರಿಗೆ ಎಂದು ಭಾವಿಸಿ ತಮಗೆ ದಕ್ಕಿದ ಬದುಕನ್ನು ಸಂಪೂರ್ಣವಾಗಿ ಅನುಭವಿಸುತ್ತಾರೆ. ಮಾಲೀಕರ ಮನೆಯವರು ದುಬಾರಿ ಬೆಲೆಯ ಬಟ್ಟೆ ಧರಿಸಿದಾಗ ಆನಂದ ಪಡೆದೇ ಇದ್ದರೂ, ಕಡಿಮೆ ಬೆಲೆಯ ಬಟ್ಟೆ ಧರಿಸುವ ಸೇವಕರ ಮನೆಯವರು ಅದನ್ನು ಆನಂದಿಸುತ್ತಾರೆ.

ಕೆಲ ವರ್ಷಗಳ ಹಿಂದೆ ಬೆಳಗಿನ ವಾಕಿಂಗ್‌ಗೆ ಮನೆಯಿಂದ ಹೊರಬಂದಾಗ ಕಂಡ ಒಂದು ದೃಶ್ಯ ನನ್ನನ್ನು ಅನೇಕ ಚಿಂತನೆಗಳಿಗೆ ದೂಡಿತು. ನಮ್ಮ ಮನೆ ಎದುರಿನ ಐಷಾರಾಮದ ಬಂಗಲೆಗೆ ಕೆಲಸಕ್ಕೆ ಬಂದ ಮನೆಗೆಲಸದಾಕೆಯು ಕಾಲಿಗೆ ಬೆಳ್ಳಿ ಗೆಜ್ಜೆ ಧರಿಸಿ, ಕೈಯಲ್ಲಿ ಗಾಜಿನ ಬಳೆ ಧರಿಸಿ, ಕತ್ತಿನಲ್ಲಿ ಕರಿಮಣಿ ಸರ ಧರಿಸಿ, ಮುಡಿಗೆ ಮಲ್ಲಿಗೆ ಮುಡಿದು ನಗುನಗುತಾ ಮನೆಯ ಗೇಟ್ ತೆಗೆದು ಹೊರಡುವ ಸಮಯಕ್ಕೆ ಮನೆಯ ಮಾಲಕಿಯು ವಾಕಿಂಗ್‌ಗೋಸ್ಕರ ಮನೆಯ ಹೊರಗೆ ಹೊರಟರು. ಕಾಲಲ್ಲಿ ಗೆಜ್ಜೆಯಿಲ್ಲ, ಕೈಯಲ್ಲಿ ಬಳೆಯಿಲ್ಲ, ಸರಗಳ್ಳರ ಭಯದಿಂದ ಕತ್ತಿನಲ್ಲಿ ಸರವಿಲ್ಲ, ಮುಖದಲ್ಲಿ ಮಂದಹಾಸವಿಲ್ಲ. ಇಬ್ಬರನ್ನು ಗಮನಿಸಿದಾಗ ಬದುಕನ್ನು ಅನುಭವಿಸಲು, ಸಂಭ್ರಮಿಸಲು ಸಂಪತ್ತು ಇದ್ದರಷ್ಟೇ ಸಾಲದು ಬದುಕನ್ನು ಅನುಭವಿಸುವ ಉತ್ತಮವಾದ ಮನಸ್ಥಿತಿಯೂ ಬೇಕು. ಆ ಸಮಯ ಕೆಲಸದವಳಿಗೆ ಮನೆಗೆಲಸ ಒಂದು ಹೊಟ್ಟೆಪಾಡು, ಆದರೆ ಮನೆ ಮಾಲಕಿಗೆ ಹೊಟ್ಟೆಯ ಬೊಜ್ಜನ್ನು ಕಡಿಮೆ ಮಾಡುವ ಪಾಡು. ಆದರೆ ಮನೆಗೆಲಸದಾಕೆಯಲ್ಲಿದ್ದ ಚೈತನ್ಯವು ಮನೆಯ ಮಾಲೀಕರಲ್ಲಿ ಕಾಣಲೇ ಇಲ್ಲ. ಅತಿಯಾದ ಬುದ್ಧಿಯು ಮನುಷ್ಯನನ್ನು ಅವಿಶ್ರಾಂತನನ್ನಾಗಿ ಮಾಡುತ್ತದೆ. ಸದಾ ಹೋಲಿಕೆ ಹಾಗೂ ಸ್ಪರ್ಧಾ ಮನೋಭಾವದಿಂದ ತಮ್ಮ ಬಳಿ ಇರುವ ಸಂಗತಿಗಳಿಂದ ಗರಿಷ್ಠ ಸಂತೋಷ ಪಡೆಯುವ ಮನಸ್ಥಿತಿ ಇರುವುದಿಲ್ಲ. ಒಣಪ್ರತಿಷ್ಠೆ ಹಾಗೂ ಪ್ರಶಂಸೆಗಾಗಿ ಸದಾ ಯತ್ನಿಸುವಂತೆ ಕಾಣುವ ಅನೇಕ ಬುದ್ಧಿವಂತರಿಗೆ ಸರಳತೆಯಲ್ಲಿಯೂ ಸಮಾಧಾನ ಪಡೆಯಬಹುದು ಎಂದ ಅರಿವು ಇರುವುದಿಲ್ಲ.

ಇದೊಂದು ಸ್ಪರ್ಧಾಯುಗ. ಬುದ್ಧಿವಂತರ ಯುಗ. ಇಡೀ ಜಗತ್ತು ಬುದ್ಧಿವಂತರಿಗೆ ಮಣೆ ಹಾಕುತ್ತದೆ. ಬುದ್ಧಿವಂತರಾಗಲು ಅಥವಾ ಇರುವ ಬುದ್ಧಿಯನ್ನು ವೃದ್ಧಿಸಿಕೊಳ್ಳಲು ಅನೇಕ ಪ್ರಯತ್ನಗಳು ನಿತ್ಯವೂ ನಡೆಯುತ್ತಿರುತ್ತವೆ. ಶಿಕ್ಷಣದ ಉದ್ದೇಶ ಜ್ಞಾನ ಸಂಪಾದನೆಗಿಂತ, ನೆಮ್ಮದಿಯ ಬದುಕನ್ನು ರೂಪಿಸಿಕೊಳ್ಳುವುದಕ್ಕಿಂತ ಬದಲಾಗಿ ಹೆಚ್ಚೆಚ್ಚು ಹಣಗಳಿಸಲು ಹಾಗೂ ಐಷಾರಾಮದ ಬದುಕನ್ನು ರೂಪಿಸಿಕೊಳ್ಳಲು ಬದಲಾಗಿಬಿಟ್ಟಿದೆ. ಸಮಾಜವೂ ಅಷ್ಟೆ ಮನುಷ್ಯನ ಬದುಕಿನ ಗುಣಮಟ್ಟವನ್ನು ಅಳೆಯುವ ಮಾನದಂಡಗಳನ್ನೇ ಬದಲಿಸಿಕೊಂಡಿದೆ. ನೆಮ್ಮದಿಯ ಬದುಕನ್ನು ಕಟ್ಟಿಕೊಂಡವರನ್ನು ಕಡೆಗಣಿಸಿ ಐಷಾರಾಮದ ಬದುಕನ್ನು ಕಂಡುಕೊಂಡವರನ್ನು ಪ್ರಶಂಸಿಸುತ್ತದೆ. ಇದರಿಂದ ಹೇಗಾದರೂ ಸರಿ, ಯಾವುದೇ ರೂಪದಲ್ಲಾದರೂ ಸರಿ ಹಣ ಗಳಿಸಿಬಿಡಬೇಕೆಂಬ ಬುದ್ಧಿಗೆ ಪ್ರೇರಣೆ ನೀಡುತ್ತದೆ. ಬುದ್ಧಿ ಎಂದಾಕ್ಷಣ ಸದ್ಬುದ್ಧಿಯೇ ಆಗಬೇಕೆಂದೇನಿಲ್ಲ, ದುರ್ಬುದ್ಧಿಯಾದರೂ ಸರಿ ಸಂಪತ್ತು ಶೇಖರಣೆಯಾಗಬೇಕು ಅಷ್ಟೆ. ತನ್ನ ಜೀವನ ಶೈಲಿಯನ್ನು ಸಮಾಜ ಮೆಚ್ಚಿ ಚಪ್ಪಾಳೆ ತಟ್ಟಬೇಕು. ಅದಕ್ಕಾಗಿ ತನ್ನಲ್ಲಿರುವ ಎಲ್ಲಾ ಬುದ್ಧಿಯನ್ನು ಖರ್ಚು ಮಾಡಬೇಕು. ಇರುವ ನೆಮ್ಮದಿ ಕಳೆದುಕೊಂಡರೂ ಸರಿ ಇಲ್ಲದ ಸಂಪತ್ತಿನ ಒಡೆಯನಾನಾಗಬೇಕು ಎಂಬ ಮನೋಭಾವ ಹೆಚ್ಚಾಗುತ್ತಿರುವ ಕಾರಣಕ್ಕೆ ಇಂದು ಮೋಸ, ವಂಚನೆ ಎಂಬುದು ಎಲ್ಲಾ ಕ್ಷೇತ್ರದಲ್ಲಿಯೂ ವಿಜೃಂಭಿಸುತ್ತಿದೆ. ನೆಮ್ಮದಿಗೆ ತಿಲಾಂಜಲಿ ಹೇಳಲಾಗುತ್ತಿದೆ.

ಸರ್ಕಾರದ ಕೆಲವು ಇಲಾಖೆಯಲ್ಲಿ ಲಂಚಾವತಾರ ತಾಂಡವವಾಡುವ ಕಡೆ ಸಜ್ಜನ ಉದ್ಯೋಗಿಯೊಬ್ಬ ತನ್ನ ಕರ್ತವ್ಯವನ್ನು ಸ್ವಚ್ಛಗಾಗಿ ನಿರ್ವಹಿಸಲು ಸಾಧ್ಯವೇ ಇಲ್ಲ ಅನ್ನುವಷ್ಟರ ಮಟ್ಟಿಗೆ ಇಂದು ಸಮಾಜದ ವ್ಯವಸ್ಥೆ ಹದಗೆಟ್ಟಿದೆ. ಲಂಚ ಪಡೆಯದೆ ಕೆಲಸ ಮಾಡುವವನನ್ನು ಬುದ್ಧಿಗೇಡಿ ಎಂದು ಕರೆಯುವಷ್ಟರ ಮಟ್ಟಿಗೆ ವ್ಯವಸ್ಥೆಯ ಮನೋಭಾವ ಬದಲಾಗಿದೆ. ಕುಟುಂಬದ ಸದಸ್ಯರು ಅಷ್ಟೆ, ನೆಮ್ಮದಿಯನ್ನು ಬಲಿಕೊಟ್ಟು ಐಷಾರಾಮವನ್ನು ಆಹ್ವಾನಿಸಲು ತುದಿಗಾಲಲ್ಲಿ ನಿಂತಿರುತ್ತಾರೆ. ಪಾಪಕಾರ್ಯ, ಪುಣ್ಯಕಾರ್ಯದ ಪರಿವಿಲ್ಲದೆ ಹಣಗಳಿಕೆಗೆ ಕೆಟ್ಟ ಬುದ್ಧಿಯನ್ನಾದರೂ ಬಳಸಿ ಖುಷಿಪಡುತ್ತಾರೆ. ತಾವು ಗಳಿಸಿದ ಸಂಪತ್ತು ತಮಗೆ ಸುಖ ನೀಡಬಹುದೇ ವಿನಃ ನೆಮ್ಮದಿಯನ್ನು ಅಲ್ಲ ಎಂಬ ಸತ್ಯದ ಅರಿವಿದ್ದರೂ, ನೆಮ್ಮದಿ ಕೆಡಿಸಿಕೊಂಡು ಮುಂದುವರಿಯುತ್ತಾರೆ. ನಂತರ ನೆಮ್ಮದಿ ಅರಸಿ ಗುಡಿ ಗೋಪುರಗಳಲ್ಲಿ ಪೂಜೆ, ಉತ್ಸವ ಮಾಡಿಸುತ್ತಾರೆ.



> “ ಇಂದು ಮದುವೆ ಹಾಗೂ ಇನ್ನಿತರ ಶುಭ ಕಾರ್ಯಗಳು ಸ್ಪರ್ಧಾರೂಪದಲ್ಲಿ ಏರ್ಪಾಡಾಗುತ್ತಿವೆ. ದುಂದುವೆಚ್ಚ ಮಾಡಿ ಸೆಲೆಬ್ರಿಟಿಗಳ ಕಾರ್ಯಗಳ ಹಾಗೆ ಮದುವೆಗಳು ಏರ್ಪಾಡಾಗುತ್ತಿವೆ. ಕಾರ್ಯಗಳು ಮುಗಿದ ಮೇಲೆ ಲೆಕ್ಕ ಹಾಕಿ ನೋಡಿದಾಗ, ಇಷ್ಟೆಲ್ಲಾ ಬೇಕಿತ್ತಾ? ಎಂಬ ಪ್ರಶ್ನೆ ಮೂಡುತ್ತದೆ. ಇನ್ನಾರನ್ನೋ ಅನುಕರಿಸಲು ಹೋಗಿ ಇಲ್ಲಸಲ್ಲದ ಸಾಲದ ಸುಳಿಗೆ ಸಿಲುಕಿ, ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡರು ಎನ್ನುವ ಹಾಗೆ? ಅದಕ್ಕಾಗಿ ಅಮೂಲ್ಯವಾದ ಆಸ್ತಿಗಳನ್ನು ಮಾರಿ ಪರಿತಪಿಸುತ್ತಾ ನೆಮ್ಮದಿಯನ್ನು ದೂರ ಮಾಡಿಕೊಳ್ಳುವವರೇ ಹೆಚ್ಚು. ಹಾಸಿಗೆ ಇದ್ದಷ್ಟು ಕಾಲು ಚಾಚುವುದಕ್ಕಿಂತ ಸಾಲ ಮಾಡಿ ಕಾಲು ಚಾಚುವಷ್ಟು ಚಾಪೆಯನ್ನು ಮಾಡಿಸಿಕೊಳ್ಳುತ್ತಿರುವವರೇ ಹೆಚ್ಚಾಗಿದ್ದಾರೆ. ದುಂದುವೆಚ್ಚದ ಕುರಿತು ಬುದ್ಧಿ ಹೇಳಲು ಬಂದವರನ್ನು ಬುದ್ಧಿಹೀನರು ಎಂದು ಗೇಲಿ ಮಾಡುವುದು ಉಂಟು. ವಾಸ್ತವದಲ್ಲಿ ಹೀಗೆ ಗೇಲಿಗೆ ಒಳಗಾಗುವ ಎಷ್ಟೋ ಜನ ನೆಮ್ಮದಿಯ ಜೀವನವನ್ನು ಕಂಡುಕೊಂಡಿರುತ್ತಾರೆ.

ನಿತ್ಯವೂ ನೆಮ್ಮದಿ ಹಾಳಾಗುವಂತಹ ಕೆಲಸಗಳನ್ನು ಮಾಡಿ ರಾತ್ರಿ ಮಲಗುವ ಮುನ್ನ ನೆಮ್ಮದಿಯೇ ಇಲ್ಲ, ಈ ಬದುಕೇ ಬೇಸರವಾಗಿದೆ ಎಂದು ಗೊಣಗಿದರೆ ಏನು ಫಲ. ಇದನ್ನು ಕಂಡು ಡಿ.ವಿ.ಜಿ.ಯವರು ತಮ್ಮ ಕಗ್ಗವೊಂದರಲ್ಲಿ ಹೀಗೆ ಹೇಳಿದ್ದಾರೆ. ಬೆದಕಾಟ ಬದುಕೆಲ್ಲ; ಚಣಚಣವು ಹೊಸಹಸಿವು, ಅದಕಾಗಿ, ಇದಕಾಗಿ ಮತ್ತೊಂದಕ್ಕಾಗಿ, ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ, ಕುದಿಯುತಿಹುದಾವಗಂ ಮಂಕುತಿಮ್ಮ. ಮನುಷ್ಯನಿಗೆ ತಾನು ಗಳಿಸಿದ್ದರಲ್ಲಿ ಸಂತೃಪ್ತಿ ಕಾಣದೆ ಅತೃಪ್ತಿ ಹೊಂದುವಷ್ಟು ಬುದ್ಧಿ ಇದ್ದರೆ ಅವನ ಬದುಕು ನರಕವಾಗಿಬಿಡುತ್ತದೆ. ಇರುವುದನ್ನು ಸಂಪೂರ್ಣ ಅನುಭವಿಸಿ ಸಂತೃಪ್ತಿ ಕಂಡು ಅದರಿಂದ ಸಾರ್ಥಕತೆಯನ್ನು ಕಂಡುಕೊಂಡಾಗ ಮಾತ್ರ ನೆಮ್ಮದಿ ಮನೆ ಮಾಡುತ್ತದೆ. ಕೆಲವರು ಅನವಶ್ಯಕ ವಸ್ತುವಿಷಯಗಳಿಗೆ ಆಸೆಪಟ್ಟು ಇರುವ ನೆಮ್ಮದಿಯನ್ನು ಹಾಳು ಮಾಡಿಕೊಂಡು, ನಂತರ ಪರಿತಪಿಸುತ್ತಾರೆ. ಕೆಲವು ಸಂಗತಿಳಗನ್ನು ಕಳೆದುಕೊಂಡ ಮೇಲೆ ಗಳಿಸಬಹುದು, ಆದರೆ ನೆಮ್ಮದಿ ವಿಚಾರದಲ್ಲಿ ಹಾಗಾಗುವುದಿಲ್ಲ. ಒಮ್ಮೆ ಕಳೆದುಕೊಂಡರೆ ಮತ್ತೆ ಗಳಿಸುವುದು ಅಸಾಧ್ಯವೆನ್ನಬಹುದು.

ಬದುಕಿನಲ್ಲಿ ಕೆಲವು ಸಂಗತಿಗಳಿಗೆ ಬೆಲೆ ಕಟ್ಟಲಾಗದು. ಅದರಲ್ಲಿ ನೆಮ್ಮದಿಯು ಸಹ ಒಂದು. ಹುಟ್ಟು ಹಬ್ಬದ ಸಂದರ್ಭದಲ್ಲಿ ಬಹುತೇಕರು ಸುಖವಾದ ಬದುಕು, ಐಶ್ವರ್ಯದ ಬದುಕು ನಿಮ್ಮದಾಗಲಿ ಎಂದು ಹಾರೈಸುತ್ತಾರೆ. ಆದರೆ ಯಾರೂ ಸಹ ನೆಮ್ಮದಿಯ ಬದುಕು ನಿಮ್ಮದಾಗಲಿ ಎಂದು ಹಾರೈಸುವುದಿಲ್ಲ. ಇಂದಿನ ಆಧುನಿಕ ಬದುಕಿನಲ್ಲಿ ಹುಟ್ಟಿದ ಮಗುವಿನಿಂದ ಇನ್ನೇನು ಸ್ಮಶಾನದ ಪಾಲಾಗುವ ವೃದ್ಧರ ತನಕ ಒತ್ತಡದ ಬದುಕನ್ನು ಎಲ್ಲರೂ ನಡೆಸುತ್ತಿದ್ದಾರೆ. ಅದರಿಂದ ಅನೇಕ ಮಾನಸಿಕ ಹಾಗೂ ದೈಹಿಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ನೆಮ್ಮದಿ ಎಂಬುದು ಮರೀಚಿಕೆಯಾಗಿದೆ. ವಾಸ್ತವದಲ್ಲಿ ನೆಮ್ಮದಿ ಎಂಬುದು ಹೊರಗೆ ಹುಡುಕಿ ಕಂಡುಕೊಳ್ಳುವಂತಹ ಸಂಗತಿಯಲ್ಲ. ನಮ್ಮೊಳಗೆ ನಾವೇ ಕಂಡುಕೊಳ್ಳುವಂತದ್ದು. ಅತಿಯಾದ ಬುದ್ಧಿವಂತಿಕೆ ಬಳಸಿ ಗಳಿಸಲು ಹೊರಟರೆ ನೆಮ್ಮದಿ ಮರೆಯಾಗಿಬಿಡುತ್ತದೆ. ನ್ಯಾಯ ಮಾರ್ಗದಲ್ಲಿ ಅಗತ್ಯವಿರುವಷ್ಟು ಗಳಿಸಿ, ಗಳಿಸಿದ್ದನ್ನು ತನ್ನ ಕುಟುಂಬ ಹಾಗೂ ಬಂಧು ಬಳಗದೊಂದಿಗೆ ಅನುಭವಿಸಿ ಸಂತೋಷ ಕಂಡುಕೊಂಡರೆ ನೆಮ್ಮದಿ ಮನೆ ಮಾಡುತ್ತದೆ.

ಬದುಕಿನಲ್ಲಿ ಬದಲಾವಣೆ ಬೇಕು ನಿಜ. ಬದುಕಿನಲ್ಲಿ ಅಭಿವೃದ್ಧಿ ಕಂಡು ಜೀವನದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಕಾಂಕ್ಷೆ ಎಲ್ಲರಿಗೂ ಇರುತ್ತದೆ. ಆದರೆ ಅದಕ್ಕಾಗಿ ಅಮೂಲ್ಯವಾದ ನೆಮ್ಮದಿಯನ್ನೇ ಬಲಿಕೊಡಬಾರದು. ಇಂದು ಮದುವೆ ಹಾಗೂ ಇನ್ನಿತರ ಶುಭ ಕಾರ್ಯಗಳು ಸ್ಪರ್ಧಾ ರೂಪದಲ್ಲಿ ಏರ್ಪಾಡಾಗುತ್ತಿವೆ. ದುಂದುವೆಚ್ಚ ಮಾಡಿ ಸೆಲೆಬ್ರಿಟಿಗಳ ಕಾರ್ಯಗಳ ಹಾಗೆ ಮದುವೆಗಳು ಏರ್ಪಾಡಾಗುತ್ತಿವೆ. ಕಾರ್ಯಗಳು ಮುಗಿದ ಮೇಲೆ ಲೆಕ್ಕ ಹಾಕಿ ನೋಡಿದಾಗ, ಇಷ್ಟೆಲ್ಲಾ ಬೇಕಿತ್ತಾ? ಎಂಬ ಪ್ರಶ್ನೆ ಮೂಡುತ್ತದೆ. ಇನ್ನಾರನ್ನೋ ಅನುಕರಿಸಲು ಹೋಗಿ ಇಲ್ಲಸಲ್ಲದ ಸಾಲದ ಸುಳಿಗೆ ಸಿಲುಕಿ, 'ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡರು ಎನ್ನುವ ಹಾಗೆ' ಅದಕ್ಕಾಗಿ ಅಮೂಲ್ಯವಾದ ಆಸ್ತಿಗಳನ್ನು ಮಾರಿ ಪರಿತಪಿಸುತ್ತಾ ನೆಮ್ಮದಿಯನ್ನು ದೂರ ಮಾಡಿಕೊಳ್ಳುವವರೇ ಹೆಚ್ಚು. ಹಾಸಿಗೆ ಇದ್ದಷ್ಟು ಕಾಲು ಚಾಚುವುದಕ್ಕಿಂತ ಸಾಲ ಮಾಡಿ ಕಾಲು ಚಾಚುವಷ್ಟು ಚಾಪೆಯನ್ನು ಮಾಡಿಸಿಕೊಳ್ಳುತ್ತಿರುವವರೇ ಹೆಚ್ಚಾಗಿದ್ದಾರೆ. ದುಂದುವೆಚ್ಚದ ಕುರಿತು ಬುದ್ಧಿ ಹೇಳಲು ಬಂದವರನ್ನು ಬುದ್ಧಿಹೀನರು ಎಂದು ಗೇಲಿ ಮಾಡುವುದು ಉಂಟು. ವಾಸ್ತವದಲ್ಲಿ ಹೀಗೆ ಗೇಲಿಗೆ ಒಳಗಾಗುವ ಎಷ್ಟೋ ಜನ ನೆಮ್ಮದಿಯ ಜೀವನವನ್ನು ಕಂಡುಕೊಂಡಿರುತ್ತಾರೆ.

ಒಂದು ವಸ್ತುವನ್ನು ಕಳೆದುಕೊಂಡ ಮೇಲೆಯೇ ಅದರ ಬೆಲೆ ತಿಳಿಯುತ್ತದೆ ಎಂದು ಹೇಳುತ್ತಾರೆ. ಅದು ನೆಮ್ಮದಿಗೆ ಹೆಚ್ಚು ಅನ್ವಯವಾಗುತ್ತದೆ. ಯಾರಿಗೋ ಮೆಚ್ಚಿಸಲು, ಇನ್ನಾರಿಗೂ ಖುಷಿ ಕೊಡಲು ನಮ್ಮ ನೆಮ್ಮದಿಯನ್ನು ಕಳೆದುಕೊಳ್ಳಬಾರದು. ಅನೇಕ ಆಧ್ಯಾತ್ಮಿಕ ಚಿಂತಕರು ತಮಗೆ ಇರುವ ದಿವ್ಯವಾದ ಬುದ್ಧಿಯನ್ನು ತಮ್ಮ ಕಾಯಕಕ್ಕೆ ಹಾಗೂ ನೆಮ್ಮದಿ ವೃದ್ಧಿಗೆ ಬಳಸುವುದನ್ನು ಕಾಣಬಹುದು. ಅನೇಕರು ತಮ್ಮ ಹವ್ಯಾಸಗಳಿಂದ ನೆಮ್ಮದಿಯನ್ನು ಕಂಡುಕೊಳ್ಳುತ್ತಾರೆ. ಅಂತಹ ಕಾಯಕ ನಿಷ್ಠೆ, ಹವ್ಯಾಸಗಳಿಂದ ನೆಮ್ಮದಿಯ ಬದುಕು ಎಲ್ಲರಿಗೂ ಲಭಿಸಲಿ.

ಹೂರಣ: ಬುದ್ಧಿಯು ಬಿಕರಿಗೆ ಸಿಗಬಹುದು ಆದರೆ ನೆಮ್ಮದಿಯಲ್ಲ.

ರಾಜರ ಇತಿಹಾಸ ಆಧಾರಿತ ಸಿನಿಮಾ ಅಪಾಯಕಾರಿ

ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಸ್ವೀಕರಿಸಿ ಚಿಂತಕ ಪ್ರೊ.ರಹಮತ್ ತರೀಕೆರೆ ಅಭಿಪ್ರಾಯ

ಮೈಸೂರು, ನ.9(ಜಿಎಲ್‌ಯು)– ಸಾಮ್ರಾಜ್ಯ ವಿಸ್ತರಣೆಗಾಗಿ ಸಾವಿರಾರು ಸೈನಿಕರ ಬಲಿ ಪಡೆದು, ಅವರ ಪತ್ನಿಯರನ್ನು ವಿಧವೆಯರನ್ನಾಗಿ ಮಾಡಿದ ರಾಜರ ಇತಿಹಾಸ ಆಧಾರಿತ ಸಿನಿಮಾ ಅಪಾಯಕಾರಿ ಎಂದು ಪ್ರೊ.ಮ.ಗು.ಪ್ರಶಸ್ತಿ ಪುರಸ್ಕೃತರೂ ಆದ ಚಿಂತಕ ಪ್ರೊ.ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಮೈಸೂರಿನ ಅಗ್ರಹಾರದ ಶ್ರೀ ರಾಜೇಂದ್ರ ಭವನದಲ್ಲಿ ಇಂದು ಪ್ರೊ.ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನದ ವತಿಯಿಂದ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ರಾಜ್ಯ ವಿಸ್ತರಣೆಗಾಗಿ ಸಾವಿರಾರು ಸೈನಿಕರನ್ನು ಬಲಿ ಪಡೆದು, ಅವರ ಪತ್ನಿಯರನ್ನು ವಿಧವೆಯರನ್ನಾಗಿ ಮಾಡಿದ ಇಂತಹ ರಾಜ್ಯರ ವೈಭವೀಕರಣದ ಅವಶ್ಯವಿದೆಯೇ? ಎಂದು ಪ್ರಶ್ನಿಸಿದರು.

ಬಹಳಷ್ಟು ಚಕ್ರವರ್ತಿಗಳು ಹಾಗೂ ಪಾಳೆಗಾರರು ಜನಪಯೋಗಿ ಕೆಲಸ ಮಾಡಿದ್ದಾರೆ. ಕೆರೆ, ಕಟ್ಟೆ, ಅಣೆಕಟ್ಟು ನಿರ್ಮಾಣ ಮಾಡಿದ್ದಾರೆ. ಜನರಿಗೆ ಅನುಕೂಲವಾಗುವ ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದು, ಮಾದರಿ ಸ್ಥಾನದಲ್ಲಿದ್ದಾರೆ. ಇಂತಹವರು ನಮಗೆ ಮಾದರಿಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಚಿಂತಕ ಪ್ರೊ.ರಹಮತ್ ತರೀಕೆರೆ ಅವರಿಗೆ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಮ್ರಾಜ್ಯ ವಿಸ್ತರಣೆ ಮಾಡುವ ರಾಜರ ಇತಿಹಾಸದ ತಿರುಳು ಇಟ್ಟುಕೊಂಡು ಸಿನಿಮಾ ಮಾಡುವುದು ಅಪಾಯಕಾರಿಯಾಗಿದೆ. ಇಂತಹ ಸಿನಿಮಾಗಳು ಹಿಂಸೆಯನ್ನು ಪ್ರಚೋದಿಸುತ್ತವೆ. ಜೊತೆಗೆ ಸಮಾಜಕ್ಕೆ ಕೆಟ್ಟ ಸಂದೇಶ ನೀಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಯುದ್ಧ ಮಾಡದೆ, ಅಭಿವೃದ್ಧಿ ಮಾಡಿರುವ ಸೈನಿಕರ ಇತಿಹಾಸವನ್ನು ಬೇರೆ ಕಣ್ಣಿನಿಂದ ನೋಡಬೇಕು. ಇಂತಹವರ ಇತಿಹಾಸವನ್ನು ಸಾರಿ ಹೇಳಿ, ಇಂದಿನವರು ಅದನ್ನು ಅನುಸರಿಸುವಂತೆ ಪ್ರೇರಣೆ ನೀಡಬೇಕು ಎಂದು ಪ್ರೊ.ರಹಮತ್ ತರೀಕೆರೆ ಸಲಹೆ ನೀಡಿದರು.

ಸಂಸ್ಕೃತಿ ಚಿಂತಕ ಶಂಕರ ದೇವನೂರು ಮಾತನಾಡಿ, ಪ್ರೊ.ಮಲೆಯೂರು ಗುರುಸ್ವಾಮಿ ಹೆಸರಿನಲ್ಲಿ ನೀಡುತ್ತಿರುವ ಪ್ರಶಸ್ತಿ ಪ್ರಧಾನ ಭಾವನಾತ್ಮಕತೆಯನ್ನು ಬಿಂಬಿಸುತ್ತದೆ. ಪ್ರೊ.ಮಲೆಯೂರು ಗುರುಸ್ವಾಮಿ ನಮ್ಮಂತಹ ಬಹಳಷ್ಟು ಜನರಿಗೆ ಗುರುಗಳಾಗಿದ್ದಾರೆ. ಅವರಿಗೆ ಪ್ರಭುತ್ವ, ತಾತ್ವಿಕತೆ ಹಾಗೂ ಭಾಷೆ ಮೇಲೆ ಹಿಡಿತವಿತ್ತು. ಕ್ಲಾಸ್ ಮತ್ತು ಮಾಸ್ ಎರಡೂ ಆಗಿದ್ದ ಅವರು ಸಾತ್ವಿಕ ಗುಣವುಳ್ಳ ವಿಶಿಷ್ಟ ವ್ಯಕ್ತಿಯಾಗಿದ್ದರು. ಇಂತವರ ಕೃತಿಯನ್ನು ನಾವು ಖರೀದಿಸಿ, ಅದರ ಸತ್ವ ತಿಳಿಯಬೇಕು. ಈ ಮೂಲಕ ಮನುಷ್ಯ ವಿಸ್ತರಣೆಗೊಳ್ಳುತ್ತಾ, ಪ್ರಜ್ಞಾವಂತಿಕೆ ಬೆಳೆಸಿಕೊಳ್ಳಬೇಕು ಎಂದರು.

ನೊಂದು, ಬೆಂದು ಶಿಕ್ಷಣ ಪಡೆಯಲು ಸಾಧ್ಯವಿಲ್ಲ ಎಂಬ ಬಹಳಷ್ಟು ಜನರಿಗೆ ಪ್ರೊ.ಮಲೆಯೂರು ಗುರುಸ್ವಾಮಿ ಅವರು ಆಸರೆಯಾಗಿದ್ದರು. ಇದರಿಂದ ಬಹಳಷ್ಟು ಜನರು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಯಿತು ಎಂದು ಶಂಕರ ದೇವನೂರು ಹೇಳಿದರು. ಪ್ರೊ.ರಹಮತ್ ತರಿಕೆರೆ ಅವರಿಗೆ ಪ್ರೊ.ಮಲೆಯೂರು ಗುರುಸ್ವಾಮಿ ಅವರ ಹೆಸರಿನ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು. ಜಾನಪದ ವಿದ್ವಾಂಸ ಪ್ರೊ.ಪಿ.ಕೆ.ರಾಜಶೇಖರ್, ಪ್ರತಿಷ್ಠಾನದ ಗೌರವಾಧ್ಯಕ್ಷೆ ಕೆ.ಎಸ್.ಜಯಂತಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇಂದಿನ ಮಕ್ಕಳು ಒಳ್ಳೆಯ ವಿಚಾರ ಆಲಿಸುವ ಆಸಕ್ತಿ ಕಳೆದುಕೊಂಡಿದ್ದಾರೆ

ಇಂದಿನ ಮಕ್ಕಳು ಒಳ್ಳೆಯ ವಿಚಾರಗಳನ್ನು ಆಲಿಸುವ ಆಸಕ್ತಿ ಕಳೆದುಕೊಂಡು, ಪರಂಪರೆಯ ಬೇರುಗಳ ಪರಿಚಯ ಕಳೆದುಕೊಂಡಿದ್ದಾರೆ. ಸಂವಾದ ಕೂಡ ನೆಲೆ ಕಳೆದುಕೊಂಡು ವಿವಾದಗಳೇ ಹೆಚ್ಚಾಗುತ್ತಿವೆ. ಸಮಕಾಲೀನ ಪರಂಪರೆ ತಿಳಿಯಲು ಸಂವಾದ ಬಹಳ ಮುಖ್ಯವಾಗಿದೆ. ಈ ಹಿನ್ನೆಲೆ ಇದರ ಪ್ರಾಮುಖ್ಯತೆಯನ್ನು ಅರಿತುಕೊಳ್ಳಬೇಕು.

–ಶಂಕರ ದೇವನೂರು, ಸಂಸ್ಕೃತಿ ಚಿಂತಕರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹಿರಿಯ ನಟ ದಿ.ಕೆ.ಎಸ್.ಅಶ್ವಥ್ ಅವರ ಪತ್ನಿ ಎನ್.ಆರ್.ಶಾರದಾ ನಿಧನ



ಮೈಸೂರು,ನ.9– ಚಾಮಯ್ಯ ಮೇಷ್ಟ್ರು ಖ್ಯಾತಿಯ ಕನ್ನಡ ಚಲನಚಿತ್ರರಂಗದ ಹಿರಿಯ ನಟ ದಿವಂಗತ ಕೆ.ಎಸ್.ಅಶ್ವಥ್ ಅವರ ಪತ್ನಿ ಎನ್.ಆರ್.ಶಾರದಾ (96) ಅವರು ವಯೋ ಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾದರು.

ಮೈಸೂರಿನ ಸರಸ್ವತಿಪುರಂನ 4ನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಮೃತರ ನಿವಾಸದ ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮೃತರು, ಹಿರಿಯ ನಟ ಶಂಕರ್ ಅಶ್ವಥ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ. ನಾಳೆ (ನ.10ರ ಸೋಮವಾರ) ಮಧ್ಯಾಹ್ನ 12ಕ್ಕೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಹುಟ್ಟುಹಬ್ಬದ ಶುಭಾಶಯ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಖಾಸಗಿ ಕಾರ್ಯಕ್ರಮ ನಿಮಿತ್ತ ಭಾನುವಾರ ರಾತ್ರಿ ಮೈಸೂರಿಗೆ ಆಗಮಿಸಿದ್ದ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ನಗರ ಕಾರ್ಯದರ್ಶಿ ಕಿರಣ್ ಗೌಡ, ಬಿಜೆಪಿ ಮುಖಂಡರಾದ ಪ್ರಕಾಶ್, ಅಶೋಕ್, ಹರೀಶ್, ಪ್ರಕಾಶ್, ನಮಿತ್ ಮತ್ತಿತರರು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮಾಜಿ ಶಾಸಕ ನಿರಂಜನ್‌ಕುಮಾರ್, ಬಿಜೆಪಿ ನಗರ ಉಪಾಧ್ಯಕ್ಷ ಸೋಮಶೇಖರರಾಜು, ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಕುಂಬಾರಕೊಪ್ಪಲು ಬಂಗಾರಪ್ಪ, ಉಮೇಶ್ ಮತ್ತಿತರರಿದ್ದರು.

ಮನಿ ಲ್ಯಾಂಡ್ರಿಂಗ್ ಮಾಡಿದ್ದೀರೆಂದು ಬೆದರಿಸಿ ಆನ್‌ಲೈನ್ ಮೂಲಕ ನಿವೃತ್ತರಿಗೆ 1.38 ಕೋಟಿ ದೋಖಾ

ಮೈಸೂರು, ನ.9– ಮನಿ ಲ್ಯಾಂಡ್ರಿಂಗ್ ಆರೋಪಿ ನರೇಶ್ ಗೋಯಲ್ ಮನೆಯಲ್ಲಿ ನಿಮ್ಮ ದಾಖಲೆಗಳು ಪತ್ತೆಯಾಗಿದ್ದು, ಅವುಗಳನ್ನು ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗಿದೆ ಎಂದು ಮೈಸೂರಿನ ನಿವೃತ್ತರೊಬ್ಬರನ್ನು ಬೆದರಿಸಿ, 1.38 ಕೋಟಿಗೂ ಹೆಚ್ಚು ಹಣವನ್ನು ಲಪಟಾಯಿಸಲಾಗಿದೆ.

ಕುವೆಂಪುನಗರದ 66 ವರ್ಷದ ವ್ಯಕ್ತಿಗೆ ನ.2ರಂದು ಅಪರಿಚಿತನೋರ್ವ ಕರೆ ಮಾಡಿ, ತನ್ನನ್ನು ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI)ದ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಾನೆ. ವಿಷಯವೇನೆಂದು ಕೇಳಿದಾಗ ನಿಮ್ಮ ಮೊಬೈಲ್ ನಂಬರ್ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಬಳಕೆಯಾಗುತ್ತಿದ್ದು, ನಿಮ್ಮೆಲ್ಲಾ ಮೊಬೈಲ್ ನಂಬರ್‌ಗಳನ್ನು ಬ್ಲಾಕ್ ಮಾಡುವುದಾಗಿ ಹೇಳಿದ್ದಾನೆ.

ನಂತರ ವಿಡಿಯೋ ಕಾಲ್ ಮಾಡಿದ ಮತ್ತೋರ್ವ ತಾನು ಸಬ್‌ಇನ್ಸ್‌ಪೆಕ್ಟರ್ ಎಂದು ಹೇಳಿಕೊಂಡು, ಐಡೆಂಟಿಟಿ ದುರುಪಯೋಗ ಆಗಿರುವ ಬಗ್ಗೆ ದೂರು ತೆಗೆದುಕೊಂಡಿದ್ದಾನೆ. ಬಳಿಕ ತನಿಖಾಧಿಕಾರಿ ಎಂದು ಹೇಳಿಕೊಂಡ ಮತ್ತೋರ್ವ ವಿಡಿಯೋ ಕಾಲ್ ಮಾಡಿ, ನಿಮ್ಮ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಗಳು ವಿವಿಧ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಬಳಕೆಯಾಗಿವೆ. ಅಲ್ಲದೆ ನರೇಶ್ ಗೋಯಲ್‌ನ ಮನಿಲ್ಯಾಂಡ್ರಿಂಗ್ ಕೇಸ್‌ನಲ್ಲಿ ಆತನ ಮನೆಯಲ್ಲಿ ಪರಿಶೀಲನೆ ನಡೆಸಿದಾಗ ನಿಮ್ಮ ಆಧಾರ್ ಕಾರ್ಡ್ ಹಾಗೂ ಎಟಿಎಂ ಕಾರ್ಡ್‌ಗಳು ಸಿಕ್ಕಿದ್ದು, ಇವುಗಳನ್ನು ಮನಿಲ್ಯಾಂಡ್ರಿಂಗ್‌ನಲ್ಲಿ ಬಳಸಿಕೊಂಡಿರುವುದರಿಂದ ನಿಮ್ಮ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ ಎಂದು ಬೆದರಿಸಿದ್ದಾನೆ ಇದೇ ವೇಳೆ ಆಧಾರ್ ಹಾಗೂ ಎಟಿಎಂ ನಕಲಿ ಪ್ರತಿಗಳನ್ನು ಕಳುಹಿಸಿ, ಇದು ರಾಷ್ಟ್ರೀಯ ಗೌಪ್ಯತೆ ಪ್ರಕರಣವಾದ್ದರಿಂದ ಯಾರಿಗೂ ತಿಳಿಸದಂತೆ ಎಚ್ಚರಿಸಿದ್ದಾನೆ.


ಇದರಿಂದ ಹೆದರಿದ ಮೈಸೂರಿನ ವ್ಯಕ್ತಿ, ತಮ್ಮ ದಾಖಲೆಗಳನ್ನು ಹೇಗೋ ಪಡೆದು ಬಳಸಿಕೊಂಡಿರಬಹುದು ಎಂದು ನಂಬಿದ್ದಾರೆ. ಮಾತು ಮುಂದುವರೆಸಿದ ವಂಚಕರು, ಫಿಸಿಕಲ್ ಅರೆಸ್ಟ್ ಹಾಗೂ ಫಂಡ್ಸ್ ಫ್ರೀಜ್ ಕಂಟ್ರೋಲ್‌ಗೆ ಆದೇಶ ಮಾಡಲಾಗಿದೆ. ಆದರೆ ನೀವು ಹಿರಿಯ ನಾಗರೀಕರಾಗಿರುವುದರಿಂದ ಆದ್ಯತೆಯ ತನಿಖೆ ನಡೆಸಲಾಗುವುದು ಎಂದು ವಿಡಿಯೋ ಕಾಲ್‌ನಲ್ಲೇ ಕೋರ್ಟ್ ಮಾದರಿ ವಿಚಾರಣೆಯನ್ನೂ ನಡೆಸಿ, ಒಂದು ವಾರ ಕಸ್ಟೋಡಿಯಲ್ ರಿಮ್ಯಾಂಡ್‌ಗೆ ಆದೇಶಿಸಿದ್ದಾರೆ. ಈ ವೇಳೆ ಆಸ್ತಿಯ ವಿವರಗಳನ್ನು ಪಡೆದು, ಅವುಗಳ ಪರಿಶೀಲನೆ ನಡೆಸಬೇಕಾಗಿ ಹೇಳಿದ್ದಾರೆ. ಅಲ್ಲದೆ 1,38,90,000 ರೂ. ವರ್ಗಾಯಿಸಿಕೊಂಡು ಪರಿಶೀಲನೆ ನೆಪದಲ್ಲಿ ಲಪಟಾಯಿಸಿದ್ದಾರೆ. ವಂಚಿಸಿರುವುದು ತಡವಾಗಿ ತಿಳಿದಿದ್ದು, ನಿನ್ನೆ ಮೈಸೂರಿನ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಶ್ರೀ ಕನಕ ಸೇವಾ ರತ್ನ' ಪ್ರಶಸ್ತಿ ಪ್ರದಾನ



ಶ್ರೀ ಕನಕದಾಸರ ಜಯಂತ್ಯೋತ್ಸವದ ಪ್ರಯುಕ್ತ ಮೈಸೂರಿನ ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗದ ವತಿಯಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್‌ಗೆ 'ಶ್ರೀ ಕನಕ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಹಿರಿಯ ವಕೀಲ ರವಿಚಂದ್ರೇಗೌಡ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪ್ರಕಾಶ್ ಪ್ರಿಯದರ್ಶನ್ ಚಿತ್ರದಲ್ಲಿದ್ದಾರೆ.

ಟೆನಿಸ್ ಸಿಂಗಲ್ಸ್, ಡಬಲ್ಸ್‌ನಲ್ಲಿ ಪ್ರಶಸ್ತಿ



ಮೈಸೂರು ಟೆನಿಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ನಾಗರಾಜ್ ಟೆನಿಸ್ ಕ್ಲಬ್‌ನ ಎಸ್.ಯಶ್ಮಿತಾ ಗೌಡ(ಬಲತುದಿ) ಸಿಂಗಲ್ಸ್ ಕಪ್ ಗೆಲ್ಲುವುದರೊಂದಿಗೆ ಸರಯು ವೆಲೂರಿ ಅವರೊಂದಿಗೆ ಡಬಲ್ಸ್ ಕಪ್ ಅನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಕ್ಲಬ್‌ನ ಗೌರವ ಕಾರ್ಯದರ್ಶಿ ರಮೇಶ್ ಕೆಂಚಪ್ಪ, ಗೌರವಾಧ್ಯಕ್ಷ ಶ್ರೀನಿವಾಸ್, ಕೋಚ್ ಮಂಜುನಾಥ್, ಟೆನ್ನಿಸ್ ಪಟು ಸರಯು ವೆಲೂರಿ ಚಿತ್ರದಲ್ಲಿದ್ದಾರೆ. ಯಶ್ಮಿತಾ ಗೌಡ, ಕೆ.ಎಂ.ಶೇಷಣ್ಣ ಮತ್ತು ಜಿ.ಲಲಿತಾ ಅವರ ಮೊಮ್ಮಗಳು.

ಕೆ.ಎಸ್.ವೆಂಕಟೇಶ್ ಗೌಡ ನಿಧನ




ಹುಣಸೂರು, ನ.9– ತಾಲೂಕಿನ ಕಾಳೇಗೌಡನ ಕೊಪ್ಪಲಿನ ಮಾಜಿ ಚೇರ್ಮನ್ ಶಿವೇಗೌಡರ ಪುತ್ರ ಕೆ.ಎಸ್.ವೆಂಕಟೇಶ್ ಗೌಡ(58) ಭಾನುವಾರ ನಿಧನರಾದರು.

ಇವರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಸ್ವಗ್ರಾಮದ ನಿವಾಸದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23



ಚೆಲುವ ನಾರಾಯಣಸ್ವಾಮಿಯ ದರ್ಶನ ಪಡೆದ ಉಪರಾಷ್ಟ್ರಪತಿ ರಾಧಾಕೃಷ್ಣನ್

ರಾಮಾನುಜರ ತಪೋಭೂಮಿ ಅಭಿವೃದ್ಧಿಗೆ ಸಹಕಾರದ ಭರವಸೆ




ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮೇಲುಕೋಟೆಯ ಚೆಲುವನಾರಾಯಣಸ್ವಾಮಿಯ ದರ್ಶನ ಪಡೆದರು. ಈ ವೇಳೆ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿಗಳನ್ನು ದೇವಾಲಯದ ವತಿಯಿಂದ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ನಂತರ ರಾಜಾಶೀರ್ವಾದ ನೆರವೇರಿಸಲಾಯಿತು.

ಮೇಲುಕೋಟೆ ನ.9– ಭಾರತದ ನೂತನ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭಾನುವಾರ ಚೆಲುವನಾರಾಯಣ ಸ್ವಾಮಿಯ ದರ್ಶನ ಪಡೆದು ರಾಮಾನುಜರ ತಪೋಭೂಮಿ ಮೇಲುಕೋಟೆಯ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಚೆಲುವನಾರಾಯಣಸ್ವಾಮಿ ದಿವ್ಯಕ್ಷೇತ್ರ ಮೇಲುಕೋಟೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಬೇಕು ಎಂಬ ಸ್ಥಾನಾಚಾರ್ಯ ಹಾಗೂ ಪಾರುಪತ್ತೇಗಾರ್ ಶ್ರೀನಿವಾಸ ನರಸಿಂಹನ್ ಗುರೂಜಿಯವರ ಮನವಿ ಆಲಿಸಿದ ಉಪರಾಷ್ಟ್ರಪತಿಗಳು, ದೇವರ ದರ್ಶನ ಪಡೆದ ನಂತರ ಅನೌಪಚಾರಿಕವಾಗಿ ಭರವಸೆ ನೀಡಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಸಹಕಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಮನ್ವಯದಲ್ಲಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ತಿರುಪತಿ ಶ್ರೀರಂಗಂ, ಕಂಚಿ, ಮೇಲುಕೋಟೆ ನಮಗೆ ಮಹತ್ವದ ಧಾರ್ಮಿಕ ಕೇಂದ್ರಗಳಾಗಿದ್ದು, ರಾಮಾನುಜರ ಕರ್ಮಭೂಮಿ ಮೇಲುಕೋಟೆಯ ಬಗ್ಗೆ ನನಗೂ ಅಪಾರ ಅಭಿಮಾನ ಹಾಗೂ ಭಕ್ತಿಯಿದೆ ಎಂದರು.

ಮೇಲುಕೋಟೆಯಲ್ಲಿ ಪ್ರಥಮ ಆರೋಗ್ಯ ಕೇಂದ್ರದ ಬಳಿ ನಿರ್ಮಿಸಿದ್ದ ಹೆಲಿಪ್ಯಾಡ್‌ಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರೊಂದಿಗೆ ಬಂದಿಳಿದ ಉಪರಾಷ್ಟ್ರಪತಿಗಳನ್ನು ಸರ್ಕಾರದ ಪರವಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಒಳಗೊಂಡ ಜಿಲ್ಲಾಡಳಿತದ ಅಧಿಕಾರಿಗಳ ತಂಡ ಸ್ವಾಗತಿಸಿತು. ನಂತರ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೂಗುಚ್ಛ ನೀಡಿ ಸ್ವಾಗತಿಸಿದರು. ನಂತರ ಕಾರಿನಲ್ಲಿ ದೇವಾಲಯಕ್ಕೆ ಬಂದ ಉಪರಾಷ್ಟ್ರಪತಿಗಳಿಗೆ ದೇವಾಲಯದ ಸಾಂಪ್ರದಾಯಿಕ ಪೂರ್ಣ ಕುಂಭ ಸ್ವಾಗತ ನೀಡಿ ಪಾದುಕಾ ಮರ್ಯಾದೆ ಮತ್ತು ತೀರ್ಥ ಶಠಾರಿ ಪ್ರಸಾದ ನೀಡಿ ಬರಮಾಡಿಕೊಳ್ಳಲಾಯಿತು. ಬೆಳಿಗ್ಗೆ 10.45ಕ್ಕೆ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿಗಳು 45 ನಿಮಿಷ ದೇವಾಲಯದಲ್ಲಿದ್ದು, 11.30ಕ್ಕೆ ನಿರ್ಗಮಿಸಿ ಹೆಲಿಪ್ಯಾಡ್ ತಲುಪಿ ಶ್ರವಣಬೆಳಗೊಳಕ್ಕೆ ತೆರಳಿದರು.

ಚೆಲುವನಾರಾಯಣಸ್ವಾಮಿ, ಮಹಾಲಕ್ಷ್ಮಿ ಅಮ್ಮನವರು ಹಾಗೂ ರಾಮಾನುಜರ ದರ್ಶನ ಪಡೆದ ಉಪರಾಷ್ಟ್ರಪತಿ ರಾಧಾಕೃಷ್ಣನ್‌ರಿಗೆ ಸ್ಥಾನೀಕ, ಅರ್ಚಕ ಪರಿಚಾರಕ ಕೈಂಕರ್ಯಪರು ಸಾಂಪ್ರದಾಯಿಕವಾಗಿ ರಾಜಾಶೀರ್ವಾದ ನೆರವೇರಿಸಿದರು. ಸರ್ಕಾರದ ಪರವಾಗಿ ಕೃಷಿಸಚಿವ ಎನ್.ಚೆಲುವರಾಯಸ್ವಾಮಿ ಉಪರಾಷ್ಟ್ರಪತಿಗಳಿಗೆ ಮೈಸೂರು ಪೇಟ ತೊಡಿಸಿ ನಾರಾಯಣಸ್ವಾಮಿ ಮೂರ್ತಿ ನೀಡಿ ಗೌರವಿಸಿ ಬೀಳ್ಕೊಟ್ಟರು.

ಉಪರಾಷ್ಟ್ರಪತಿಗಳ ಭೇಟಿಯ ಹಿನ್ನಲೆಯಲ್ಲಿ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆಯವರೆಗೆ ಭಕ್ತರ ಪ್ರವೇಶವನ್ನು ನಿಬಂಧಿಸಲಾಗಿತ್ತು. 12ರ ನಂತರ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ನೀಡಲಾಯಿತು. ಇಡೀ ಮೇಲುಕೋಟೆಯ ಇತಿಹಾಸದಲ್ಲೇ ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಭೇಟಿಯ ವೇಳೆ ಅತ್ಯುನ್ನತ ಮಟ್ಟದ ಭಾರಿ ಭದ್ರತೆ ಮಾಡಲಾಗಿತ್ತು.

ಈ ವೇಳೆ ಮೇಲುಕೋಟೆ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಬಸವರೆಡ್ಡಪ್ಪ, ಮುಜರಾಯಿ ತಹಶೀಲ್ದಾರ್ ತಮ್ಮೇಗೌಡ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ, ದೇವಾಲಯದ ಪಾರುಪತ್ತೇಗಾರ್ ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ ಮತ್ತಿತರು ಹಾಜರಿದ್ದರು.

ಉಪರಾಷ್ಟ್ರಪತಿಗಳು ಹೆಲಿಕ್ಯಾಪ್ಟರ್‌ನಲ್ಲಿ ಬಂದಿಳಿದು ರಸ್ತೆಯಲ್ಲಿ ಸಾಗಿದ ವೇಳೆ ನೂರಾರು ಸಂಖ್ಯೆಯ ನಾಗರೀಕರು ವೀಕ್ಷಿಸಿದರು.

ಮತ್ತೊಮ್ಮೆ ಭೇಟಿ ನೀಡುವೆ, ತುಳಸಿ ಚೆನ್ನಾಗಿ ಬೆಳೆಸಿ

ಗುರುಕುಲದ ಮಕ್ಕಳನ್ನು ಕರೆಸಿಕೊಂಡು ಫೋಟೋ ಕ್ಲಿಕ್ಕಿಸಿಕೊಂಡ ಉಪರಾಷ್ಟ್ರಪತಿ



ರಾಜ್ಯಪಾಲರಾಗಿದ್ದಾಗ ಮೇಲುಕೋಟೆಗೆ ಆಗಮಿಸಿದ್ದ ವೇಳೆ ಕಲ್ಯಾಣಿಯ ಬಳಿ ತುಳಸಿತೋಟಕ್ಕೆ ಚಾಲನೆ ನೀಡಿದ ನೆನಪಿಗಾಗಿ ಯತಿರಾಜದಾಸರ್ ಗುರುಪೀಠದ ಪರವಾಗಿ ನೆನಪಿನ ಕಾಣಿಕೆ ಸ್ವೀಕರಿಸಿದ ಉಪರಾಷ್ಟ್ರಪತಿಗಳು ಗುರುಕುಲದ ಮಕ್ಕಳೊಂದಿಗೆ ಸ್ವತಃ ಹೇಳಿ ಫೋಟೋ ತೆಗೆಸಿಕೊಂಡರು.

ಮೇಲುಕೋಟೆ, ನ.9– ಸರಳ ಹಾಗೂ ಸಜ್ಜನಿಕೆಯ ನೂತನ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಮೇಲುಕೋಟೆಯ ಭೇಟಿಯ ವೇಳೆ ಹಲವು ವಿಶೇಷತೆಗೆ ಸಾಕ್ಷಿಯಾದರು. ತಾವು ರಾಜ್ಯಪಾಲರಾಗಿದ್ದಾಗ ಮೇಲುಕೋಟೆಗೆ ಆಗಮಿಸಿದ್ದ ವೇಳೆ ಕಲ್ಯಾಣಿಯ ಬಳಿ ತುಳಸಿ ತೋಟಕ್ಕೆ ಚಾಲನೆ ನೀಡಿದ ನೆನಪಿಗಾಗಿ ಯತಿರಾಜದಾಸರ್ ಗುರುಪೀಠದ ಪರವಾಗಿ ಸ್ಥಾನೀಕಂ ಸಂತಾನರಾಮನ್ ನೀಡಿದ ನೆನಪಿನ ಕಾಣಿಕೆ ಸ್ವೀಕರಿಸಿ ತುಳಸಿತೋಟವನ್ನು ಅಚ್ಚುಕಟ್ಟಾಗಿ ಬೆಳಸಿ ಮತ್ತೊಮ್ಮೆ ಭೇಟಿ ನೀಡುತ್ತೇನೆ ಎಂದರು.

ಇದೇ ವೇಳೆ ಬ್ಯಾರಿಕೇಡ್ ಹೊರಭಾಗದಲ್ಲಿ ನಿಂತಿದ್ದ ಗುರುಪೀಠದ ಗುರುಕುಲದ ಮಕ್ಕಳನ್ನು ಬೆಂಗಾವಲು ಪಡೆಗೆ ಹೇಳಿ ಒಳಕ್ಕೆ ಕರೆಸಿಕೊಂಡು ಮಕ್ಕಳೊಂದಿಗೆ ಫೋಟೋ ತೆಗೆಸಿಕೊಂಡರು. ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಜೊತೆಗೂಡಿದ್ದರು

ಇನ್ನು ದೇವಾಲಯಕ್ಕೆ ಆಗಮಿಸಿ ಕಾರು ಇಳಿಯುತ್ತಿದ್ದಂತೆ ತಮಿಳುನಾಡಿನ ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಸಿದ್ಧಿ ವಿನಾಯಕನ್ ಮತ್ತು ಕಾರ್ಯಕರ್ತರು ಬ್ಯಾರಿಕೇಡ್‌ನ ಹೊರಭಾಗ ನಿಂತಿದ್ದನ್ನು ಗಮನಿಸಿ ಅವರ ಬಳಿಗೆ ಹೋಗಿ ಗೌರವ ಸ್ವೀಕರಿಸಿ, ಅವರನ್ನೂ ತಮ್ಮ ಜೊತೆಯಲ್ಲೇ ದೇವಾಲಯಕ್ಕೆ ಕರೆಸಿ ಕೊಂಡರು. ದರ್ಶನ ಮುಗಿಸಿ ಕಾರು ಹತ್ತಿ ವಾಪಸ್ಸಾಗುವಾಗ ಮೇಲುಕೋಟೆ ಬಿಜೆಪಿ ಕಾರ್ಯಕರ್ತ ಶಂಕರ್ ಕೈಬೀಸಿದ್ದನ್ನು ಗಮನಿಸಿ ಅವರ ಬಳಿಗೇ ಹೋಗಿ ಹಸ್ತಲಾಘವ ಮಾಡಿದರು.

ದೇವಾಲಯದ ಕೈಂಕರ್ಯಪರರೊಡನೆ ಮತ್ತು ಸ್ವಾಗತ ವೇಳೆ ವಾದ್ಯನುಡಿಸಿದ ವಾದ್ಯಗಾರರೊಂದಿಗೂ ಉತ್ಸಾಹದಿಂದಲೇ ಫೋಟೋ ತೆಗೆಸಿಕೊಂಡದ್ದು ಅವರ ಸರಳ ವ್ಯಕ್ತಿತ್ವ ಮೇಲುಕೋಟೆಯಲ್ಲಿ ಬಹುಕಾಲ ನೆನಪಿನಲ್ಲುಳಿಯುವಂತೆ ಮಾಡಿತು.

ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರಿಗೆ ಸ್ಮರಣಿಕೆ ನೀಡಿದ ಚಲುವರಾಯಸ್ವಾಮಿ



ಮೇಲುಕೋಟೆ ಚಲುವ 'ನಾರಾಯಣಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಅವರನ್ನು ಸರ್ಕಾರದ ಪರವಾಗಿ ಸ್ಮರಣಿಕೆ ನೀಡಿ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ ಗೌರವಿಸಿದರು. ಜಿಲ್ಲಾಧಿಕಾರಿ ಡಾ.ಕುಮಾರ, ಅಪರ ಜಿಲ್ಲಾಧಿಕಾರಿ ಬಿ.ಎಸ್. ಶಿವಾನಂದಮೂರ್ತಿ ಇದ್ದಾರೆ.

ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರನ್ನು ಸ್ವಾಗತಿಸಿದ ಸಿ.ಎಸ್.ಪುಟ್ಟರಾಜು



ಮೇಲುಕೋಟೆಗೆ ಆಗಮಿಸಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಪುಷ್ಪ ಗುಚ್ಛ ನೀಡಿ ಸ್ವಾಗತಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ

ಮಂಡ್ಯ: 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಜಿಲ್ಲೆಯಲ್ಲಿ ನ.14 ರಿಂದ 20 ರವರೆಗೆ ಆಚರಿಸುತ್ತಿದ್ದು, ಈ ಸಂಬಂಧ ಜಿಲ್ಲೆಯಲ್ಲಿನ ಎಲ್ಲಾ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳು ಸಪ್ತಾಹ ನಡೆಯುವ 7 ದಿನಗಳಂದು ಸಹಕಾರ ಸಂಘ ಹಾಗೂ ಬ್ಯಾಂಕ್‌ಗಳ ಕಟ್ಟಡದ ಮೇಲೆ "ಸಹಕಾರ ಧ್ವಜ"ವನ್ನು ಕಡ್ಡಾಯವಾಗಿ ಹಾರಿಸತಕ್ಕದ್ದು. "ಸಹಕಾರ ಧ್ವಜ" ಇಲ್ಲದೇ ಇರುವ ಸಂಘದವರು ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟ ನಿ, ದಲ್ಲಿ ಪಡೆಯುವಂತೆ ಹಾಗೂ ಸಹಕಾರ ಸಪ್ತಾಹವನ್ನು ಯಶಸ್ವಿಯಾಗಿ ಅರ್ಥಪೂರ್ಣವಾಗಿ ಆಚರಿಸುವಂತೆ ಸಹಕಾರ ಸಂಘಗಳ ಉಪ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಭಾರತ ಹಿಂದೂ ರಾಷ್ಟ್ರ

ಸಂಘವನ್ನು ಮೂರು ಬಾರಿ ಬ್ಯಾನ್ ಮಾಡಲಾಗಿದೆ. ಕೋರ್ಟ್ ನಿಷೇಧ ತೆಗೆದುಹಾಕಿದೆ. ಸಂಘ ಅಸಂವಿಧಾನಿಕವಲ್ಲ. ಹಿಂದೂ ಧರ್ಮವೂ ನೋಂದಣಿಯಾಗಿಲ್ಲ ಎಂದು ಮೋಹನ್ ಭಾಗವತ್ ಹೇಳಿದ್ದಾರೆ.

ತ್ರಿವರ್ಣ ಧ್ವಜಕ್ಕೆ ನಮ್ಮ ಗೌರವ ಅಪಾರ: ಆರ್‌ಎಸ್‌ಎಸ್ ಕೇವಲ ಕೇಸರಿ ಧ್ವಜವನ್ನು ಗೌರವಿಸುತ್ತದೆ, ಭಾರತದ ತ್ರಿವರ್ಣ ಧ್ವಜವನ್ನು ಮಾನ್ಯ ಮಾಡುವುದಿಲ್ಲ ಎಂಬ ಟೀಕೆಗಳಿಗೂ ಮೋಹನ್ ಭಾಗವತ್ ಉತ್ತರ ನೀಡಿದರು. ಆರ್‌ಎಸ್‌ಎಸ್‌ನಲ್ಲಿ ಕೇಸರಿ ಧ್ವಜವನ್ನು ಗುರು ಎಂದು ಪರಿಗಣಿಸಲಾಗಿದೆಯಾದರೂ, ನಾವು ಭಾರತದ ತ್ರಿವರ್ಣ ಧ್ವಜಕ್ಕೆ ಅತ್ಯಂತ ಹೆಚ್ಚಿನ ಗೌರವ ನೀಡುತ್ತೇವೆ. ನಾವು ನಮ್ಮ ತ್ರಿವರ್ಣ ಧ್ವಜವನ್ನು ಯಾವಾಗಲೂ ಗೌರವಿಸುತ್ತೇವೆ, ಗೌರವ ಸಲ್ಲಿಸುತ್ತೇವೆ ಮತ್ತು ರಕ್ಷಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಕುಗ್ಗದೆ ಗುರಿಯತ್ತ ಮುನ್ನುಗ್ಗಬೇಕು

ವಾರ, ತಿಂಗಳು, ವರ್ಷದಲ್ಲಿ ಸಣ್ಣ ಸಣ್ಣ ಯಶಸ್ಸಿನ ಸೇರ್ಪಡೆ ಮಾಡಿಕೊಂಡು ಹೋಗಿ. ಇದು ದೊಡ್ಡ ಯಶಸ್ಸಿಗೆ ವೇದಿಕೆಯಾಗಲಿದೆ ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಿಂದ ದೊಡ್ಡ ಅವಕಾಶ ಮುಕ್ತಗೊಂಡಿವೆ. ಏಕಕಾಲಕ್ಕೆ ಡಬಲ್ ಡಿಗ್ರಿ ಪಡೆಯಬಹುದು. ವಿಜ್ಞಾನದೊಂದಿಗೆ ಇತಿಹಾಸ ಅಭ್ಯಾಸಿಸಬಹುದು. ತಾಂತ್ರಿಕ ಕೋರ್ಸ್ ಸಹ ಕಲಿಯಬಹುದು. ಕಲಿಕೆಗೆ ಯಾವುದೇ ಮಿತಿ ಹೇರಿಲ್ಲ. ವಿದ್ಯಾರ್ಥಿಗಳಿಗೆ ಆಯ್ಕೆ ಕೊಡಲಾಗಿದೆ ಎಂದರು.

ಜಗತ್ತಿನಲ್ಲೇ ಅವಕಾಶಗಳ ಬಾಗಿಲು ತೆರೆದುಕೊಂಡಿದೆ. ಇದರಿಂದ ತೀವ್ರ ಪೈಪೋಟಿಯೊಂದಿಗೆ ದೊಡ್ಡ ಅವಕಾಶಗಳನ್ನೂ ಸೃಷ್ಟಿಸಿದೆ. ಹೀಗಾಗಿ, ನೀವು ಏನು ಆಗಬೇಕು ಎಂಬ ತೀರ್ಮಾನ ಮಾಡಿಕೊಳ್ಳಿ. ಮೊಬೈಲ್, ಸಾಮಾಜಿಕ ಜಾಲತಾಣದಿಂದಾಗಿ ಮಾತು–ನೋಟ ಅಧಿಕವಾಗಿದೆ. ಇದಕ್ಕೆ ನಿಯಂತ್ರಣ ಹಾಕಿಕೊಂಡು ಗುರಿಯತ್ತ ಗಮನ ನೀಡಬೇಕು. ಕಲಿಕೆಯತ್ತ ಆಸಕ್ತಿ ಬೆಳೆಸಿಕೊಳ್ಳಬೇಕು. ಅನುಭವವೇ ಆಸ್ತಿ. ಅದಕ್ಕೆ ಯಾರೊಂದಿಗೂ ಹೋಲಿಕೆ ಇಲ್ಲ. ಪಾಲಕರ, ಹಿರಿಯ ಮಾತುಗಳನ್ನು ಯುವ ಜನರು ಆಲಿಸಬೇಕು ಎಂದು ಹೇಳಿದರು.

ನಾನು ಉಪರಾಷ್ಟ್ರಪತಿಯಾದ ಬಳಿಕ ಕರ್ನಾಟಕಕ್ಕೆ ಮೊದಲ ಪ್ರವಾಸ ಕೈಗೊಂಡಿದ್ದೇನೆ. ಪ್ರಾಚೀನ ಭಾಷೆಯಾಗಿರುವ ಕನ್ನಡ ಭಾಷೆ ಸಂಪದ್ಭರಿತ ಭಾಷೆಯಾಗಿದೆ. ಕರ್ನಾಟಕ ರಾಜ್ಯ ಉತ್ತಮ ಸಂಸ್ಕೃತಿ, ಪಾರಂಪರಿಕ ನೆಲಬೀಡು. ಮೈಸೂರು, ಧರ್ಮಸ್ಥಳ, ಮಲೆಮಹದೇಶ್ವರಬೆಟ್ಟ, ಕೊಲ್ಲೂರು ಒಳಗೊಂಡಿರುವ ಕರ್ನಾಟಕವು ಧಾರ್ಮಿಕ ಬೀಡಾಗಿದೆ. ಇಲ್ಲಿ ಜನರು ಆಡುವ ಕನ್ನಡ ಭಾಷೆ ಸಹ ಶ್ರೀಮಂತವಾಗಿದೆ ಎಂದು ಬಣ್ಣಿಸಿದರು.

2925 ವಿದ್ಯಾರ್ಥಿಗಳಿಗೆ ಪದವಿ: ಇದೇ ವೇಳೆ ವಿವಿಧ ವಿಷಯಗಳಲ್ಲಿ ಚಿನ್ನದ ಪದಕ ಪಡೆದ ಕೆಲ ವಿದ್ಯಾರ್ಥಿಗಳಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಪದಕ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ವಿವಿಧ ವಿಷಯಗಳಲ್ಲಿ 1187 ಪುರುಷರು, 1738 ಮಹಿಳಾ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 2925 ವಿದ್ಯಾರ್ಥಿಗಳು ವಿವಿಧ ಪದವಿ ಸ್ವೀಕರಿಸುವರು. 80 ವಿದ್ಯಾರ್ಥಿಗಳಿಗೆ ಪಿಹೆಚ್‌ಡಿ, 68 ವಿದ್ಯಾರ್ಥಿಗಳಿಗೆ 100 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ವಿವಿಯ ಸಮಕುಲಾಧಿಪತಿ ಡಾ.ಬಿ. ಸುರೇಶ್, ಕುಲಪತಿ ಡಾ.ಹೆಚ್. ಬಸವನಗೌಡಪ್ಪ ಉಪಸ್ಥಿತರಿದ್ದರು.

ಸಂಶೋಧನೆಯ ಯುಗವನ್ನು ಪ್ರವೇಶಿಸುತ್ತಿದೆ

ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸ್ವಾಮಿ ವಿವೇಕಾನಂದರ 'ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿ ಮುಟ್ಟುವವರೆಗೂ ನಿಲ್ಲಬೇಡಿ' ಎಂಬ ಹೇಳಿಕೆಯಂತೆ ಯುವ ಜನರು ಜ್ಞಾನ ಸಂಪಾದನೆಗೆ ಮುಂದಾಗಬೇಕು. ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ನಮ್ಮ ಕೌಶಲ ಬಳಸಬೇಕು. ಪದವಿ ಪಡೆದ ವಿದ್ಯಾರ್ಥಿಗಳು ಹೊಸ ಭಾರತದ ವಾಸ್ತುಶಿಲ್ಪಿಗಳಾಗಿ, ಮಾನವೀಯತೆಯ ವಾಹಕರಾಗಿ ಮತ್ತು ಭರವಸೆಯ ದೀಪಸ್ತಂಭಗಳಾಗಿ ಸಮಾಜವನ್ನು ಪ್ರವೇಶಿಸುತ್ತಿದ್ದೀರಿ. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು, ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪರಿಪೂರ್ಣತೆಯನ್ನು ಅಭಿವೃದ್ಧಿಪಡಿಸುವುದು ಶಿಕ್ಷಣದ ಉದ್ದೇಶ ಎಂದು ಹೇಳಿದರು. ಈ ಮನೋಭಾವದಿಂದ ನೀವು ಸಮಾಜದಲ್ಲಿ ನಿಮ್ಮ ಪಾತ್ರ ನಿರ್ವಹಿಸಬೇಕು. ಜ್ಞಾನ ಮತ್ತು ಕೌಶಲಗಳೊಂದಿಗೆ ಸವಾಲು ಎದುರಿಸಲು ಮತ್ತು ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸರಗೂರು ಬಳಿ ಮಧ್ಯರಾತ್ರಿ ಕೂಂಬಿಂಗ್‌ನಲ್ಲಿ ಹುಲಿ ಸೆರೆ

ಡಿಎನ್‌ಎ ಪರೀಕ್ಷೆ ನಡೆಸಲು ರಕ್ತದ ಮಾದರಿ ಹಾಗೂ ಕೂದಲಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ.

ಪ್ರಥಮ ಚಿಕಿತ್ಸೆ: ಕಳೆದ ರಾತ್ರಿ ಸೆರೆ ಹಿಡಿದ ಹುಲಿಯ ಕೊರಳಿಂದ ಉರುಳನ್ನು ಕತ್ತರಿಸಿ ತೆಗೆಯಲಾಯಿತು. ನಂತರ ಕೊರಳಿನ ಸುತ್ತಲೂ ಗಾಯಕ್ಕೆ ಡ್ರೆಸ್ಸಿಂಗ್ ಮಾಡಿ, ಔಷದ ಸಿಂಪಡಿಸಲಾಯಿತು. ನಂತರ ಅಂಟಿಬಯೋಟಿಕ್ ನೀಡಿ, ಅದನ್ನು ಬೋನಿನಲ್ಲಿಡಲಾಯಿತು. ನಂತರ ರಿವರ್ಸ್ ಇಂಜೆಕ್ಷನ್ ನೀಡಿ ಅರವಳಿಕೆ ಮಂಪರನ್ನು ಹೋಗಲಾಡಿಸಿ. ಮಧ್ಯರಾತ್ರಿ 2 ಗಂಟೆಗೆ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಕೂಂಬಿಂಗ್ ಮುಂದುವರೆಯಲಿದೆ: ಸೆರೆ ಸಿಕ್ಕಿರುವ ಗಾಯಗೊಂಡಿರುವ ಗಂಡು ಹುಲಿ ದಂಡನಾಯಕ ಅವರ ಮೇಲೆ ದಾಳಿ ನಡೆಸಿದ ಹುಲಿ ಎಂದು ಅರಣ್ಯ ಇಲಾಖೆ ಖಚಿತಪಡಿಸಿಕೊಂಡಿದ್ದರೂ, ಸ್ಥಳೀಯರಿಗೆ ಮಾತ್ರ ಅನುಮಾನವಿದೆ. ಆ ಕಾರಣದಿಂದ ಹಳೆ ಹೆಗ್ಗುಡಿಲು ಬಳಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದೆ. ದಂಡನಾಯಕನ ಮೇಲೆ ದಾಳಿ ಮಾಡಿದ ಸ್ಥಳ, ಆತನ ಮೃತದೇಹ ಸಿಕ್ಕ ಸ್ಥಳ ಸೇರಿದಂತೆ ವಿವಿಧೆಡೆ ಲೈವ್ ಕ್ಯಾಮರಾ ಅಳವಡಿಸಲಾಗಿದೆ. ಅಲ್ಲದೆ, ದಿನದ 24 ಗಂಟೆಯೂ ಹುಲಿ ಚಲನವಲನ ಪರಿಶೀಲಿಸಲು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ನಿಟ್ಟುಸಿರು ಬಿಟ್ಟ ಸಿಬ್ಬಂದಿ: ದಾಳಿ ಮಾಡುತ್ತಿದ್ದ ಹುಲಿ ಸೆರೆ ಸಿಕ್ಕಿದ್ದಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು, ಕೂಂಬಿಂಗ್ ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದಾರೆ. ಕಳೆದ 20 ದಿನದಿಂದ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿರುವ 150ಕ್ಕೂ ಹೆಚ್ಚು ಮಂದಿ ಸಿಬ್ಬಂದಿಗಳ ತಂಡ ಇದುವರೆಗೂ ಮೂರು ಹೆಣ್ಣು ಹುಲಿಗಳನ್ನು ಸೆರೆ ಹಿಡಿದಿದ್ದು, ಇದೀಗ ದಾಳಿ ಮಾಡುತ್ತಿದ್ದ ಗಂಡು ಹುಲಿ ಸೆರೆ ಹಿಡಿದಿರುವುದು ಇಲಾಖೆ ಮುಂದೆ ಇದ್ದ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಹುಲಿ ಸೆರೆ ಸಿಕ್ಕಿರುವ ವಿಷಯ ಹಳೆ ಹೆಗ್ಗುಡಿಲು ಹಾಗೂ ಸುತ್ತಮುತ್ತಲಿನ ಗ್ರಾಮದ ಜನರಲ್ಲಿ ಸಮಾಧಾನ ತಂದಿತ್ತಿದೆ.

ಹುಲಿ ಸೆರೆ ಕಾರ್ಯಾಚರಣೆಯ ನೇತೃತ್ವವನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ವಹಿಸಿದ್ದರು. ಈ ಬಾರಿ ಹುಲಿ ಕೂಂಬಿಂಗ್ ಸಿಬ್ಬಂದಿಯಿಂದ ತಪ್ಪಿಸಿಕೊಂಡು ಹೋಗದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ಚಾಣಾಕ್ಷತನದಿಂದ ಹುಲಿ ಸೆರೆ ಹಿಡಿಯಲು ಮಾರ್ಗದರ್ಶನ ಮಾಡಿದರು. ಕಾರ್ಯಾಚರಣೆಯಲ್ಲಿ ಸಾಕಾನೆಗಳಾದ ಮಹೇಂದ್ರ, ಭೀಮ, ಶ್ರೀಕಂಠ, ಲಕ್ಷ್ಮಣ ಆನೆಯನ್ನು ಬಳಸಿಕೊಳ್ಳಲಾಗಿತ್ತು. ಪಶುವೈದ್ಯರಾದ ಡಾ.ರಮೇಶ್, ಡಾ.ವಾಸಿಂ ಮಿರ್ಜಾ, ಡಾ.ಆದರ್ಶ್, ಹೆಡಿಯಾಲ ಎಸಿಎಫ್ ಡಿ. ಪರಮೇಶ್, ಗುರಿಕಾರ, ಡಿಆರ್‌ಎಫ್‌ಓ ರಂಜನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಹುಲಿ ಚೇತರಿಕೆ

ಮೈಸೂರು, ನ.9(ಎಂಟಿವೈ)– ಸರಗೂರಿನ ಹಳೆ ಹೆಗ್ಗುಡಿಲು ಹಾಗೂ ಕಂದಲಿಕೆ ಗ್ರಾಮದ ನಡುವೆ ಕಾಡಂಚಿನ ಪ್ರದೇಶದಲ್ಲಿ ಶನಿವಾರ ರಾತ್ರಿ ಸೆರೆ ಹಿಡಿದ ಗಾಯಗೊಂಡಿದ್ದ ಗಂಡು ಹುಲಿ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರದಲ್ಲಿ ಚೇತರಿಸಿಕೊಂಡು, 3–5 ಕೆಜಿ ಮಾಂಸ ಸೇವಿಸಿದೆ.

ಮಧ್ಯರಾತ್ರಿ 2.30ಕ್ಕೆ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ತರಲಾದ ಹುಲಿಯನ್ನು ಕೊಠಡಿಯೊಂದರಲ್ಲಿ ಇಟ್ಟಿದ್ದು ಆರೈಕೆ ಮಾಡಲಾಗುತ್ತಿದೆ. ಮಂಪರಿನಲ್ಲಿದ್ದ ಹುಲಿ ಬೆಳಗ್ಗೆ ಸಹಜ ಸ್ಥಿತಿಗೆ ತಲುಪಿದ್ದು, ಮೃಗಾಲಯದ ಸಿಬ್ಬಂದಿಗಳು ನೀಡಿದ್ದ 3–5 ಕೆಜಿ ಮಾಂಸ ಸೇವಿಸಿ, ನೀರು ಕುಡಿದಿದೆ. ಉರುಳಿನ ಗಾಯದಿಂದಾಗಿ ಬಸವಳಿದಿರುವ ಹುಲಿ ಹಸಿವಿನಿಂದ ಕಂಗೆಟ್ಟಿದ್ದು, ಸಂಜೆ ವೇಳೆಯೂ ಮಾಂಸ ಸೇವಿಸಿದೆ. ಅರಣ್ಯ ಪ್ರದೇಶದಲ್ಲಿ ಬೆಳೆದ ಈ ಹುಲಿ ಕೊಠಡಿಯೊಳಗೆ ಬಂದಿಯಾಗಿರುವುದರಿಂದ ಅದರ ಕೊಠಡಿ ಬಳಿ ಸಿಬ್ಬಂದಿಗಳು ಹೋಗದೆ ದೂರದಿಂದಲೇ ಆಹಾರ, ನೀರು ಪೂರೈಸುತ್ತಿದ್ದಾರೆ.

ತಾಯಿ ಮಡಿಲಿಗೆ ಮರಿ: ಸರಗೂರು ತಾಲೂಕಿನ ಬಡಗಲಪುರದ ಬಳಿ ಅ.16ರಂದು ರೈತ ಮಹದೇವಗೌಡ ಎಂಬುವರ ಮೇಲೆ ದಾಳಿ ನಡೆಸಿದ್ದ ತಾಯಿ ಹುಲಿಯನ್ನು ಈಗಾಗಲೇ ಸೆರೆ ಹಿಡಿದು ಪುನರ್ವಸತಿ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತಿದೆ. ಅದರ ಒಂದೂವರೆ ವರ್ಷದ ಎರಡು ಹೆಣ್ಣು ಮರಿಯನ್ನು ಸೆರೆ ಹಿಡಿಯಲಾಗಿದ್ದು, ಅದರಲ್ಲಿ ಅ.18ರಂದು ಸೆರೆ ಸಿಕ್ಕ ಮರಿಯನ್ನು ತಾಯಿ ತನ್ನ ಬಳಿ ಸೇರಿಸಿಕೊಂಡಿದೆ. ಇನ್ನೊಂದು ಮರಿಯನ್ನು ಪಕ್ಕದ ಕೊಠಡಿಯಲ್ಲಿಡಲಾಗಿದ್ದು, ಅದನ್ನು ತಾಯಿ ಗಮನಿಸುತ್ತಿದೆ. ಪರಸ್ಪರ ಸ್ಪಂದನೆ ದೊರೆಯುತ್ತಿದ್ದು, ಶೀಘ್ರದಲ್ಲೇ ಆ ಮರಿಯನ್ನು ತಾಯಿ ಮಡಿಲಿಗೆ ಸೇರಿಸುವ ಪ್ರಯತ್ನ ನಡೆಸಲಾಗುತ್ತಿದೆ.

ಇನ್ನೊಂದು ಮರಿಗೆ ಹುಡುಕಾಟ: ನಂಜನಗೂಡು ತಾಲೂಕಿನ ಈರೇಗೌಡನಹುಂಡಿ ಸೆರೆ ಸಿಕ್ಕಿದ್ದ 8 ವರ್ಷದ ತಾಯಿ ಹುಲಿಗೆ ಒಂದೂವರೆ ವರ್ಷದ ಮೂರು ಮರಿಗಳಿದ್ದು, ಅವುಗಳಲ್ಲಿ ಎರಡನ್ನು ಸೆರೆ ಹಿಡಿಯಲಾಗಿದೆ. ಇನ್ನೊಂದು ಮರಿಗಾಗಿ ಕೂಂಬಿಂಗ್ ನಡೆಸಲಾಗುತ್ತಿದೆ. ಆ ಮರಿಯೂ ಆಹಾರವಿಲ್ಲದೆ, ಬಳಲಿರುವ ಶಂಕೆ ಇದೆ. ಆ ಕಾರಣದಿಂದ ಅದನ್ನು ಸೆರೆ ಹಿಡಿದು ತಾಯಿ ಮಡಿಲಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ.

ಮೈಸೂರಿನ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿ ಮೇಲೆ ಸಹಪಾಠಿಗಳಿಂದ ತೀವ್ರ ಹಲ್ಲೆ

ಮೈಸೂರು, ನ.9– ಎಂಟನೇ ತರಗತಿ ವಿದ್ಯಾರ್ಥಿ ಮೇಲೆ ಸಹಪಾಠಿಗಳೇ ಗಂಭೀರ ಹಲ್ಲೆ ನಡೆಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಜಯಲಕ್ಷ್ಮೀಪುರಂನಲ್ಲಿರುವ ಪ್ರತಿಷ್ಠಿತ ಶಾಲೆಯೊಂದರ ವಿದ್ಯಾರ್ಥಿ ಮೇಲೆ ಆತನ ಮೂವರು ಸಹಪಾಠಿಗಳು ಕಳೆದ ತಿಂಗಳು ಹಲ್ಲೆ ನಡೆಸಿದ್ದು, ಈ ಸಂಬಂಧ ಭಾನುವಾರ ರಾತ್ರಿ ವಿದ್ಯಾರ್ಥಿ ತಂದೆ ನೀಡಿದ ದೂರಿನನ್ವಯ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ಟೋಬರ್ 26ರಂದು ಸಂಜೆ ನನ್ನ ಪುತ್ರ ತೊಡೆ ನೋವು ಎಂದು ಜೋರಾಗಿ ಕಿರುಚುತ್ತಾ, ನರಳುತ್ತಿದ್ದ. ಏನಾಯಿತು ಎಂದು ವಿಚಾರಿಸಿದಾಗ ಎರಡು ದಿನಗಳ ಹಿಂದೆ ತರಗತಿಯಲ್ಲಿ ಮೂವರು ಸಹಪಾಠಿಗಳು ಹಲ್ಲೆ ಮಾಡಿ, ಮಂಡಿಯಿಂದ ಮರ್ಮಾಂಗಕ್ಕೆ ಬಲವಾಗಿ ಒದ್ದಿದ್ದಾಗಿ ತಿಳಿಸಿದ. ಕೂಡಲೇ ಆತನನ್ನು ಆಸ್ಪತ್ರೆಗೆ ಕರೆದೊಯ್ದು ಪರೀಕ್ಷೆ ಮಾಡಿಸಿದಾಗ, ಮರ್ಮಾಂಗಕ್ಕೆ ಗಂಭೀರ ಗಾಯವಾಗಿದ್ದು, ಕೂಡಲೇ ಶಸ್ತ್ರಚಿಕಿತ್ಸೆ ಮಾಡಬೇಕೆಂದು ತಿಳಿಸಿದರು. ಮರುದಿನ ಶಸ್ತ್ರಚಿಕಿತ್ಸೆ ಮಾಡಿಸಿದ್ದು, ಆತನ ಒಂದು ವೃಷಣ ಶಾಶ್ವತವಾಗಿ ಹಾನಿಯಾಗಿದೆ.

ಈ ಮೊದಲು ಸಹಪಾಠಿಗಳಿಂದ ತೊಂದರೆಯಾಗುತ್ತಿರುವ ಬಗ್ಗೆ ತಾಯಿಯೊಂದಿಗೆ ಹೇಳಿಕೊಂಡಿದ್ದು, ಈ ಬಗ್ಗೆ ತರಗತಿ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರಿಗೆ ತಿಳಿಸಿ, ಆ ಹುಡುಗರಿಗೆ ತಿಳುವಳಿಕೆ ನೀಡುವಂತೆ ಮನವಿ ಮಾಡಿದ್ದರೂ ಅವರು ನಿರ್ಲಕ್ಷ್ಯವಹಿಸಿದ್ದರು.

ಮಗನ ಈ ಸ್ಥಿತಿಗೆ ಕಾರಣರಾದ ಆತನ ಮೂವರು ಸಹಪಾಠಿಗಳು ಹಾಗೂ ಶಿಕ್ಷಕರು ಹಾಗೂ ಆಡಳಿತಮಂಡಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಕಾರಿನ ಗಾಜು ಒಡೆದು ಲ್ಯಾಪ್‌ಟಾಪ್ ಕಳವು

ಮೈಸೂರು, ನ.9– ಕಾರಿನ ಗಾಜು ಒಡೆದು ಲ್ಯಾಪ್‌ಟಾಪ್ ಕಳ್ಳತನ ಮಾಡಿರುವ ಘಟನೆ ಮೈಸೂರಿನ ಧನ್ವಂತ್ರಿ ರಸ್ತೆಯಲ್ಲಿ ನಡೆದಿದೆ.

ನಂಜನಗೂಡು ತಾಲೂಕು, ಕಾರ್ಯ ಗ್ರಾಮದ ನಿವಾಸಿ, ಬ್ಯಾಂಕ್ ಉದ್ಯೋಗಿ ಹೆಚ್.ಜೆ. ಅವಿನಾಶ್ ಅವರು, ನ.6ರಂದು ರಾತ್ರಿ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸ್ನೇಹಿತನನ್ನು ನೋಡಲೆಂದು ತಮ್ಮ ಕಾರನ್ನು ಧನ್ವಂತ್ರಿ ರಸ್ತೆಯ ಜನತಾ ಬಜಾರ್ ಮೆಡಿಕಲ್ ಬಳಿ ನಿಲ್ಲಿಸಿ ಹೋಗಿದ್ದರು. ಆಸ್ಪತ್ರೆಯಿಂದ ಬರುವಷ್ಟರಲ್ಲಿ ಖದೀಮರು ಕಾರಿನ ಹಿಂಬದಿ ಸೀಟ್‌ನಲ್ಲಿದ್ದ ಸುಮಾರು 40 ಸಾವಿರ ಮೌಲ್ಯದ ಲ್ಯಾಪ್‌ಟಾಪ್ ಅನ್ನು ವಿಂಡೋ ಗ್ಲಾಸ್ ಒಡೆದು ಕದ್ದೊಯ್ದಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿನಂದನೆ...



ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಡಾ.ಎನ್.ಎಸ್. ರಾಮೇಗೌಡ ಅವರನ್ನು ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ರಘುರಾಮ್ ಗೌಡ, ಸಂಘಟನಾ ಕಾರ್ಯದರ್ಶಿ ಪೂಜಾ, ಟೆಂಟ್‌ಹೌಸ್‌ನ ಲಿಂಗಪ್ಪ, ನಾಗಭೂಷಣ ಮತ್ತು ಟ್ರಸ್ಟ್‌ನ ಸಂಚಾಲಕ ಬೂಕನಕೆರೆ ವಿಜೇಂದ್ರ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದ ನಂದಿ ರಸ್ತೆ ತಡೆಗೋಡೆ ಕಾಮಗಾರಿ ಮತ್ತೆ ಸ್ಥಗಿತ

ಸಂಚಾರ ಬಂದ್: ಕಳೆದ ಹಲವು ವರ್ಷಗಳಿಂದ ಕಾಮಗಾರಿ ನೆನೆಗುದಿಗೆ ಬಿದ್ದಿರುವ ಕಾರಣ, ನಂದಿ ಪ್ರತಿಮೆ ರಸ್ತೆಯ ಸಂಚಾರ ಬಂದ್ ಮಾಡಿರುವುದರಿಂದ ಭಕ್ತಾದಿಗಳಿಗೆ ಮತ್ತು ಪ್ರವಾಸಿಗರಿಗೆ ತೀವ್ರ ನಿರಾಸೆ ಉಂಟಾಗಿದೆ. 2025ರ ದಸರಾ ಮಹೋತ್ಸವದ ವೇಳೆಗೆ ತಡೆಗೋಡೆ ಕಾಮಗಾರಿ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸುವುದಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹೇಳಿದ್ದರಾದರೂ, ಇನ್ನೂ ನಂದಿ ಪ್ರತಿಮೆ ವೀಕ್ಷಿಸುವ ಅವಕಾಶ ಪ್ರವಾಸಿಗರಿಗೆ ಲಭ್ಯವಾಗಿಲ್ಲ. ತಡೆಗೋಡೆ ನಿರ್ಮಾಣ ಯೋಜನೆಯನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿದ್ದು, ಮೊದಲ ಹಂತದಲ್ಲಿ 30 ಅಡಿ ಕಂದಕವನ್ನು ಅಗೆದ ನಂತರ 350 ಮೀಟರ್ ಗೋಡೆಯನ್ನು ನಿರ್ಮಿಸಲು 9.75 ಕೋಟಿ ರೂ. ವೆಚ್ಚವಾಗಲಿದೆ. 350 ಮೀಟರ್ ಗೋಡೆಯ ಪೈಕಿ 310 ಮೀಟರ್ ಪೂರ್ಣಗೊಂಡಿದ್ದು, 40 ಮೀಟರ್ ಬಾಕಿ ಉಳಿದಿದೆ. 4.90 ಕೋಟಿ ರೂ. ಮೌಲ್ಯದ ಎರಡನೇ ಹಂತದಲ್ಲಿ 284 ಮೀಟರ್ ಗೋಡೆ ನಿರ್ಮಿಸುವ ಗುರಿ ಹೊಂದಿದ್ದು, ಆ ಪೈಕಿ 200 ಮೀಟರ್ ಪೂರ್ಣಗೊಂಡಿದೆ ಉಳಿಕೆ 84 ಮೀಟರ್ ಇನ್ನೂ ಕಾರ್ಯಗತವಾಗಬೇಕಿದೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ವಿಜ್ಞಾನಿಗಳ ಶಿಫಾರಸಿನ ಆಧಾರದ ಮೇಲೆ ರೀಇನ್‌ಫೋರ್ಸ್‌ಡ್ ಅರ್ಥ್ ರೀಟೈನಿಂಗ್ ಸ್ಟ್ರಕ್ಚರ್ (ಆರ್‌ಇಆರ್‌ಎಸ್) ತಂತ್ರಜ್ಞಾನವನ್ನು ಬಳಸಿಕೊಂಡು ನಿರ್ಮಿಸಲಾಗುತ್ತಿದೆ. ಗೋಡೆಯ ನಿರ್ಮಾಣಕ್ಕಾಗಿ ಜಿಯೋ ಟ್ರೆಯಲ್ ಟೆಕ್‌ನಾಲಜಿ ವಿಧಾನವನ್ನು ಸೂಚಿಸುವ ಮೊದಲು ಐಐಎಸ್‌ಸಿ ತಂಡವು ಮಣ್ಣಿನ ಪರೀಕ್ಷೆ ಮತ್ತು ಇತರ ಅಧ್ಯಯನಗಳನ್ನು ನಡೆಸಿತ್ತು.

ಪರಿಣಾಮವಾಗಿ, ತಡೆಗೋಡೆ ಕೆಲಸವು 2026 ರವರೆಗೆ ಮುಂದುವರಿಯುವ ಸಾಧ್ಯತೆಯಿದೆ. ಮೇ–ಜೂನ್‌ನಲ್ಲಿ ಮಳೆಗಾಲ ಪ್ರಾರಂಭವಾಗುವ ಮೊದಲು ಕಾರ್ಯವನ್ನು ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮುಂದಾಗಿದ್ದಾರೆ.

ದಂತ ಮುರಿತ

ಕಾಡಾನೆ ಭೀಮ ಇತ್ತೀಚೆಗೆ ಮತ್ತೊಂದು ಕಾಡಾನೆ ಕ್ಯಾಪ್ಟನ್ ಜೊತೆ ಕಾಣಿಸಿಕೊಂಡಿತ್ತು. ಇಂದು ಬೆಳಿಗ್ಗೆ ಬೇಲೂರು ತಾಲೂಕಿನ ಜಗಬೋರನಹಳ್ಳಿ ಗ್ರಾಮದಲ್ಲಿ ಕಾಡಾನೆ ಭೀಮ ಮತ್ತು ಕ್ಯಾಪ್ಟನ್ ಕಾದಾಡಿದ್ದು ಈ ವೇಳೆ ಭೀಮ ಆನೆಯ ಬಲಭಾಗದ ದಂತ ಮುರಿದಿದೆ. ಸದ್ಯ ದಂತ ಮುರಿದುಕೊಂಡು ಕಾಫಿತೋಟದಲ್ಲಿ ಸೇರಿಕೊಂಡಿರುವ ಭೀಮ ಆನೆ ನರಳಾಡುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಆನೆಯನ್ನು ಬೆನ್ನಟ್ಟಿ ಜನರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿದ್ದಾರೆ.

ಚೆಯ್ಯಂಡಾಣೆ ಕೋಕೇರಿ ಪ್ರೀಮಿಯಂ ಲೀಗ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟ



ಕೋಕೇರಿ ಪ್ರೀಮಿಯಂ ಲೀಗ್ ದ್ವಿತೀಯ ವರ್ಷದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟದಲ್ಲಿ ಅತಿಥಿಗಳು ಕ್ರೀಡಾಪಟುಗಳನ್ನು ಪರಿಚಯಿಸಿಕೊಂಡರು.

ನಾಪೋಕ್ಲು, ನ.9–ಗ್ರಾಮೀಣ ಕ್ರೀಡಾ ಕೂಟದಲ್ಲಿ ನಮ್ಮ ಜಿಲ್ಲೆ ಹೆಸರುವಾಸಿಯಾಗಿದ್ದು, ಕ್ರೀಡಾಪಟುಗಳು ಸಾಧನೆ ಮಾಡುತ್ತಿರುವುದು ಶ್ಲಾಘನೀಯ ಎಂದು ನರಿಯಂದಡ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪೆಮ್ಮಂಡ ಕೌಶಿ ಕಾವೇರಮ್ಮ ಹೇಳಿದರು.

ಸಮೀಪದ ಚೆಯ್ಯಂಡಾಣೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದ ಕೋಕೇರಿ ಪ್ರೀಮಿಯಂ ಲೀಗ್ ದ್ವಿತೀಯ ವರ್ಷದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟಕ್ಕೆ ಚಾಲನೆ ನೀಡಿ, ಇಲ್ಲಿನ ಕ್ರೀಡಾ ಪ್ರೇಮಿಗಳು ಕ್ರಿಕೆಟ್ ಪಂದ್ಯವನ್ನು ಆಯೋಜಿಸುವುದರ ಮೂಲಕ ಗ್ರಾಮೀಣ ಜನರಿಗೆ ಉತ್ತಮ ಅವಕಾಶ ಕಲ್ಪಿಸಿದ್ದಾರೆ. ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಸತತ ಪ್ರಯತ್ನದಿಂದ ಕ್ರೀಡಾಪಟುಗಳು ಸಾಧನೆ ಮಾಡಲು ಸಾಧ್ಯ ಎಂದರು.

ನರಿಯಂದಡ ಗ್ರಾ. ಪಂ. ನಿಕಟ ಪೂರ್ವ ಅಧ್ಯಕ್ಷ ಬಿದ್ದಂಡ ರಾಜೇಶ್ ಅಚ್ಚಯ್ಯ ಬ್ಯಾಟ್ ಬೀಸುವುದರ ಮೂಲಕ ಚಾಲನೆ ನೀಡಿದರು. ಉಪಾಧ್ಯಕ್ಷ ಕೋಡಿರ ವಿನೋದ್ ನಾಣಯ್ಯ, ಸದಸ್ಯೆ ಬಿ. ಎಸ್. ಪುಷ್ಪ ಕೋಕೇರಿ ಪ್ರೀಮಿಯರ್ ಲೀಗ್ ಕ್ರೀಡಾ ಕೂಟದ ಅಧ್ಯಕ್ಷ ಚೆನಂಡ ರೋಶನ್ ಚೆಂಗಪ್ಪ, ಉಪಾಧ್ಯಕ್ಷ ಪೆಮ್ಮಂಡ ದರ್ಶನ್ ಸುಬ್ಬಯ್ಯ, ಕೋಶಾಧಿಕಾರಿ ಜೇನಂಡ ವಿಪಿನ್ ಗಣಪತಿ, ಪೊನ್ನಚಂಡ ಕಾರ್ಯಪ್ಪ ಕೋಕೇರಿ ಪ್ರೀಮಿಯರ್ ಲೀಗ್ ಕ್ರೀಡಾ ಕೂಟದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರವೀಣ್ ನಿಧನ



ಮಡಿಕೇರಿ,ನ.9– ಚೆಟ್ಟಳ್ಳಿಯ ಚೇರಳ-ಶ್ರೀಮಂಗಲ ಗ್ರಾಮ ನಿವಾಸಿ ಪರ್ಲಕೋಟಿ ಪ್ರವೀಣ್(ಅಪ್ಪು-60) ಅವರು ಭಾನುವಾರ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನ.10ರಂದು ಮಧ್ಯಾಹ್ನ ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ.

ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ: ಮಧು ಬಂಗಾರಪ್ಪ

ಮಡಿಕೇರಿ, ನ.9–ದೇಶದ ಸರ್ವತೋಮುಖ ಬೆಳವಣಿಗೆ ಶಿಕ್ಷಣ ದಿಂದ ಮಾತ್ರ ಸಾಧ್ಯ, ಆ ದಿಸೆಯಲ್ಲಿ ಸರ್ಕಾರ ಸರಕಾರಿ ಶಾಲೆಗಳಲ್ಲಿ ಅಗತ್ಯ ಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಹೆಚ್ಚಿನ ಒತ್ತು ನೀಡಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸೋಮವಾರಪೇಟೆ ತಾಲೂಕಿನ ಬೇಳೂರು ಕುಸುಬೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಅಗತ್ಯ ಇರುವ ಕಡೆಗಳಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೂ ಗಮನ ಹರಿಸಲಾಗಿದೆ. ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ. ಸಂಜೆ ವೇಳೆಯಲ್ಲಿ ವಿಶೇಷ ತರಗತಿ ನಡೆಸಿ ಗುಣಮಟ್ಟ ಹಾಗೂ ಫಲಿತಾಂಶ ಹೆಚ್ಚಳಕ್ಕೆ ಗಮನ ಹರಿಸಲಾಗಿದೆ. ಒಟ್ಟಾರೆ ಸರ್ಕಾರಿ ಶಾಲೆಗಳ ಸುಧಾರಣೆ ಮತ್ತು ಬೆಳವಣಿಗೆಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವರು ಹೇಳಿದರು.



ಕುಸುಬೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಮಾರಂಭವನ್ನು ಶಾಲೆಯ ವಿದ್ಯಾರ್ಥಿಗಳೇ ಉದ್ಘಾಟಿಸಿದರು. ಸಚಿವ ಮಧು ಬಂಗಾರಪ್ಪ, ಶಾಸಕ ಡಾ.ಮಂತರ್ ಗೌಡ ಮೊದಲಾದವರು ಉಪಸ್ಥಿತರಿದ್ದರು.

ಶಾಲೆಗಳ ಬಲವರ್ಧನೆಗೆ ಕ್ರಮ: ರಾಜ್ಯದಲ್ಲಿ ಸರ್ಕಾರಿ ಶಾಲೆಗೆ 12ಸಾವಿರ ಹಾಗೂ ಅನುದಾನಿತ ಶಾಲೆಗೆ 6 ಸಾವಿರ ಒಟ್ಟು 18 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆ ನಡೆಯುತ್ತಿದ್ದು, ಶೀಘ್ರ ಶಿಕ್ಷಕರ ನೇಮಕಾತಿ ನಡೆಯಲಿದೆ. ಸರ್ಕಾರಿ ಶಾಲೆಯನ್ನು ಬಲಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಲವು ಕಾರ್ಯಕ್ರಮ ರೂಪಿಸಿದೆ. ಆ ನಿಟ್ಟಿನಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಲಾಗಿದೆ ಎಂದು ತಿಳಿಸಿದರು. ರಾಜ್ಯದ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಒಟ್ಟು 900ಕೆಪಿಎಸ್ ಶಾಲೆ ಆರಂಭಿಸಲು ಸರ್ಕಾರ ಮಂಜೂರಾತಿ ನೀಡಿದ್ದು, ಮಕ್ಕಳ ಅನುಕೂಲಕ್ಕಾಗಿ ಸಾರಿಗೆ ವ್ಯವಸ್ಥೆಯನ್ನೂ ಉಚಿತವಾಗಿ ಕಲ್ಪಿಸಲಾಗುತ್ತದೆ ಎಂದು ಸಚಿವರು ವಿವರಿಸಿದರು.

ಫಲಿತಾಂಶ ಸುಧಾರಣೆಗೆ ಒತ್ತು: ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಸುಧಾರಿಸಲು ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುತ್ತಿದೆ. ಇದರಿಂದ ಪಾರದರ್ಶಕ ಪರೀಕ್ಷೆ ನಡೆಯಲು ಸಾಧ್ಯವಾಗಿದೆ.

ಇಂತಹ ವ್ಯವಸ್ಥೆ ದೇಶದಲ್ಲೇ ಮೊದಲು ಎಂದು ಹೇಳಿದರು. ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಡಕಾಗದಂತೆ 3 ಪರೀಕ್ಷಾ ನೀತಿ ಜಾರಿಗೊಳಿಸಿ, 25 ದಿನಗಳ ಅಂತರದಲ್ಲಿ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳ ಶೈಕ್ಷಣಿಕ ಬದುಕಿಗೆ ಅನುಕೂಲ ಮಾಡಲಾಗಿದೆ. ಇದರಿಂದಾಗಿ ಈ ವರ್ಷ 1.16 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದರು.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿನದ್ದಾಗಿದೆ. ಆ ದಿಸೆಯಲ್ಲಿ ಸರ್ಕಾರಿ ಶಾಲೆ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕಿದೆ ಎಂದು ಸರ್ಕಾರಿ ಶಾಲೆಗಳು ಸುಧಾರಣೆ ಆಗುತ್ತಿದ್ದು, ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಶಾಸಕ ಡಾ. ಮಂತರ್ ಗೌಡ ಸಲಹೆ ನೀಡಿದರು.

ವೇದಿಕೆಯಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಪ್ರಸಾದ್, ಶತಮಾನೋತ್ಸವ ಸಮಿತಿ ಅಧ್ಯಕ್ಷ ಜಿ.ಎಸ್.ಪ್ರಭುದೇವ್, ಗೌರವ ಅಧ್ಯಕ್ಷ ಕೆ.ಡಿ.ಕುಮಾರ್, ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ಪಿ. ಉಲ್ಲಾಸ್, ಉಪಾಧ್ಯಕ್ಷ ಆನಂದ, ಬೇಳೂರು ಗ್ರಾ. ಪಂ. ಉಪಾಧ್ಯಕ್ಷ ಸುದರ್ಶನ್, ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಮುಖಂಡರಾದ ಡಾ. ಚಂದ್ರಮೌಳಿ, ಕೆ.ಪಿ.ಚಂದ್ರಕಲಾ, ಡಿಡಿಪಿಯು ಚಿದಾನಂದ ಮೂರ್ತಿ, ಡಿಡಿಪಿಐ ಬಸವರಾಜು, ಡಾ.ವೇಣುಗೋಪಾಲ್, ತಹಶೀಲ್ದಾರ್ ಕೃಷ್ಣಮೂರ್ತಿ, ಬಿಇಒ ಕೃಷ್ಣಪ್ಪ, ಬಿ.ಬಿ.ಸತೀಶ್, ಉಪಸ್ಥಿತರಿದ್ದರು.

ಮೂರ್ನಾಡುವಿನಲ್ಲಿ ಸಂಭ್ರಮದ ಕನ್ನಡ ಹಬ್ಬ

ಮಡಿಕೇರಿ, ನ.9– ಮೂರ್ನಾಡುವಿನಲ್ಲಿ 70ನೇ ಕನ್ನಡ ರಾಜ್ಯೋತ್ಸವದ ನಿಮಿತ್ತ 'ಕನ್ನಡ ಹಬ್ಬ' ಸಂಭ್ರಮದಿಂದ ನಡೆಯಿತು. ಇಲ್ಲಿನ ಪಿಎಂಶ್ರೀ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಮೈದಾನ ಬಳಿಯಿಂದ ಕೊಂಡಂಗೇರಿ ವೃತ್ತದವರೆಗೆ ಕನ್ನಡಾಂಬೆಯ ಭಾವಚಿತ್ರವನ್ನೊಳಗೊಂಡ ಮೆರವಣಿಗೆ ನಡೆಸಲಾಯಿತು.

ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ವಿ. ದೀರ್ಘಕೇಶಿ ಶಿವಣ್ಣ ಮೆರವಣಿಗೆಯನ್ನು ಉದ್ಘಾಟಿಸಿದರು. ಡೊಳ್ಳು ಕುಣಿತ, ಬೊಂಬೆ ಕುಣಿತ ಸೇರಿದಂತೆ ಮೂರ್ನಾಡು ಹೋಬಳಿಯ ವಿವಿಧ ಶಾಲಾ–ಕಾಲೇಜುಗಳ ಮಕ್ಕಳು, ಸಂಘ ಸಂಸ್ಥೆಗಳು, ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಸಿಸಿ ತಂಡ, ಸೇರಿದಂತೆ ನೂರಾರು ಕನ್ನಡ ಅಭಿಮಾನಿಗಳು, ಸಾಹಿತ್ಯ ಪರಿಷತ್ತು ಸದಸ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಮೆರವಣಿಗೆಯ ಬಳಿಕ ಪಿ.ಎಂ.ಶ್ರೀ ಶಾಲಾ ಆವರಣದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದ, ಶಾಸಕ ಡಾ.ಮಂತರ್ ಗೌಡ, ಮೂರ್ನಾಡುವಿನಲ್ಲಿ ನಡೆಯುತ್ತಿರುವ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದ ಅಲಂಕಾರ ನೋಡಿ ಸಮ್ಮೇಳನದಂತೆ ಭಾಸವಾಯಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮೂರ್ನಾಡುವಿನಲ್ಲಿ ಕನ್ನಡ ಹಬ್ಬದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಜನಪದ ಕಲಾವಿದರು ಪ್ರದರ್ಶನ ನೀಡಿದರು

ನವೆಂಬರ್ ತಿಂಗಳಿನಲ್ಲಿ ಕನ್ನಡ ಬೆಳವಣಿಗೆಗಾಗಿ ಮಾಡುತ್ತಿರುವ ಈ ಕಾರ್ಯಕ್ರಮ ಕೇವಲ ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗಿರಬಾರದು ಪ್ರತಿದಿನ ಕನ್ನಡ ನಮ್ಮ ಮನದಲ್ಲಿ ಹಚ್ಚ ಹಸಿರಾಗಿರಬೇಕು ಎಂದರು.

ಜಿಪಂ ಮಾಜಿ ಅಧ್ಯಕ್ಷೆ ದೀರ್ಘಕೇಶಿ ಶಿವಣ್ಣ, ನಾಡ ಧ್ವಜರೋಹಣ ನೆರವೇರಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾನವ ಹಕ್ಕುಗಳ ಆಯೋಗದ ರಾಜ್ಯಾಧ್ಯಕ್ಷ ಅವರೆಮಾದಂಡ ಶರಣ್ ಪೂಣಚ್ಚ, ಎಂಇಎಸ್ ಪ್ರೌಢ ಶಾಲೆಯ ಕನ್ನಡ ಶಿಕ್ಷಕ ಎಸ್.ಡಿ.ಪ್ರಶಾಂತ್, ಪರಿಷತ್ತಿನ ಮೂರ್ನಾಡು ಹೋಬಳಿ ಘಟಕದ ಅಧ್ಯಕ್ಷೆ ಈರಮಂಡ ಹರಿಣಿ ವಿಜಯ್ ಅವರುಗಳು ಮಾತನಾಡಿದರು.

ರಾಷ್ಟ್ರಪ್ರಶಸ್ತಿ ವಿಜೇತೆ, ಸಿನಿಮಾ ನಿರ್ದೇಶಕಿ ಮತ್ತು ನಿರ್ಮಾಪಕಿ ಕೊಟ್ಟುಕತ್ತಿರ ಯಶೋಧ ಪ್ರಕಾಶ್ ಅವರನ್ನು ಮೂರ್ನಾಡು ಹೋಬಳಿ ಘಟಕದ ಪರವಾಗಿ ಶಾಸಕರು, ಜಿಲ್ಲಾ ಹಾಗೂ ಹೋಬಳಿ ಘಟಕದ ಅಧ್ಯಕ್ಷರು ಸೇರಿದಂತೆ ವೇದಿಕೆಯಲ್ಲಿದ್ದ ಗಣ್ಯರು ಸನ್ಮಾನಿಸಿ ಗೌರವಿಸಿದರು. 'ಸ್ಮರ' ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಜ್ಞಾನಜ್ಯೋತಿ, ಮಾರುತಿ, ಎಂಇಎಸ್, ಪಿಯು ಕಾಲೇಜು, ಶಾಲಾ ಕಾಲೇಜು, ಗಣಪತಿ ಭಜನಾ ಮಂಡಳಿ ಮರಗೋಡು, ಮಡಿಕೇರಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಂದ ನೃತ್ಯ ವೈಭವ ನಡೆಯಿತು. ಕೊಡಗು ಪೊಲೀಸ್ ಸಾಂಸ್ಕೃತಿಕ ವೇದಿಕೆಯ ಕಲಾವಿದರುಗಳಿಂದ ನಡೆದ ಕನ್ನಡ ರಸ ಮಂಜರಿ ಕಾರ್ಯಕ್ರಮ ನೆರೆದಿದ್ದವರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು.

ವೇದಿಕೆಯಲ್ಲಿ ಪರಿಷತ್ತಿನ ತಾಲೂಕು ಅಧ್ಯಕ್ಷೆ ಕಡ್ಲೆರ ತುಳಸಿ ಮೋಹನ್, ಜಿಲ್ಲಾ ಕಸಾಪದ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮದ್, ಜಿಲ್ಲಾ ಕಸಾಪದ ಕಾರ್ಯದರ್ಶಿ ಪುದಿಯನೆರವನ ರೇವತಿ, ಪತ್ರಕರ್ತ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ, ಮೂರ್ನಾಡು ಪಂಚಾಯಿತಿ ಪಿಡಿಓ ಚಂದ್ರಮೌಳಿ, ಪಿಎಂಶ್ರೀ ಶಾಲೆಯ ಮುಖ್ಯೋಪಾಧ್ಯಾಯಿನಿ ಪುಷ್ಪವತಿ ಉಪಸ್ಥಿತರಿದ್ದರು.

ಪುರಸಭೆ ಆಡಳಿತ ಅವಧಿ ಮುಕ್ತಾಯದ ಘೋಷಣೆ: ಜೆಡಿಎಸ್ ಸಂಭ್ರಮಾಚರಣೆ

ವಿರಾಜಪೇಟೆ, ನ.9– ಪುರಸಭೆಯ ಆಡಳಿತ ಮಂಡಳಿ ಅವಧಿ ಮುಕ್ತಾಯದ ಅಧಿಕೃತ ಘೋಷಣೆಯ ಬೆನ್ನಲ್ಲೆ ತಾಲೂಕು ಜೆ ಡಿ ಎಸ್ ಪ್ರಮುಖರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಹಿಂದಿನ ಪ ಪಂ ಗೆ 2018 ನೇ ಸಾಲಿನ ಚುನಾವಣೆ ನಡೆದ ಬಳಿಕ ಏಳೂವರೆ ವರ್ಷದ ಸುದೀರ್ಘ ಕಾಲ ಅಧಿಕಾರಕ್ಕೆ ಅಂಟಿಕೊಂಡಿದ್ದರು. ಸದಸ್ಯರು ಪಟ್ಟಣ ಪಂಚಾಯಿತಿಯಲ್ಲಿ ಯಾವುದೇ ಜನಪರ ಅಭಿವೃದ್ಧಿ ಕೆಲಸದಲ್ಲಿ ತೊಡಗಿಸಿಕೊಳ್ಳದೆ ಸ್ವ ಹಿತಾಸಕ್ತಿಯಲ್ಲಿ ಕಾಲಕಳೆದರು ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಮಂಜುನಾಥ್ ಆರೋಪಿಸಿದರು.

ಎ ಎಸ್ ಪೊನ್ನಣ್ಣ ಅಧಿಕಾರಕ್ಕೆ ಬಂದ ಬಳಿಕ ಪಟ್ಟಣ ಪಂಚಾಯಿತಿ ಪುರಸಭೆಯಾಗಿತ್ತು. ಆದರೆ ಕೆಲವರ ಆಡಳಿತ ವ್ಯವಸ್ಥೆ ನಲುಗಿ ಹೋಯಿತು. ಕೆಲ ಅಧಿಕಾರಿಗಳನ್ನು ತಾಳಕ್ಕೆ ತಕ್ಕಂತೆ ಕುಣಿಸಿದರು. ಸೂಕ್ತ ರೀತಿಯ ಅಭಿವೃದ್ಧಿ ಕೆಲಸ ಮಾಡದೆ ದಾರ್ಷ್ಯದಿಂದ ಮೆರೆದರು ಹಾಗೂ ನಾವೇ ಎಲ್ಲಾ ಎನ್ನುವಂತೆ ವರ್ತಿಸಿ ಜನರಿಗೆ ಬೇಸರ ತಂದರು. ಹಳೆಯ ಸ್ವಹಿತಾಸಕ್ತಿಗಳನ್ನು ದೂರ ಇಟ್ಟು ಶಾಸಕರ ಮೇಲೆ ಜನ ಹೊಂದಿರುವ ನಂಬಿಕೆ ಉಳಿಸಿಕೊಳ್ಳಲಿ. ಆ ಮೂಲಕ ಪಟ್ಟಣ ಸುಂದರ ಅಭಿವೃದ್ಧಿ ಪಟ್ಟಣವಾಗಲಿ ಎಂಬುದು ನಮ್ಮ ಆಶಯ. ಇದಕ್ಕಾಗಿ ನಾವು ಶಾಸಕರಿಗೆ ಬೆಂಬಲವಾಗಿರುತ್ತೇವೆ. ಪದೇ ಪದೇ ಚುನಾವಣೆಗೆ ಅರಿಸಿ ಬರುವ ಜನ ತಿರಸ್ಕರಿಸಬೇಕು. ಹಣ ನೀಡಿದರೆ ಮತ ಹಾಕುತ್ತಾರೆ ಎನ್ನುವ ದಾರ್ಷ್ಯ ಹೊಂದಿರುವ ಇವರಿಗೆ ಜನತೆ ತಕ್ಕ ಉತ್ತರ ನೀಡಬೇಕು. ಉತ್ತಮ ಹಿನ್ನಲೆ ಹೊಂದಿರುವ ಯುವ ಶಕ್ತಿಗಳು ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಕಣಕ್ಕೆ ಇಳಿಯುವಂತಾಗಬೇಕು. ಆ ಮೂಲಕ ಮುಂದಿನ ಚುನಾವಣೆ ಮತದಾರರ ಪ್ರಜಾಪ್ರಭುತ್ವದ ಗೆಲುವಾಗಲಿ ಮತ್ತು ಸಂವಿಧಾನದ ಗೆಲುವಾಗಲಿ ಎಂದು ಆಶಿಸುವುದಾಗಿ ಮಂಜುನಾಥ್ ಹೇಳಿದರು.

ಪೊಲೀಸರ ವಿರುದ್ಧ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪೊಲೀಸರ ವಿರುದ್ಧ ಧರಣಿ ನಡೆಸಿದರು.

ಗುಂಡ್ಲುಪೇಟೆ, ನ.9(ಸೋಮ್.ಜಿ)– ಬಿಜೆಪಿ ಕಾರ್ಯಕರ್ತರ ವಿರುದ್ಧ ವಿನಾ ಕಾರಣ ಪಟ್ಟಣ ಠಾಣೆ ಪೊಲೀಸರು ಕೇಸು ದಾಖಲು ಮಾಡಿದ್ದಾರೆ ಎಂದು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪೊಲೀಸ್ ಠಾಣೆ ಮುಂಭಾಗ ಧರಣಿ ನಡೆಸಿದರು.

ಪೊಲೀಸ್ ಠಾಣೆಯ ಆವರಣದಲ್ಲಿ ಸಮಾವೇಶಗೊಂಡ ಕಾರ್ಯಕರ್ತರು ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ನೇತೃತ್ವದಲ್ಲಿ ಧರಣಿ ನಡೆಸಿದರು. ಬಿಜೆಪಿಯು ಆಯೋಜಿಸಿದ್ದ ನೀರಿಗಾಗಿ ಕಾಲ್ನಡಿಗೆ ಪಾದಯಾತ್ರೆಯಲ್ಲಿ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿದ್ದರಿಂದ ಹೆದ್ದಾರಿಯಲ್ಲಿ ಕೆಲ ಕಾಲ ಸಂಚಾರಕ್ಕೆ ತೊಂದರೆಯುಂಟು ಮಾಡಿದ್ದಾರೆಂದು ಆರೋಪಿಸಿ ಪೊಲೀಸರು ಬಿಜೆಪಿ ಕೆಲ ಕಾರ್ಯಕರ್ತರ ವಿರುದ್ಧ ದೂರು ದಾಖಲಿಸಿಕೊಂಡಿದ್ದರು. ಇದರಿಂದ ಬೇಸತ್ತ ಬಿಜೆಪಿಗರು ಧರಣಿ ನಡೆಸಿ ಪೊಲೀಸರ ಕ್ರಮವನ್ನು ಖಂಡಿಸಿದರು. ಪೊಲೀಸರು ಕಾಂಗ್ರೆಸ್ ಕೈಗೊಂಬೆ ಗಳಾಗಿದ್ದಾರೆ. ಪಟ್ಟಣದಲ್ಲಿ ಕಳ್ಳತನ ಪ್ರಕರಣಗಳು, ಅಕ್ರಮ ದಂದೆಗಳು ಹೆಚ್ಚಾಗುತ್ತಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ಆರೋಪಿಸಿದರು. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್ ನೀಡಿದ ಆಶ್ವಾಸನೆ ಮೇರೆಗೆ ಧರಣಿ ಕೈಬಿಟ್ಟರು.

ಮಂಡಲಾಧ್ಯಕ್ಷ ಮಹದೇವ ಪ್ರಸಾದ್, ಮುಖಂಡರಾದ ಎನ್. ಮಲ್ಲೇಶ್, ನವೀನ್‌ಮೌರ್ಯ, ಎಲ್.ಸುರೇಶ್, ನಾಗೇಶ್, ನಾಗೇಂದ್ರ, ಮಂಜುನಾಥ್, ಕಮರಹಳ್ಳಿ ರವಿ, ಶಶಿ, ಕೊಡಸೋಗೆ ರಾಜಣ್ಣ, ಸುಜೇಂದ್ರ ಸೇರಿದಂತೆ ವಿವಿಧ ಘಟಕಗಳ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆ

ಸಿದ್ದಲಿಂಗಸ್ವಾಮಿ ಬಣಕ್ಕೆ ಜಯ

ಚಾಮರಾಜನಗರ, ನ.9–ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಆರ್.ಎನ್. ಸಿದ್ದಲಿಂಗಸ್ವಾಮಿ, ಪ್ರಸಾದ್ ಎಸ್. ಲಕ್ಕೂರು ಬಣ 25 ಸ್ಥಾನಗಳಲ್ಲೂ ಗೆದ್ದು ಭರ್ಜರಿ ಗೆಲುವು ಸಾಧಿಸಿದೆ.

ಕಳೆದ ಒಂದು ದಶಕಗಳಲ್ಲಿ ಇದೇ ಮೊದಲ ಬಾರಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ, ಕಾರ್ಯದರ್ಶಿ, ರಾಜ್ಯ ಸಮಿತಿ ಸದಸ್ಯ ಸೇರಿದಂತೆ ಒಟ್ಟು 25 ಸ್ಥಾನಗಳಿಗೂ ಚುನಾವಣೆ ನಡೆಯಿತು.

ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೂ ಜಿಲ್ಲೆಯ ಎಲ್ಲಾ ಅರ್ಹ ಪತ್ರಕರ್ತರು ಮತ ಚಲಾವಣೆ ಮಾಡಿದರು. ನಂತರ ಮತ ಎಣಿಕೆ ಕಾರ್ಯ ನಡೆಯಿತು.

ಸಂಘದ ನೂತನ ಅಧ್ಯಕ್ಷರಾಗಿ 'ಮೈಸೂರು ಮಿತ್ರ' ವರದಿಗಾರ ಆರ್. ಎನ್. ಸಿದ್ದಲಿಂಗಸ್ವಾಮಿ 85 ಮತಗಳು, ಪ್ರಧಾನ ಕಾರ್ಯದರ್ಶಿಯಾಗಿ ಆಂದೋಲನಾ ಪತ್ರಿಕೆಯ ವರದಿಗಾರ ಪ್ರಸಾದ್ ಎಸ್. ಲಕ್ಕೂರು 86, ಖಜಾಂಚಿಯಾಗಿ ಸುವರ್ಣ ನ್ಯೂಸ್ ಚಾನಲ್‌ನ ಆರ್.ಸಿ. ಪುಟ್ಟರಾಜು 77, ರಾಜ್ಯ ಸಮಿತಿ ಸದಸ್ಯರಾಗಿ ಗೊರು ಕನ ಪತ್ರಿಕೆ ಸಂಪಾದಕ ಸಿ. ಮಹೇಂದ್ರ 83 ಮತಗಳನ್ನು ಪಡೆದು ಜಯ ಗಳಿಸಿದರು.



ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಆಯ್ಕೆಯಾದವರನ್ನು ಮೇಲೆತ್ತಿ ಸಂಭ್ರಮಾಚರಿಸಿದರು.

ಉಪಾಧ್ಯಕ್ಷರಾಗಿ ಎಚ್.ಎಸ್. ಚಂದ್ರಶೇಖರ್ 75, ಬಿ.ವಿ. ಪ್ರಸಾದ್ 81, ಡಿ. ನಟರಾಜು 77 ಮತಗಳು ಹಾಗೂ ಕಾರ್ಯದರ್ಶಿಗಳಾಗಿ ಎನ್. ನಾಗೇಂದ್ರ 76, ಕೆ.ಎಸ್. ಫಾಲಲೋಚನ ಆರಾಧ್ಯ 85, ಅಮಚವಾಡಿ ಆರ್. ರಾಜೇಂದ್ರ 73 ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದರು.

ಉಳಿದಂತೆ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಸ್.ಎನ್. ವಿಜಯ ಕುಮಾರ್ 86, ಎಸ್.ಎಂ. ನಂದೀಶ್ 85, ಎಸ್.ವಿ. ಪ್ರಕಾಶ್ ಬೆಲ್ಲದ್ 82, ಎಂ. ಬಸವರಾಜು 82, ಅಬ್ರಹಾಂ ಡಿ.ಸಿಲ್ವ 81, ಮಲ್ಲಪ್ಪ 81, ಕೆ.ಎ. ಬಿಳಿಗಿರಿ ಶ್ರೀನಿವಾಸ 81, ಎಂ.ಎಸ್. ಮಹೇಶ್ 80, ಎಸ್. ರಾಜಶೇಖರ್ 80, ಸಿ. ನಂಜುಂಡ ನಾಯ್ಕ 78, ವೈ.ಎಂ. ಭಾನು ಪ್ರಕಾಶ್ 78, ಎಂ.ಎಸ್. ಮಲ್ಲಣ್ಣ 78, ಎಂ. ಮಲ್ಲೇಶ್ 76, ಎಂ. ಮರಿಸ್ವಾಮಿ 74 ಹಾಗೂ ಸಿ. ಪುರುಷೋತ್ತಮ್ 72 ಮತಗಳನ್ನು ಪಡೆದು ಜಯಗಳಿಸಿದ್ದಾರೆ.

ತಳಮಟ್ಟದ ಸಮಸ್ಯೆ ಪರಿಹರಿಸಲು ಗ್ರಾಮಸಭೆಗಳನ್ನು ಸದ್ಬಳಕೆ ಮಾಡಿಕೊಳ್ಳಿ



ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಆರ್. ಪಾಟೀಲ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಚಾಮರಾಜನಗರ, ನ.9– ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ತಳಮಟ್ಟದ ಸಮಸ್ಯೆ ಪರಿಹರಿಸಲು ಗ್ರಾಮಸಭೆಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಆರ್. ಪಾಟೀಲ ಸಲಹೆ ಮಾಡಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇತ್ತೀಚೆಗೆ ವಿಕೇಂದ್ರೀಕರಣ ಬಲವರ್ಧನೆ ಹಾಗೂ ವಾರ್ಷಿಕ ಕರಡು ಯೋಜನೆ ರೂಪಿಸುವ ಸಂಬಂಧ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಸಾರ್ವಜನಿಕರು ಗ್ರಾಮಸಭೆಯ ಸದಸ್ಯರಾಗಿದ್ದು, ಗ್ರಾಮಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ವಸತಿ, ವಿದ್ಯುತ್ ಸೇರಿದಂತೆ ಇತರೆ ಮೂಲಸೌಲಭ್ಯಗಳ ಸಮಸ್ಯೆಗಳು ಗ್ರಾಮಸ್ಥರಿಗೆ ತಿಳಿದಿರುತ್ತದೆ. ಈ ನಿಟ್ಟಿನಲ್ಲಿ ಗ್ರಾಮಗಳ ಅಭಿವೃದ್ಧಿಗಾಗಿ ನಡೆಯುವ ಸಭೆಗಳಿಗೆ ಸರ್ಕಾರವು ಹೆಚ್ಚಿನ ಅಧಿಕಾರ ನೀಡಿದೆ. ಫಲಾನುಭವಿಗಳ ಆಯ್ಕೆಗೆ ಸಂಬಂಧಿಸಿದಂತೆ ಕೈಗೊಳ್ಳುವ ನಿರ್ಣಯಗಳು ಪ್ರಮುಖವಾಗಲಿವೆ. ಗ್ರಾಮಸಭೆಗಳಲ್ಲಿ ಬಡವರು, ಅವಕಾಶ ವಂಚಿತರನ್ನು ಗುರುತಿಸಿ ಸರ್ಕಾರದ ಸವಲತ್ತುಗಳನ್ನು ನೀಡಲು ಅಧಿಕಾರಿಗಳು ಮುಂದಾಗಬೇಕು ಎಂದರು.

ಅಧಿಕಾರ ವಿಕೇಂದ್ರೀಕರಣ ಬಲವರ್ಧನೆಗೊಳಿಸಲು ವಾರ್ಷಿಕ ಕರಡು ಯೋಜನೆ ರೂಪಿಸಬೇಕಾಗಿದ್ದು, ಗ್ರಾಮಗಳ ಮೂಲ ಸಮಸ್ಯೆಗಳನ್ನು ಪರಾಮರ್ಶಿಸಿ ಕ್ರಿಯಾ ಯೋಜನೆ ತಯಾರಿಸಲು ಅಧಿಕಾರಿಗಳು ಈಗಿನಿಂದಲೇ ಕಾರ್ಯೋನ್ಮುಖರಾಗಬೇಕು. ಗ್ರಾಮಸಭೆಗಳಲ್ಲಿ ಗ್ರಾಮಸ್ಥರ ಸಲಹೆಗಳಿಗೆ ಆದ್ಯತೆ ನೀಡಿ ಅವರ ಕುಂದುಕೊರತೆಗಳಿಗೆ ಕಿವಿಯಾಗಬೇಕು. ಸರ್ಕಾರ ಕೊಟ್ಟಿರುವ ಅಧಿಕಾರ ದುರುಪಯೋಗವಾಗದಂತೆ ಜವಾಬ್ದಾರಿಯುತವಾಗಿ ಸದ್ಬಳಕೆ ಮಾಡಿಕೊಂಡು ಸಮಸ್ಯೆಗಳನ್ನು ಬಗೆಹರಿಸಬೇಕು. ಆಗಮಾತ್ರ ಪಂಚಾಯಿತಿಗಳು ಗ್ರಾಮ ಸರ್ಕಾರಗಳಾಗಿ ಆಡಳಿತ ನಡೆಸಿ ಗ್ರಾಮ ಸ್ವರಾಜ್ಯಗಳಾಗಲು ಸಾಧ್ಯವಾಗಲಿದೆ ಎಂದರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಪಂಚಾಯತ್ ವ್ಯವಸ್ಥೆ ಕಾಲಕಾಲಕ್ಕೆ ಬದಲಾಗುತ್ತಿದೆ. ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಜಿಪಂ ಮತ್ತು ತಾಲೂಕು ಹಾಗೂ ಗ್ರಾಪಂ ವ್ಯವಸ್ಥೆಗಳನ್ನು ಜಾರಿ ಮಾಡಿದರು. ಪಂಚಾಯಿತಿಗಳ ಅಭಿವೃದ್ಧಿಗೆ ಗ್ರಾಮಸಭೆಗಳು ಪೂರಕವಾದ ಉತ್ತಮ ವ್ಯವಸ್ಥೆಯಾಗಿದೆ. ಇದರ ನಿರ್ಣಯಗಳಿಗೆ ತುಂಬಾ ಮಹತ್ವವಿದೆ. ಇಲ್ಲಿ ಆಯ್ಕೆಯಾದ ಫಲಾನುಭವಿಗಳನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಆದರೆ ಗ್ರಾಮಸಭೆಗಳು ಕಾಲಕಾಲಕ್ಕೆ ನಡೆಯದಿರುವುದು ವಿಷಾದನೀಯ ಸಂಗತಿಯಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಪಂ ಉಪಕಾರ್ಯದರ್ಶಿ ಡಿ.ಸಿ. ಶೃತಿ, ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ್, ವೆಂಕಟೇಶ್, ಜಿಲ್ಲಾಮಟ್ಟದ ಅಧಿಕಾರಿಗಳು, ನಗರ ಸ್ಥಳೀಯ ಸಮಸ್ಥೆಗಳ ಅಧಿಕಾರಿಗಳು, ವಿವಿಧ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ವಂದೇ ಮಾತರಂಗೆ ಕಾಂಗ್ರೆಸ್ ವಿರೋಧ

ಚಾಮರಾಜನಗರ, ನ.9–ದೇಶಭಕ್ತಿಯ, ಏಕತೆಯ, ಬ್ರಿಟಿಷರ ವಿರುದ್ಧ ಹೋರಾಟದ ಶಕ್ತಿಶಾಲಿಯಾಗಿ ರೂಪಗೊಂಡ ವಂದೇ ಮಾತರಂ ರಾಷ್ಟ್ರಗೀತೆಯನ್ನು ಕಾಂಗ್ರೆಸ್ ವಿರೋಧಿಸಿದೆ ಎಂದು ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ ಆರೋಪಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ವಂದೇ ಮಾತರಂ 150ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, 1923ರಲ್ಲಿ ಕಾಕಿನಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪಂ. ವಿಷ್ಣು ದಿಗಂಬರ ಪಾಲುಸ್ಕರ್ ಅವರನ್ನು 'ವಂದೇ ಮಾತರಂ' ಹಾಡಲು ಆಹ್ವಾನಿಸಲಾಯಿತು. ಆದರೆ ಆಗಿನ ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಮೊಹಮ್ಮದ್ ಅಲಿ ಅವರು ಧಾರ್ಮಿಕ ಕಾರಣಗಳಿಂದ ವಿರೋಧಿಸಿದರು. ಮುಸ್ಲಿಂಲೀಗ್ ನಾಯಕರನ್ನು ಸಂತೋಷಪಡಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು 1937ರಲ್ಲಿ ರಾಷ್ಟ್ರಗೀತೆಯ ಕೆಲಭಾಗಗಳನ್ನು ಅಧಿಕೃತವಾಗಿ ಕೈಬಿಟ್ಟಿತು. ನಂತರದಲ್ಲಿ ಕಾಂಗ್ರೆಸ್ ಮತ್ತು ಅದರ ಕೆಲವು ನಾಯಕರು 'ವಂದೇ ಮಾತರಂ'ಗೆ ವಿರೋಧ ವ್ಯಕ್ತಪಡಿಸುತ್ತಿದ್ದರು.

2017ರಲ್ಲಿ ನಾಯಕ ಅಕ್ಬರುದ್ದೀನ್ ಓವೈಸಿ ಅವರು ಶಾಲೆಗಳಲ್ಲಿ 'ವಂದೇ ಮಾತರಂ' ಹಾಡುವುದು ಕಡ್ಡಾಯಗೊಳಿಸಿದ ಸುತ್ತೋಲೆಯನ್ನು ರದ್ದುಪಡಿಸುವಂತೆ ಬೇಡಿಕೆ ಇಟ್ಟರು. ತೆಲಂಗಾಣ ಸರ್ಕಾರವು ನಂತರ ಶಾಲೆಗಳಲ್ಲಿ ಹಾಡು ಕಡ್ಡಾಯವಲ್ಲ ಎಂದು ಹೇಳಿತು. 2019ರಲ್ಲಿ ಮಧ್ಯ ಪ್ರದೇಶದ ಕಾಂಗ್ರೆಸ್ ಸರ್ಕಾರವು ಕಾರ್ಯಾಲಯದಲ್ಲಿ 'ವಂದೇ ಮಾತರಂ' ಹಾಡುವುದಕ್ಕೆ ನಿರ್ಬಂಧ ಹೇರಿತು ಎಂದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ ಆತ್ಮನಿರ್ಭರ ಭಾರತ ನಿರ್ಮಾಣ ಪ್ರತಿಜ್ಞೆ ಬೋಧಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಸುಂದ್ರಪ್ಪ, ನಗರಸಭಾ ಮಾಜಿ ಸದಸ್ಯ ಶಿವಣ್ಣ, ಜಿಲ್ಲಾ ಕಾರ್ಯದರ್ಶಿ ನಟರಾಜು, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯ, ಗ್ರಾಮಾಂತರ ಮಂಡಲ ಅಧ್ಯಕ್ಷ ಶಿವರುದ್ರಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೂಸಣ್ಣ, ಮಾಧ್ಯಮ ಸಂಚಾಲಕ ರಾಮಸಮುದ್ರ ಶಿವಣ್ಣ, ಮಾಧ್ಯಮ ಪ್ರಮುಖ್ ವೀರೇಂದ್ರ, ಉಡಿಗಾಲ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಮಂಜು, ಶಕ್ತಿ ಕೇಂದ್ರದ ಭಾಸ್ಕರ್, ಹೊಂಗನೂರು ಮಹಾದೇವಸ್ವಾಮಿ, ಮಹದೇವಶೆಟ್ಟಿ ಇತರರು ಹಾಜರಿದ್ದರು.

ಕೊಳ್ಳೇಗಾಲದಲ್ಲಿ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮ



ಕಾಂಗ್ರೆಸ್ ಹಿಂದುಳಿದ ವರ್ಗವು ಆಯೋಜಿಸಿದ್ದ ವಾಯ್ಸ್ ಆಫ್ ಓಬಿಸಿ ಕಾರ್ಯಕ್ರಮವನ್ನು ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷೆ ರಮ್ಯಾ ಉದ್ಘಾಟಿಸಿದರು. ಸಚಿವ ಮಧು ಬಂಗಾರಪ್ಪ, ಶಾಸಕ ಎ.ಆರ್.ಕೃಷ್ಣಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ನಂಜುಂಡ ಸ್ವಾಮಿ, ಡಾ. ತಿಮ್ಮಯ್ಯ, ಹಾಗೂ ರಾಜಶೇಖರ ಮೂರ್ತಿ, ಪ್ರದೀಪ್, ವಿನೋದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಕೇರಳದ ಕಂಪನಿ, ಮಧ್ಯವರ್ತಿಗಳಿಂದ ಕಡಿಮೆ ಕೂಲಿ ನೀಡಿದ ಆರೋಪ

ಶುಂಠಿ ಕಟಾವು ಬಹಿಷ್ಕರಿಸಿ ಕೂಲಿ ಕಾರ್ಮಿಕರ ಪ್ರತಿಭಟನೆ

ಬೊಪ್ಪನಹಳ್ಳಿಯಿಂದ ಹೆಚ್.ಡಿ. ಕೋಟೆವರೆಗೆ ಕೂಲಿ ಕಾರ್ಮಿಕರಿಂದ ಕಾಲ್ನಡಿಗೆ ಜಾಥಾ

ಶಾಸಕ ಅನಿಲ್ ಚಿಕ್ಕಮಾದು ಭೇಟಿ, ಸಮಸ್ಯೆ ನಿವಾರಣೆಯ ಭರವಸೆ



ಪ್ರತಿಭಟನಾ ನಿರತ ಕೂಲಿ ಕಾರ್ಮಿಕರನ್ನು ಭೇಟಿ ಮಾಡಿದ ಶಾಸಕ ಅನಿಲ್ ಚಿಕ್ಕಮಾದು ಮನವಿ ಸ್ವೀಕರಿಸಿದರು.

ಹೆಚ್.ಡಿ.ಕೋಟೆ, ನ.9– ಕೇರಳ ಮೂಲದ ಶುಂಠಿ ಕಂಪನಿಗಳು ಮತ್ತು ಮಧ್ಯವರ್ತಿಗಳು ಶುಂಠಿ ಕಟಾವು ಮಾಡಲು ಕಡಿಮೆ ಕೂಲಿ ನೀಡುತ್ತಿದ್ದಾರೆ ಎಂದು ಆರೋಪಿಸಿ ಹೆಚ್.ಡಿ. ಕೋಟೆ, ಸರಗೂರು, ಹುಣಸೂರು ಮತ್ತು ಪಿರಿಯಾಪಟ್ಟಣದ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಸದಸ್ಯರು ಶುಂಠಿ ಕಟಾವು ಬಹಿಷ್ಕರಿಸಿ ಶುಂಠಿ ಕಾರ್ಮಿಕರು ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು–ಮಾನಂದವಾಡಿ ಹೆದ್ದಾರಿಗೆ ಹೊಂದಿಕೊಂಡಂತಿರುವ ಬೊಪ್ಪನಹಳ್ಳಿ ಸಮೀಪವಿರುವ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘದ ಕಚೇರಿ ಮುಂಭಾಗದಿಂದ ಹ್ಯಾಂಡ್ ಪೋಸ್ಟ್ ಮಾರ್ಗವಾಗಿ ಸಾವಿರಾರು ಮಂದಿ ಕೂಲಿ ಕಾರ್ಮಿಕರು ಕಾಲ್ನಡಿಗೆಯ ಮೂಲಕ ಪ್ರತಿಭಟನಾ ಜಾಥವನ್ನು ನಡೆಸಿ ಶುಂಠಿ ಕಟಾವು ಮಾಡುವುದಿಲ್ಲ ಎಂದು ಕಟಾವು ನಿಲ್ಲಿಸಿ ಪ್ರತಿಭಟಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಅಧ್ಯಕ್ಷ ಮಗ್ಗೆ ಸುಂದರ್ ಮಾತನಾಡಿ ಎಚ್.ಡಿ. ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಸುಮಾರು ಆರು ಸಾವಿರ ಶುಂಠಿ ಕೂಲಿ ಕಾರ್ಮಿಕರು ದುಡಿಯುತ್ತಿದ್ದು ಇವರಿಗೆ ಸರಿಯಾಗಿ ಕೂಲಿ ಸಿಗುತ್ತಿಲ್ಲ. ಕನಿಷ್ಠ ವೇತನ ಪಾಲಿಸುತ್ತಿಲ್ಲ. ಪ್ರಯಾಣ ವೆಚ್ಚ ಕೊಡುತ್ತಿಲ್ಲ. ಇದಕ್ಕೆಲ್ಲ ಕಾರಣ ಮಧ್ಯವರ್ತಿಗಳ ಹಾವಳಿ ಕೇರಳದ ಶುಂಠಿ ಖರೀದಿಗಾರರೊಂದಿಗೆ ಶಾಮಿಲ್ ಆಗಿ ಕೂಲಿಕಾರರಿಗೆ ಅನ್ಯಾಯ ಮಾಡುತ್ತಿದ್ದಾರೆ ಮತ್ತು ನಮ್ಮನ್ನ ಶೋಷಣೆ ಮಾಡುತ್ತಿದ್ದಾರೆ ಒಂದು ಮೂಟೆ ಶುಂಠಿ ಕಿತ್ತರೆ ಇನ್ನೂರು ರೂ.ಗಳನ್ನು ಕೊಡುತ್ತಿದ್ದರು. ಆದರೆ ಮೊನ್ನೆಯಿಂದ ದಿಢೀರ್ ಅಂತ ನೂರೈವತ್ತು ಕೊಡುತ್ತೇವೆ. ಬಂದರೆ ಬನ್ನಿ ಇಲ್ಲಾ ಎಂದರೆ ನಾವು ಒಡಿಶಾ ಮತ್ತು ಅಸ್ಸಾಂ ಜನರನ್ನು ಕರೆಸಿ ಕಡಿಮೆ ಕೂಲಿಗೆ ದುಡಿಸಿಕೊಳ್ಳುತ್ತೇವೆ ಎಂದು ನಮ್ಮನ್ನ ಬೆದರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಾಸಕ ಅನಿಲ್ ಚಿಕ್ಕಮಾದು ಮನವಿ ಸ್ವೀಕರಿಸಿ ಖರೀದಿ ಮಾಡುವ ಮಾಲೀಕರು ಮತ್ತು ಕೂಲಿಕಾರ್ಮಿಕರ ಮುಖಂಡರನ್ನ ಸೇರಿಸಿ ಮಂಗಳವಾರ ತಹಶೀಲ್ದಾರ್ ನೇತೃತ್ವದಲ್ಲಿ ಸಭೆ ನಡೆಸಿ ಕನಿಷ್ಠ ಕೂಲಿಯ ಬಗ್ಗೆ ಮತ್ತು ನಿಮಗಾಗುತ್ತಿರುವ ಅನ್ಯಾಯಗಳ ಬಗ್ಗೆ ಚರ್ಚಿಸೋಣ. ಈ ಸಭೆಗೆ ಕಾರ್ಮಿಕ ಅಧಿಕಾರಿಗಳನ್ನು ಕರೆಸೋಣ ಎಂದು ತಿಳಿಸಿದರು. ತಹಶೀಲ್ದಾರ್ ಅವರು ಇದಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಸಭೆಗೆ ಬರಲು ಸೂಚಿಸಿದ ಮೇರೆಗೆ ಪ್ರತಿಭಟನೆಯನ್ನು ಕೈಬಿಡಲಾಯಿತು.

ಹ್ಯಾಂಡ್ ಪೋಸ್ಟ್‌ನಿಂದ ಎಚ್.ಡಿ. ಕೋಟೆ ಪಟ್ಟಣದ ಆಡಳಿತ ಸೌಧದವರೆಗೆ ಕಾಲ್ನಡಿಗೆ ಜಾಥಾ ಮಾಡಿಕೊಂಡು ಬಂದು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ನಾಗರಾಜು, ಉಪಾಧ್ಯಕ್ಷ ರಾಮಕೃಷ್ಣ ಬೆಟ್ಟನಾಯಕ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸಹ ಕಾರ್ಯದರ್ಶಿ ಸೋಮೇಶ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಮರಿಸಿದ್ದಯ್ಯ, ನಿರ್ದೇಶಕರಾಗಿ ರಾಜು, ಬೆಟ್ಟನಾಯಕ, ಮಹದೇವನಾಯಕ ತೇಜಕುಮಾರ್, ಪ್ರವೀಣ್, ಕುಮಾರ್, ಬೆಟ್ಟನಾಯಕ, ಚಿಕ್ಕಣ್ಣ ದುಂಡರಾಜು ಗೋವಿಂದರಾಜು, ಜೀವಿಕ ಸಂಘಟನೆ ಜೀವಿಕ ಬಸವರಾಜು ಇದ್ದರು.

ನಂಜನಗೂಡು ಬಳಿ ಕ್ಯಾಂಟರ್ ಡಿಕ್ಕಿ : ಬೈಕ್ ಸವಾರ ದುರ್ಮರಣ

ನಂಜನಗೂಡು, ನ.9– ಕ್ಯಾಂಟರ್‌ವೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ನಗರದ ರೈಲ್ವೆ ಮೇಲ್ ಸೇತುವೆ ಬಳಿಯ ಚಾಮುಂಡಿ ಟೌನ್ ಶಿಪ್ ಮುಂಭಾಗದಲ್ಲಿ ನಡೆದಿದೆ.

ಮೈಸೂರು ತಾಲೂಕಿನ ಮಾರ್ಬಳ್ಳಿ ಗ್ರಾಮದ ವಸಂತನಾಯಕ(42) ಮೃತ ದುರ್ದೈವಿ. ತಾಲೂಕಿನ ಗೋಣಹಳ್ಳಿ ಗ್ರಾಮದಲ್ಲಿ ತಮ್ಮ ಸಂಬಂಧಿಕರ ಮದುವೆಗೆ ಹೋಗಲು ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುತ್ತಿದ್ದ ವೇಳೆ ನಗರದ ರೈಲ್ವೆ ಮೇಲ್ ಸೇತುವೆ ಬಳಿಯ ಚಾಮುಂಡಿ ಟೌನ್‌ಶಿಪ್ ಮುಂಭಾಗದಲ್ಲಿ ಕ್ಯಾಂಟರ್ ಲಾರಿ ವಾಹನ ಅತಿ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ವಸಂತ ನಾಯಕ ಬೈಕ್ ಸಮೇತ ಕೆಳಗೆ ಬಿದ್ದಿದ್ದಾರೆ, ಕ್ಯಾಂಟರ್ ವಾಹನದ ಎಡ ಭಾಗದ ಹಿಂಬದಿ ಚಕ್ರ ಬೈಕ್ ಸವಾರ ವಸಂತ ನಾಯಕರ ತಲೆ ಮೇಲೆ ಹರಿದ ಪರಿಣಾಮ ವಸಂತ ನಾಯಕ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್ಐ ಕೃಷ್ಣಕಾಂತ ಕೋಳಿ, ಸಿಬ್ಬಂದಿಗಳಾದ ಜವರೇಶ್ ಸೇರಿದಂತೆ ಸಂಚಾರಿ ಪೊಲೀಸರು ಸ್ಥಳಕ್ಕೆ ತೆರಳಿ ಅಪಘಾತಕ್ಕೆ ಕಾರಣವಾದ ಕ್ಯಾಂಟರ್ ವಾಹನವನ್ನು ವಶಕ್ಕೆ ಪಡೆದು ಶವವನ್ನು ಮಾರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು.

ರಾಷ್ಟ್ರೀಯ ಪ್ರಾಧಿಕಾರದ ಅಧಿಕಾರಿಗಳು ಸರಿಯಾದ ಸೂಚನಾ ಫಲಕಗಳನ್ನು ಹಾಕದೆ ನಿರ್ಲಕ್ಷ್ಯ ವಹಿಸಿದ್ದರಿಂದಾಗಿ ಇದೇ ಸ್ಥಳದಲ್ಲಿ ಕಳೆದ ಕೆಲದಿನಗಳ ಹಿಂದೆ ಒಂದೇ ಕುಟುಂಬದ ಮೂವರು ಸಾವನಪ್ಪಿದ್ದರು, ನಗರದ ತಾಪಂ ಕಚೇರಿಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಸೂಚನಾ ಫಲಕಗಳನ್ನು ಅಳವಡಿಸುವಂತೆ ಇಲ್ಲವಾದಲ್ಲಿ ನಿಮ್ಮ ಮೇಲೆ ಎಫ್ಐಆರ್ ದಾಖಲಿಸಲಾಗುವುದು ಎಂದು ಎಚ್ಚರಿಕೆಯನ್ನು ಸಹ ನೀಡಿದ್ದರು, ಆದರೂ ಸಹ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸೂಚನಾ ಫಲಕಗಳನ್ನು ಅಳವಡಿಸದೆ ನಿರ್ಲಕ್ಷತೆ ವಹಿಸಿರುವುದರಿಂದ ನಂಜನಗೂಡು ಸಂಚಾರಿ ಪೊಲೀಸರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಮೇಲು ಸಹ ಎಫ್ಐಆರ್ ದಾಖಲು ಮಾಡಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪತಿಯನ್ನು ಕೊಂದು ಸೀರೆಯಿಂದ ಕುತ್ತಿಗೆ ಬಿಗಿದು ಆತ್ಮಹತ್ಯೆ ಎಂದು ಬಿಂಬಿಸಲು ಯತ್ನ

- ಕೊಲೆಯಾದವನ ಸಹೋದರನಿಗೆ ಸಿಕ್ಕಿಬಿದ್ದ ಆರೋಪಿ
- ಓಡಿ ಹೋಗುತ್ತಿದ್ದ ಆರೋಪಿಯನ್ನು ಬೆನ್ನತ್ತಿ ಹಿಡಿದ ಗ್ರಾಮಸ್ಥರು



ಕೊಲೆಯಾದ ವೀರಣ್ಣ

ಮಲ್ಲುಂಡಿ: ತಾಳಿ ಕಟ್ಟಿದ ಪತಿಯನ್ನೇ ಪತ್ನಿ ಕೊಲೆ ಮಾಡಿರುವ ಘಟನೆ ನಂಜನಗೂಡು ತಾಲೂಕಿನ ಇಂದಿರಾ ನಗರ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ. ಗ್ರಾಮದ ವೀರಣ್ಣ(41) ಪತ್ನಿಯಿಂದಲೇ ಕೊಲೆಯಾದ ದುರ್ದೈವಿ.

ಶನಿವಾರ ರಾತ್ರಿ ಸುಮಾರು 7 ಗಂಟೆ ಸಮಯದಲ್ಲಿ ಶಿವಮ್ಮಳ ಗಂಡ ವೀರಣ್ಣ ಕೂಲಿ ಕೆಲಸ ಮುಗಿಸಿ ಮನೆಗೆ ಆಗಮಿಸಿದ್ದಾನೆ. ಈ ಸಂದರ್ಭದಲ್ಲಿ ಹೆಂಡತಿ ಫೋನಿನಲ್ಲಿ ಮಾತನಾಡುತ್ತಿರುವುದನ್ನು ಕಂಡು ಈ ವಿಚಾರವಾಗಿ ಇಬ್ಬರಿಗೂ ಜಗಳ ಪ್ರಾರಂಭವಾಗಿದೆ. ಕೆಲವು ಹೊತ್ತಿನವರೆಗೂ ಜಗಳ ನಡೆಯುತ್ತಿರುತ್ತದೆ. ಕೆಲ ಸಮಯದ ಆನಂತರ ಇದ್ದಕ್ಕಿದ್ದ ಹಾಗೆ ಜಗಳ ಕೊನೆಗೊಳ್ಳುತ್ತದೆ. ಬಳಿಕ ತಮ್ಮನಾದ ಮಾದಪ್ಪನಿಗೆ ಅನುಮಾನ ಬಂದು ಅಣ್ಣನ ಮನೆಗೆ ಹೋದಾಗ ಬಾಗಿಲು ಮುಚ್ಚಲಾಗಿತ್ತು. ತಕ್ಷಣವೇ ತೆರೆದು ನೋಡಿದಾಗ ಅತ್ತಿಗೆ, ಅಣ್ಣನ ಕುತ್ತಿಗೆ ಭಾಗಕ್ಕೆ ಸೀರೆಯನ್ನು ಸುತ್ತಿ ಆತ್ಮಹತ್ಯೆ ಎಂದು ಬಿಂಬಿಸಲು ಯತ್ನಿಸಿದ್ದು, ಬೆಳಕಿಗೆ ಬಂದಿದೆ. ತಕ್ಷಣವೇ ಮಾದಪ್ಪನ ಕಂಡು ವೀರಣ್ಣನ ಪತ್ನಿ ಶಿವಮ್ಮ ಮನೆಯಿಂದ ಓಡಿ ಹೋಗಿದ್ದಾಳೆ.

ತಕ್ಷಣವೇ ಶಿವಮ್ಮನನ್ನು ಹಿಡಿದುಕೊಳ್ಳುವಂತೆ ಕೂಗಿಕೊಂಡಾಗ ಅಕ್ಕಪಕ್ಕದ ಮನೆಯವರು ಆಕೆಯನ್ನು ಹಿಡಿದಿದ್ದಾರೆ. ನನ್ನ ಅಣ್ಣನ ಸಾವಿಗೆ ಅತ್ತಿಗೆ ಶಿವಮ್ಮನೆ ಕಾರಣ ಎಂದು ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರಿನಲ್ಲಿ ತಿಳಿಸಿದ್ದಾನೆ. ವೀರಣ್ಣನ ಸಾವಿಗೆ ಅಕ್ರಮ ಸಂಬಂಧವೇ ಕಾರಣ ಎನ್ನಲಾಗಿದ್ದು, ಪ್ರತಿದಿನ ಇದೇ ವಿಚಾರಕ್ಕೆ ಜಗಳ ನಡೆಯುತ್ತಿತ್ತು. ಎಂದು ತಿಳಿದು ಬಂದಿದೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಾತಿ ವ್ಯವಸ್ಥೆಯನ್ನು ಪ್ರಬಲವಾಗಿ ಖಂಡಿಸಿದವರು ಕನಕದಾಸರು



ಪ್ರಗತಿಪರ ಚಿಂತಕರ ವೇದಿಕೆಯ ಕಚೇರಿಯಲ್ಲಿ 538ನೇ ಸಂತ ಶ್ರೇಷ್ಠ ಕನಕದಾಸರ ಭಾವಚಿತ್ರಕ್ಕೆ ಮುಖಂಡರು ಪುಷ್ಪಾರ್ಚನೆ ಮಾಡಿದರು

ತಿ.ನರಸೀಪುರ, ನ.9– 16ನೇ ಶತಮಾನದಲ್ಲಿದ್ದ ಸಾಮಾಜಿಕ ಅಸಮಾನತೆ ಅರಿತಿದ್ದ ಕನಕದಾಸರು ಜಾತಿ ವ್ಯವಸ್ಥೆಯನ್ನು ಪ್ರಬಲವಾಗಿ ಖಂಡಿಸಿದ ಸಂತ ಶ್ರೇಷ್ಠರು ಎಂದು ಉಪನ್ಯಾಸಕ ಮೂಗೂರು ಕುಮಾರ್‌ಸ್ವಾಮಿ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ರಸ್ತೆಯಲ್ಲಿರುವ ಪ್ರಗತಿಪರ ಚಿಂತಕರ ವೇದಿಕೆಯ ಕಚೇರಿಯಲ್ಲಿ ಸಂತ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವ ಅಂಗವಾಗಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ ಮೊದಲು ತಿಮ್ಮಪ್ಪ ನಾಯಕರಾಗಿ ನಂತರ ಕನಕದಾಸರಾದ ಬಳಿಕ ವ್ಯಾಸರಾಯರ ಶಿಷ್ಯರಾಗಲು ಹೋದಾಗ ಶೂದ್ರ ಸಮುದಾಯಕ್ಕೆ ಸೇರಿದವರು ಎಂದು ದೂರ ತಳ್ಳಲ್ಪಡುತ್ತಾರೆ. ಅಲ್ಲಿಂದಲೇ ಕೀರ್ತನೆಗಳ ಮೂಲಕ ಸಾಮಾಜಿಕ ಜಾಗೃತಿ ಆರಂಭಿಸಿದರು. ಕುಲದ ನೆಲೆಯನ್ನು ಬಲ್ಲಿರಾ ಎನ್ನುವ ಅಂದಿನ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿದೆ ಎಂದರು.

ಜನ ಜಾಗೃತಿ ಜಿಲ್ಲಾ ಅಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ ಮಾತನಾಡಿ ನಾಡಿನಲ್ಲಿ ಬಸವಾದಿ ಶರಣರು ಜನ್ಮ ತಾಳಿದ್ದರೆ, ಗೌತಮ ಬುದ್ಧ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಹಾಗೂ ಇನ್ನೂ ಹಲವು ನಾಯಕರು ಬದುಕಿನ ಆದರ್ಶ ಹಾಗೂ ಸನ್ಮಾರ್ಗವನ್ನು ನಮ್ಮೆಲ್ಲರಿಗೂ ಬಿಟ್ಟು ಹೋಗಿದ್ದಾರೆ. ಸಾಮಾಜಿಕ ವ್ಯವಸ್ಥೆ ಸರಿಪಡಿಸಲು ದೇವರು ಆಗಾಗ ಮಹಾತ್ಮರ ರೂಪದಲ್ಲಿ ಭೂಮಿಗೆ ಬರುತ್ತಾರೆ. ಚಿನ್ನದ ಬದಲು ಚಿನ್ನದಂತಹ ಮನಸ್ಸಿದ್ದರೆ ದೊಡ್ಡ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದು ಚಿನ್ನದ ಕೊಪ್ಪರಿಗೆಯಲ್ಲಿ ಜನಿಸಿದ ಕನಕ ದಾಸರು ಸಂದೇಶ ನೀಡಿದ್ದಾರೆ ಎಂದರು.

16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಬಹಳ ಪ್ರಬಲವಾಗಿತ್ತು. ತಳ ಸಮುದಾಯಗಳು ಶೋಷಣೆಗೆ ಒಳಗಾಗಿದ್ದ ವೇಳೆ ಅವರ ಧ್ವನಿಯಾಗಿ ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿದರು. ಕನಕದಾಸರು ಬರಿ ದಾರ್ಶನಿಕರು, ಸಾಹಿತಿ ಮಾತ್ರವಲ್ಲ. ಅವರೊಬ್ಬ ಸಮಾಜ ಸುಧಾರಕರು, ದಂಡನಾಯಕರಾಗಿದ್ದ ಕನಕ ನಾಯಕರು ದಾಸತ್ವದ ಕಡೆಗೆ ತೆರಳಿ ಭಗವಂತನನ್ನು ಆರಾಧಿಸುವ ಮೂಲಕ ಕೀರ್ತನೆಗಳ ಮೂಲಕ ಆಧ್ಯಾತ್ಮಿಕ ಚಿಂತನೆಗಳನ್ನು ಮನುಕುಲಕ್ಕೆ ಬಿತ್ತಿ ಬದುಕಿನ ಸನ್ಮಾರ್ಗ ತೋರಿಸಿದ್ದಾರೆ. ಕನಕದಾಸರು ತೋರಿದ ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹಾದೇವಯ್ಯ ವೀರಶೈವ ಮಹಾಸಭಾದ ಅಧ್ಯಕ್ಷ ಪ್ರಕಾಶ್, ಕಬ್ಬುಬೆಳಗಾರರ ಸಂಘದ ಕಿರಗಸೂರು ಶಂಕರ್, ಮುಖಂಡರಾದ ಸೋಮನಾಥಪುರ ಗಣೇಶ್, ಸ್ವಾಮಿ, ಪ್ರಸಾದ ನಾಯಕ್, ಅಪ್ಪಣ್ಣ, ಮನ್ಸೂರ್ ಅಲಿ, ಕಾವೇರಿಪುರ ಮಲ್ಲು, ತೊಂಟೇಶ್, ಸೋಸಲೆ ರಾಜಶೇಖರ್ ಮೂರ್ತಿ, ಪುಟ್ಟಸ್ವಾಮಿ, ಇತರರಿದ್ದರು.

ರಾಸುಗಳಿಗೆ ಕಾಲುಬಾಯಿ ಜ್ವರದ ಲಸಿಕೆ



ಕುಪ್ಪಲಾಪುರದಲ್ಲಿ ಪಶು ಇಲಾಖೆ ವತಿಯಿಂದ ರಾಸುಗಳಿಗೆ ಕಾಲುಬಾಯಿ ಜ್ವರದ ಲಸಿಕೆ ಹಾಕಲಾಯಿತು. ಹಾಲಿನ ಡೇರಿ ಅಧ್ಯಕ್ಷ ಕೆ.ಡಿ.ಕೃಷ್ಣೇಗೌಡ, ಅಧಿಕಾರಿ ಕಿಶೋರ್, ಪಶು ಇಲಾಖೆಯ ಲೋಕೇಶ್, ಜ್ಯೋತಿ ಇದ್ದರು.

ಕಾರ್ಗಳ್ಳಿ ದೇವಸ್ಥಾನದ ಜಾತ್ರಾ ಮಹೋತ್ಸವ



ಹೆಚ್.ಡಿ. ಕೋಟೆ ನ9– ತಾಲೂಕಿನ ಹಂಪಾಪುರ ಹೋಬಳಿಯ ಕಣಿಯನಹುಂಡಿ ಗ್ರಾಮದಲ್ಲಿ ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದ ಸೇವಾ ಸಮಿತಿ ವತಿಯಿಂದ ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದ 9ನೇ ವರ್ಷದ ಕಾರ್ತೀಕ ಮಾಸದ ಜಾತ್ರಾ ಮಹೋತ್ಸವ ನ.10 ರಂದು ನಡೆಯಲಿದೆ.

ಅಂದು ಮುಂಜಾನೆ 5 ಗಂಟೆಗೆ ಗಣಪತಿ ಹೋಮ, ಬೆಳಗ್ಗೆ 6 ಗಂಟೆಗೆ ಹೆಣ್ಣು ಮಕ್ಕಳಿಂದ ಕುಂಭಕಳಸ ತರುವ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9.30 ರಿಂದ ಪೂಜೆ, 10 ಗಂಟೆಯಿಂದ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ನಂತರ ಪ್ರಶಾಂತ್‌ಗೌಡ ತಂಡದವರಿಂದ ಸಂಗೀತ ರಸಮಂಜರಿ ನಡೆಯಲಿದೆ ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ

ಕನಕದಾಸರ ತತ್ವಗಳು ಜನರಿಗೆ ಸ್ಫೂರ್ತಿ



ಕನಕದಾಸರ ಭಾವಚಿತ್ರಕ್ಕೆ ಗ್ರಾಪಂ ಅಧ್ಯಕ್ಷ ರೇಖಾ ಮಹದೇವ್ ಪುಷ್ಪಾರ್ಚನೆ ನೆರವೇರಿಸಿದರು.

ಭೇರ್ಯ: ಕನಕದಾಸರನ್ನು ನಾವು ಪೂಜ್ಯ ಸಂತ ಮತ್ತು ತತ್ವಜ್ಞಾನಿಯಾಗಿ ನೋಡುತ್ತೇವೆ. ಕನಕದಾಸರ ಜೀವನ ಬೋಧನೆಗಳು, ಕೀರ್ತನೆಗಳು ಇಂದಿಗೂ ಲಕ್ಷಾಂತರ ಜನರಿಗೆ ಮಾರ್ಗದರ್ಶನ ಹಾಗೂ ಸ್ಫೂರ್ತಿಯಾಗಿದೆ ಎಂದು ಭೇರ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಖಾ ಮಹದೇವ್ ಹೇಳಿದರು.

ಭೇರ್ಯ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ ಜಯಂತ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಸಂತ ಕವಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು. ದಾಸಶ್ರೇಷ್ಠರೆಂದೇ ಕರೆಯಲಾಗುವ ಕನಕ ದಾಸರು ಓರ್ವ ಮಹಾನ್ ಹರಿದಾಸ ಸಂತ ಕವಿ, ತತ್ವಜ್ಞಾನಿ ಹಾಗೂ ಕೀರ್ತನಾಗಾರರಾಗಿದ್ದರು. ಅವರು ಕರ್ನಾಟಕದಲ್ಲಿ ಭಕ್ತಿ ಚಳುವಳಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ನುಡಿದರು.

ಬಳಿಕ ಪಿಡಿಓ ಮಮತಾ ಮಾತನಾಡಿ ದಾಸ ಶ್ರೇಷ್ಠ ಕನಕದಾಸರು ಸಾಮಾಜಿಕ ನ್ಯಾಯ ಎತ್ತಿ ಹಿಡಿದ ದಾರ್ಶನಿಕ, ಮಹಾನ್ ಕವಿ ಮತ್ತು ಭಕ್ತಿಯ ಸಾಮ್ರಾಜ್ಯ ಕಟ್ಟಿದವರು ಎಂದರು.

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದಿಂದ ಕನ್ನಡ ಭಾಷೆಗೆ ರಾಷ್ಟ್ರೀಯ ಸ್ಥಾನಮಾನ ದೊರೆತಿದೆಯೇ ಹೊರತು ಹೋರಾಟದಿಂದ ಅಲ್ಲ. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಕನಕದಾಸರು, ಬಸವಣ್ಣನವರು ಕನ್ನಡದಲ್ಲೆ ಬರೆದರೆ ಹೊರತು ಸಂಸ್ಕೃತದಲ್ಲಿ ಸಾಹಿತ್ಯ ರಚಿಸಲಿಲ್ಲ. ಈ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದರು. ವರ್ಗರಹಿತ ಸಮಾಜವನ್ನು ಕಟ್ಟಲು ಶ್ರಮಿಸಿದವರು ಕನಕದಾಸರು ಎಂದು ಸಂಕ್ಷಿಪ್ತವಾಗಿ ಹೇಳಿದರು.

ಗ್ರಾ.ಪಂ. ಸದಸ್ಯ ಬಿ.ಕೆ.ಮಂಜಪ್ಪ, ಲೆಕ್ಕ ಸಹಾಯಕಿ ಬಿ.ಎಸ್.ಅಶ್ವಿನಿ ಸುನಯ್‌ಗೌಡ, ಬಿಲ್ ಕಲೆಕ್ಟರ್ ಕುಮಾರ್, ಡಿಇಓ ಜಯಂತ್, ಸಿಬ್ಬಂದಿಗಳಾದ ಮಹದೇವ, ಚೆನ್ನರಾಜು, ಹರೀಶ್, ನಾಗರಾಜು, ಸ್ವಾಮೀಗೌಡ ಮೊದಲಾದವರು ಇದ್ದರು.

ನ.12ಕ್ಕೆ ಕಗ್ಗುಂಡಿ ತಂಬಾಕು ಮಾರುಕಟ್ಟೆಯಲ್ಲಿ ರೈತ ಸಭೆ

ಹುಣಸೂರು.ನ.9–ಸೋಮವಾರ ಪಿರಿಯಾಪಟ್ಟಣ ತಾಲ್ಲೂಕಿನ ಕಗ್ಗುಂಡಿ ತಂಬಾಕು ಮಾರುಕಟ್ಟೆಯಲ್ಲಿ ಕರೆಯಲಾಗಿದ್ದ ತಂಬಾಕು ಬೆಳೆಗಾರರ ಸಮಾಲೋಚನಾ ಸಭೆಯನ್ನು ನ.12ಕ್ಕೆ ಮುಂದೂಡಲಾಗಿದೆ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರ್ ಕುಮಾರ್ ತಿಳಿಸಿದ್ದಾರೆ.

ಮಂಡಳಿಯ ಹರಾಜು ನಿರ್ದೇಶಕರಿಗೆ ಹಾಗೂ ಪ್ರಾದೇಶಿಕ ವ್ಯವಸ್ಥಾಪಕರುಗಳಿಗೆ ಅಧಿಕೃತವಾಗಿ ಬೆಂಗಳೂರಿನಲ್ಲಿ ಮಂಡಳಿಯ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲಿರುವುದರಿಂದ ಕರೆಯಲಾಗಿದ್ದ ಸಭೆಗೆ ಆಗಮಿಸಲು ಸಾಧ್ಯವಾಗದ ಕಾರಣ ನ.12 ರಂದು ಸಭೆ ನಡೆಸಲು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಎಚ್.ಡಿ.ಕೋಟೆ ಮೊತ್ತ ಬಸವರಾಜಪ್ಪ, ಪಿರಿಯಾಪಟ್ಟಣದ ಚೆಲುವಯ್ಯ ಮೋದೂರು ಶಿವಣ್ಣ, ಉಂಡವಾಡಿ ಚಂದ್ರೇಗೌಡ, ಅರಕಲಗೂಡು ಯೋಗಣ್ಣ, ಈರೇಗೌಡ, ಪಿರಿಯಾಪಟ್ಟಣ ಪ್ರಕಾಶ್ ಅರಸು ದಶರಥ, ನಿಲುವಾಗಿಲು ಪ್ರಭಾಕರ್ ಕಟ್ಟೆಮಳಲವಾಡಿ ಅಶೋಕ, ಮಹಾದೇವ, ಅಗ್ರಹಾರ ರಾಮೇಗೌಡ, ಹಾಗೂ ಇನ್ನಿತರ ತಂಬಾಕು ಬೆಳೆಗಾರರು ಹಾಜರಿದ್ದರು.

ಬನ್ನೂರಿನ ಸಂತೆಮಾಳದಲ್ಲಿ ಇಂದು ಅನ್ನಸಂತರ್ಪಣೆ

ಬನ್ನೂರು, ನ.9– ಪಟ್ಟಣದ ಸಂತೆಮಾಳದಲ್ಲಿ ಶ್ರೀ ನಂದಿ ಬಸವೇಶ್ವರಸ್ವಾಮಿ ಮಹಾದ್ವಾರದ 5ನೇ ವರ್ಷದ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಸೋಮವಾರ (ನ.10) ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಸಂತೇಮಾಳದಲ್ಲಿ 2ನೇ ಧರ್ಮಸ್ಥಳ ಎಂದೇ ಖ್ಯಾತವಾಗಿರುವ ಬೀಡನಹಳ್ಳಿ ಬಸವನ ದೇವಾಲಯದ ಮಾರ್ಗಕ್ಕೆ ಸಂತೆಮಾಳದಲ್ಲಿ ನಿರ್ಮಾಣವಾಗಿರುವ ಮಹಾದ್ವಾರಕ್ಕೆ 5 ವರ್ಷ ಪೂರೈಸಿದ ಹಿನ್ನಲೆಯಲ್ಲಿ ನಡೆಯುವ ಪೂಜಾ ಕಾರ್ಯಕ್ರಮಗಳಿಗೆ, 9 ದೇವಾಲಯಗಳಾದ, ಬೀಡನಹಳ್ಳಿಯ ಶ್ರೀ ನಂದಿಬಸವೇಶ್ವರ, ಚಿಕ್ಕರಸಿನಕೆರೆಯ ಶ್ರೀಕಾಲಬೈರವೇಶ್ವರ, ಹಂಗರಹಳ್ಳಿಯ ಶ್ರೀ ವಿದ್ಯಾಡೇಶ್ವರಿ, ಗೌಡಗೆರೆಯ ಶ್ರೀ ಚಾಮುಂಡೇಶ್ವರಿ, ಯೆಡಹಳ್ಳಿಯ ಶ್ರೀ ಸಿದ್ದೇಶ್ವರ ಸ್ವಾಮಿ, ಕೊತ್ತತ್ತಿಯ ಶ್ರೀ ಭೂಮಿ ಸಿದ್ದೇಶ್ವರಸ್ವಾಮಿ, ಮಲಿಯೂರು ಶ್ರೀ ಬೀರೇಶ್ವರಸ್ವಾಮಿ, ಬೆಟ್ಟಳ್ಳಿಯ ಶ್ರೀ ಒಡ್ಡಗಲ್ಲು ರಂಗನಾಥಸ್ವಾಮಿ, ನೂರಗಹಳ್ಳಿಯ ವರದರಾಜಸ್ವಾಮಿಗಳಿಂದ ಬಸವಗಳು ಆಗಮಿಸುತ್ತಿದ್ದು, ಹೋಮ ಹವನದ ನಂತರ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ.

ರಾತ್ರಿ 8.30ಕ್ಕೆ ರತ್ನ ಮಾಂಗಲ್ಯ ಸಾಮಾಜಿಕ ನಾಟಕವನ್ನು ಏರ್ಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಸ್ತೆಯನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿದೆ.

ಕೆ.ಆರ್.ನಗರದಲ್ಲಿ ಕನಕದಾಸರ ಜಯಂತಿ



ಕೆ.ಆರ್.ನಗರ: ದಾಸ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ತತ್ವಜ್ಞಾನಿ ಶ್ರೀ ಕನಕದಾಸರ ಜಯಂತಿ ಸಮಾಜದ ಒಳಿತಿಗಾಗಿ ಸಾಮಾಜಿಕ ಕ್ರಾಂತಿಯನ್ನು ಮಾಡಿದ ಕನಕದಾಸರ ಜಯಂತಿಯನ್ನು ಇಂದು ರಾಜ್ಯದೆಲ್ಲೆಡೆ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ರಾಷ್ಟ್ರೀಯ ಅಹಿಂದ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಗರುಡಗಂಭ ಮಂಜುನಾಥ್ ಹೇಳಿದರು.

ಪಟ್ಟಣದ ಹೊರವಲಯದ ಕಾಳೇನಹಳ್ಳಿ ಸರ್ಕಲ್‌ನಲ್ಲಿ ಕರ್ನಾಟಕ ಕೃಷಿಕರ ಸಂಘದಿಂದ ಹಮ್ಮಿಕೊಂಡಿದ್ದ ದಾಸ ಸಾಹಿತ್ಯ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಸಂತಕವಿ ಭಕ್ತ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು. ಜಾತಿ, ಮತ ಮತ್ತು ಸಮಾಜದ ಪಿಡುಗುಗಳ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳುತ್ತ, ಸಮಾಜ ಹಾಗೂ ದಾಸ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿದವರು ಕನಕದಾಸರು ಎಂದು ನುಡಿದರು.

ಆ ಕಾಲದ ಹರಿದಾಸರ ಪೈಕಿ ದಾಸ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ದಾಸಶ್ರೇಷ್ಠ ಕನಕದಾಸರು ಜನಿಸಿದ್ದು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ. ಬೀರಪ್ಪ ಮತ್ತು ಬಚ್ಚಮ್ಮ ದಂಪತಿಯ ಮಗನಾಗಿ ಜನಿಸಿದ್ದ ಕನಕದಾಸರ ಮೂಲ ಹೆಸರು ತಿಮ್ಮಪ್ಪ ನಾಯಕ. ಈ ತಿಮ್ಮಪ್ಪ ನಾಯಕ ಕನಕನಾಗಿದ್ದು ನಂತರ, ಶ್ರೀಕೃಷ್ಣನ ಭಕ್ತನಾಗಿ ಕನಕದಾಸರಾಗಿದ್ದು ಈಗ ಇತಿಹಾಸ ಎಂದು ತಿಳಿಸಿದರು.

ರಾಷ್ಟ್ರೀಯ ಅಹಿಂದ ಸಂಘಟನೆ ತಾಲೂಕು ರೈತ ಘಟಕದ ಅಧ್ಯಕ್ಷ ದೇವೇಂದ್ರ, ಕರ್ನಾಟಕ ಕೃಷಿಕರ ಸಂಘದ ಜಿಲ್ಲಾ ಸಂಚಾಲಕ ಕೃಷ್ಣೇಗೌಡ, ತಾ.ಉಪಾಧ್ಯಕ್ಷ ಸಿದ್ದೇಗೌಡ, ತಾ.ಚಾಲಕ ಗಣೇಶ್, ಪ್ರಧಾನ ಕಾರ್ಯದರ್ಶಿ ರಾಜಶೆಟ್ಟಿ, ತಾ.ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಮ್ಮ, ಪ್ರಗತಿಪರ ರೈತ ಮುಖಂಡ ಕೆಂಪನಕೊಪ್ಪಲು ಜಗದೀಶ್, ರಾಜ್ಯ ರೈತ ಪರ ಸಂಘದ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ತಾಲೂಕು ಕಲಾವಿದರ ಸಂಘದ ಘಟಕದ ಅಧ್ಯಕ್ಷ ಕೆಂಪೇಗೌಡ, ರೈತ ಮುಖಂಡರಾದ ರಾಮೇಗೌಡ, ವೀಣಾ, ವಿನೋದ, ಪುಟ್ಟಸ್ವಾಮೀಗೌಡ, ರೇವಣ್ಣ, ಸೇರಿದಂತೆ ಮೊದಲಾದವರು ಇದ್ದರು.

ಮನಸ್ಸಿನ ಅಂಧಕಾರವನ್ನು ತೊಲಗಿಸುವ ಬೆಳಕೇ ಕಾರ್ತೀಕ

ಕನಕಪುರ ದೇಗುಲ ಮಠದ ಕಿರಿಯ ಸ್ವಾಮೀಜಿ ಅಭಿಪ್ರಾಯ



ಧಾರ್ಮಿಕ ಸಭೆಯನ್ನು ಕನಕಪುರ ದೇಗುಲ ಮಠದ ಕಿರಿಯ ಸ್ವಾಮೀಜಿ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ನ.9– ಜ್ಞಾನದ ಸಂಕೇತವಾದ ದೀಪವನ್ನು ಬೆಳಗಿಸಿ ಮನಸ್ಸಿನ ಅಂಧಕಾರವನ್ನು ತೊಲಗಿಸುವ ಉದ್ದೇಶದಿಂದ ಆಚರಿಸಲ್ಪಡುತ್ತಿರುವುದೇ ಕಾರ್ತೀಕ ಎಂದು ಕನಕಪುರ ದೇಗುಲ ಮಠದ ಕಿರಿಯ ಸ್ವಾಮೀಜಿ ಚನ್ನಬಸವ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮೇದಿನಿ ಮಠದಲ್ಲಿ ಕಾರ್ತೀಕೋತ್ಸವ ಹಾಗೂ ಲಿಂಗೈಕ್ಯ ಶಿವಲಿಂಗ ಸ್ವಾಮೀಜಿಯವರ 5ನೇ ವರ್ಷದ ಪುಣ್ಯ ಸ್ಮರಣೆ ಪ್ರಯುಕ್ತ ಆಯೋಜಿಸಿದ್ದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಶಿವಲಿಂಗಸ್ವಾಮೀಜಿ ನೆಪಮಾತ್ರಕ್ಕೆ ಮೇದಿನಿಯಲ್ಲಿ ಮಠದಲ್ಲಿ ಇರುತ್ತಿದ್ದರೆ ಹೊರತು ಅವರ ಮನಸ್ಸೆಲ್ಲಾ ಸಂಪೂರ್ಣವಾಗಿ ಸಿದ್ದಗಂಗಾ ಮಠದಲ್ಲಿಯೇ ಇರುತ್ತಿತ್ತು ಸಿದ್ದ ಗಂಗಾ ಮಠಕ್ಕೆ ಹೋದ ಈ ಭಾಗದ ಜನ ಶಿವಕುಮಾರ ಸ್ವಾಮೀಜಿಗಳಿಗಿಂತ ಹೆಚ್ಚಾಗಿ ಮೇದಿನಿ ಶ್ರೀಗಳನ್ನೇ ಕೇಳುತ್ತಿದ್ದರು ಅಂತಹ ವ್ಯಕ್ತಿತ್ವ ಅವರದು. ಭಕ್ತರ ಕೈಗೆಟುಕುವ ಸಂತರವರು ಎಂದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ ಈ ವರ್ಷದ ಕಾರ್ತೀಕೋತ್ಸವ ಮೇದಿನಿ ಮಠದ ಆವರಣದಲ್ಲಿ ಜರುಗುತ್ತಿದೆ ಮುಂದಿನ ವರ್ಷ ಶೀ ಮಠದ ಭಕ್ತರ ಸಹಾಯ – ಸಹಕಾರಗಳಿಂದ ಲಿಂಗೈಕ್ಯರು ಶಿವಲಿಂಗಸ್ವಾಮೀಜಿಯವರ ಗದ್ದಿಗೆಯಲ್ಲೇ ಆಚರಿಸೋಣ ಎಂದರು

ತನಗೋಸ್ಕರ ಬದುಕುವವನು ಸಾಮಾನ್ಯ ಮನುಷ್ಯ ಸಮಾಜದ ಉದ್ಧಾರಕ್ಕಾಗಿ ಬದುಕುವವನು ಮಹಾಪುರುಷ ಎಂದು ಶಿವಲಿಂಗಸ್ವಾಮೀಜಿಯವರನ್ನು ಬಣ್ಣಿಸಿದರು

ಇದೇ ಸಂದರ್ಭದಲ್ಲಿ ರಾಜ್‌ಕುಮಾರ್ ಪ್ರಶಸ್ತಿ ಪುರಸ್ಕೃತ ನಾಗಣ್ಣ, ಮುಡಿಗುಂಡ ಮಠದ ಶ್ರೀಕಂಠಸ್ವಾಮೀಜಿ,ಇಮ್ಮಡಿ ಶಿವಲಿಂಗಸ್ವಾಮೀಜಿ ಹಾಗೂ ಚಾಮರಾಜನಗರ ವೀರಶೈವ ನೌಕರರ ಸಂಘದ ಅಧ್ಯಕ್ಷ ಸಿದ್ಧಮಲ್ಲಪ್ಪ ಮಾತನಾಡಿದರು.

ಕಾಯಕ್ರಮದಲ್ಲಿ ತಿ.ನರಸೀಪುರ ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಂ.ಪ್ರಕಾಶ್, ಮಳವಳ್ಳಿ ತಾಲ್ಲೂಕಿನ ಅಧ್ಯಕ್ಷ ಕುಂದೂರುಮೂರ್ತಿ, ನಂದಿನಿ, ಸುದೀಪ್, ನಿವೃತ್ತ ಮುಖ್ಯ ಶಿಕ್ಷಕ ಪುಟ್ಟಬುದ್ಧಿ, ಮೂರ್ತಿ, ಕು.ಶಿ.ಭೃಂಗೀಶ್, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸೋಮಶೇಖರ್, ಪ್ರಕಾಶ, ಶಿವಕುಮಾರ್, ಗುರುಸ್ವಾಮಿ, ಮಲ್ಲು, ಬ್ಯಾಂಕ್ ಕುಮಾರ್, ಕೆಬ್ಬೆ ಹುಂಡಿ ಶಿವಕುಮಾರ, ಶಿಕ್ಷಕರಾದ ಶೇಖರ್, ಸದಾಶಿವ, ಜಗದೀಶ್, ಉಪನ್ಯಾಶಕ ಮೂಗೂರು ಕುಮಾರಸ್ವಾಮಿ, ಮಹದೇವಪ್ಪ, ಮಹದೇವಸ್ವಾಮಿ, ವಾಸುವಳ್ಳಿ ಉಮೇಶ್ ಹಾಗೂ ಹರ ಗುರುಚರ ಮೂರ್ತಿಗಳು, ಹಾಜರಿದ್ದರು.

ಮಾಜಿ ಶಾಸಕ ಹರ್ಷವರ್ಧನ್‌ರಿಂದ ಕೋಮು ಸಂಘರ್ಷದ ಹೇಳಿಕೆ : ದಸಂಸ ಖಂಡನೆ

ನಂಜನಗೂಡು, ನ.9– ಶಾಸಕ ಬಿ.ಹರ್ಷವರ್ಧನ್ ಅವರು ತಮ್ಮ ಪಕ್ಷದ ವರಿಷ್ಠರನ್ನು ಓಲೈಸುವ ಭರದಲ್ಲಿ ಅಂದಕಾಸುರ ವಧೆಯ ವೇಳೆ ದೇವರ ಮೇಲೆ ಎಂಜಲು ನೀರು ಎರಚಿದ ದುಷ್ಕರ್ಮಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸುವ ಮೂಲಕ ಕೋಮು ಸಂಘರ್ಷಕ್ಕೆ ಕಾರಣವಾಗುವಂತೆ ಹೇಳಿಕೆ ನೀಡಿರುವುದನ್ನು ದಸಂಸ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ ಎಂದು ದಸಂಸ ಸಂಚಾಲಕ ಮಲ್ಲಹಳ್ಳಿ ನಾರಾಯಣ ಹೇಳಿದರು.

ಅವರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ನಂಜನಗೂಡಿಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ವಿಧಾನ ಪರಿಷತ್ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಭೇಟಿ ನೀಡಿದ್ದ ವೇಳೆ ಮಾಜಿ ಶಾಸಕ ಬಿ. ಹರ್ಷವರ್ಧನ್ ಅವರು ತಮ್ಮ ಪಕ್ಷದ ವರಿಷ್ಠರನ್ನು ಓಲೈಸುವ ಸಲುವಾಗಿ ಕ್ಷೇತ್ರದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ, ಜೊತೆಗೆ ಶ್ರೀ ಕಂಠೇಶ್ವರಸ್ವಾಮಿ ಅವರ ಮೇಲೆ ಎಂಜಲು ನೀರು ಎರಚಿದ ದುಷ್ಕರ್ಮಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸುವ ಮೂಲಕ ದಲಿತ ಚಳುವಳಿ ಹೋರಾಟಗಾರರನ್ನು ದುಷ್ಕರ್ಮಿಗಳೆಂದು ಹೇಳಿರುವುದು ಖಂಡನೀಯ ಎಂದರು.

ಈ ರೀತಿ ಹೇಳಿಕೆ ನೀಡುವುದು ಅವರಿಗೆ ಶೋಭೆ ತರುವುದಿಲ್ಲ, ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಆರೋಪಿಸುವ ಮಾಜಿ ಶಾಸಕರು ಅವರ ಅವಧಿಯಲ್ಲಿ ದಲಿತ ಹೆಣ್ಣು ಮಗಳ ಕೊಲೆಯಾಗುತ್ತದೆ, ಜೊತೆಗೆ ಎಷ್ಟೋ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತವೆ. ಆದರೂ ಸಹ ನಾವು ಸೌಹಾರ್ದತೆಯ ಹಿತ ದೃಷ್ಟಿಯಿಂದಾಗಿ ಅವರಿಗೆ ಸಹಕಾರ ನೀಡಿದ್ದೇವೆ ಎಂದರು.

ದಸಂಸ ಸಂಚಾಲಕ ಸುರೇಶ್ ಮಾತನಾಡಿ ಮಾಜಿ ಶಾಸಕ ಹರ್ಷವರ್ಧನ್ ರವರಿಗೆ ಸ್ವಂತ ವರ್ಚಸ್ಸು ಇಲ್ಲದೆ ಅವರ ಮಾವ ಶ್ರೀನಿವಾಸ್ ಪ್ರಸಾದ್ ರವರ ನೆರಳಲ್ಲಿ ಗೆದ್ದರು ಎಂಬುದನ್ನು ನೆನಪಿಡಬೇಕು, ಜೊತೆಗೆ ಕ್ಷೇತ್ರದ ಇತಿಹಾಸ ತಿಳಿದು ಮಾತನಾಡಬೇಕು, ಅದನ್ನು ಬಿಟ್ಟು ಅವರ ಪಕ್ಷದವರನ್ನು ಓಲೈಕೆ ಮಾಡಲು ಶಾಂತಿ ಕದಡಲು ಯತ್ನಿಸುವುದು ಸರಿಯಲ್ಲ ಎಂದರು.

ಇಂದು ಆರ್‌ಎಸ್‌ಎಸ್ ವಿರುದ್ಧ ಪ್ರತಿಭಟನೆ

ಪಿರಿಯಾಪಟ್ಟಣ: ಕರ್ನಾಟಕ ದಲಿತ ಸಂಘರ್ಷ ಜಿಲ್ಲಾ ಸಮಿತಿಯ ಆದೇಶದ ಮೇರೆಗೆ ಆರ್‌ಎಸ್‌ಎಸ್‌ನ ವಿರುದ್ಧ ಸೋಮವಾರ (ನ.10) ಸುಮಾರು 11 ಗಂಟೆಗೆ ಪಿರಿಯಾಪಟ್ಟಣ ತಾಲೂಕು ಕಚೇರಿ ಎದುರುಗಡೆ ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆ.

ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ದಲಿತ ಸಂಘರ್ಷ ಸಮಿತಿಯ ಬಂಧುಗಳು ನಿಮ್ಮೊಂದಿಗೆ ಹಲವು ಕಾರ್ಯಕರ್ತರುಗಳನ್ನು ಕರೆತರುವ ಮೂಲಕ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಭಾರತ ಸಂಘಟನೆಯ ತಾಲೂಕು ಸಂಚಾಲಕರಾದಂತ ಐಲಾಪುರ ರಾಮು ರವರು ಮನವಿ ಮಾಡಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭೇಟಿ; ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ




ಮೈಸೂರು ವಿಮಾನ ನಿಲ್ದಾಣಕ್ಕೆ ಭಾನುವಾರ ಆಗಮಿಸಿದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. (ಎಡಚಿತ್ರ), ಮತ್ತೊಂದು ಚಿತ್ರದಲ್ಲಿ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನಾಡ ದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಮೈಸೂರು ಪೇಟ ತೊಡಿಸಿ ಸನ್ಮಾನಿಸಿ, ಚಾಮುಂಡೇಶ್ವರಿಯ ವಿಗ್ರಹವನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

ಮೈಸೂರು, ನ9(ಬಿಎಲ್‌ಯು)– ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಭಾನುವಾರ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರೊಂದಿಗೆ ದೇವಸ್ಥಾನಕ್ಕೆ ಆಗಮಿಸಿದ ರಾಧಾಕೃಷ್ಣನ್ ಅವರು ದೇವಸ್ಥಾನದಲ್ಲಿ ಸುಮಾರು ಅರ್ಧ ಗಂಟೆ ಕಾಲ ಇದ್ದು ವಿವಿಧ ಪೂಜಾ ಕೈಂಕರ್ಯದಲ್ಲಿ ಭಾಗಿಯಾಗಿದ್ದರು.

ಈ ವೇಳೆ ರಾಧಾಕೃಷ್ಣನ್ ಅವರ ಹೆಸರಿನಲ್ಲಿ ಸಂಕಲ್ಪ ಮಾಡಿ, ಕುಂಕುಮಾರ್ಚನೆ ಮಾಡಲಾಯಿತು. ತರುವಾಯ ಅವರಿಗಾಗಿ ತಯಾರಿಸಿದ್ದ ವಿಶೇಷ ಪ್ರಸಾದವನ್ನು ದೇವಸ್ಥಾನದ ಪ್ರಧಾನ ಆಗಮಿಕ ಡಾ.ಶಶಿಶೇಖರ ದೀಕ್ಷಿತ್ ಅವರು ನೀಡಿದರು.

ನಂತರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಅವರು ರಾಧಾಕೃಷ್ಣನ್ ಹಾಗೂ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಮೈಸೂರು ಪೇಟ ತೊಡಿಸಿ, ಸನ್ಮಾನಿಸಿದರು. ಅಲ್ಲದೆ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ನೆನಪಿನ ಕಾಣಿಕೆಯಾಗಿ ನೀಡಿದರು.

ಇದಕ್ಕೂ ಮೊದಲು ಭಾರತೀಯ ಸೇನೆಯ ವಿಶೇಷ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ರಾಧಾಕೃಷ್ಣನ್ ಹಾಗೂ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ ಕೂಡ ಪುಷ್ಪಗುಚ್ಛ ನೀಡಿ ಸ್ವಾಗತ ಕೋರಿದರು.

ನಂತರ ಬನ್ನಿಮಂಟಪದ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು. ತರುವಾಯ ಮೈಸೂರಿನ ಚಾಮುಂಡಿಬೆಟ್ಟದ ಪಾದದಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಅಲ್ಲಿ ಹಾಜರಿದ್ದ ವಿವಿಧ ಮಠಗಳ ಸ್ವಾಮೀಜಿಗಳ ಜೊತೆ ಗ್ರೂಪ್ ಫೋಟೋ ತೆಗೆಸಿಕೊಂಡರು.

ಮೈಸೂರಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ರಾಧಾಕೃಷ್ಣನ್ ಅವರು ಭಾರತೀಯ ಸೇನೆಯ ವಿಶೇಷ ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿಗೆ ತೆರಳಿದರು.



ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಆಗಮಿಸಿದ ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮಿ ಸೇರಿದಂತೆ ವಿವಿಧ ಮಠಗಳ ಮಠಾಧೀಶರೊಂದಿಗೆ ಫೋಟೋ ತೆಗೆಸಿಕೊಂಡರು.

ಇಂದು ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ



ಮೈಸೂರು, ನ.9(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ನ.10) ಮೈಸೂರಿನಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆ (ಕೆಡಿಪಿ) ನಡೆಸಲಿದ್ದಾರೆ.

ನಾಳೆ ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ ಅವರು 10.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳುವ ಸಿದ್ದರಾಮಯ್ಯ ಅವರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಪಾಲ್ಗೊಳ್ಳುವರು.

ನಾಳೆ ಮೈಸೂರಿನಲ್ಲೇ ವಾಸ್ತವ್ಯ ಹೂಡುವ ಸಿದ್ದರಾಮಯ್ಯ ಅವರು ನಾಡಿದ್ದು (ನ.11) ಮಧ್ಯಾಹ್ನ ಮೈಸೂರು ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳುವರು.

ನಾಳೆ, 'ಸಾವಿನ ಸುತ್ತಮುತ್ತ' ಕಾರ್ಯಕ್ರಮ

ಮೈಸೂರು, ನ.9–ಮೈಸೂರಿನ ಸುಯೋಗ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸುಯೋಗ್ ಕ್ಲಿನಿಕಲ್ ಸೊಸೈಟಿ ಸಹಯೋಗದಲ್ಲಿ ನ.11ರಂದು ಸಂಜೆ 4ಕ್ಕೆ ಸುಯೋಗ್ ಆಸ್ಪತ್ರೆ ಸೆಮಿನಾರ್ ಹಾಲ್‌ನಲ್ಲಿ 'ಸಾವಿನ ಸುತ್ತಮುತ್ತ' ಒಂದು ವೈಜ್ಞಾನಿಕ, ತಾತ್ವಿಕ ಮತ್ತು ಆಧ್ಯಾತ್ಮಿಕತೆಗಳ ಸಮಗ್ರ ನೋಟ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇಧಾನಂದಜಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಆಸ್ಪತ್ರೆ ಅಧ್ಯಕ್ಷರೂ ಆದ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಹಿರಿಯ ಸಾಹಿತಿ ಪ್ರೊ.ಜಿ.ಚಂದ್ರಶೇಖರ್, ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

ಮೈಸೂರಲ್ಲಿ ಮತ್ತೆ ಪುಂಡರ ವ್ಹೀಲಿಂಗ್ ಹಾವಳಿ

ಮೈಸೂರು, ನ.9(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವ್ಹೀಲಿಂಗ್ ಪುಂಡರ ಅಟ್ಟಹಾಸ ಮುಂದುವರಿದೆ. ನಗರದ ವಿವಿಧ ರಸ್ತೆಗಳಲ್ಲಿ ಪುಂಡರು ಬೈಕ್ ವ್ಹೀಲಿಂಗ್ ಮಾಡುವ ಮೂಲಕ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತಿದ್ದಾರೆ. ವ್ಹೀಲರ್‌ಗಳ ಹಾವಳಿಯಿಂದ ಸವಾರರು ಹೈರಾಣರಾಗುತ್ತಿದ್ದಾರೆ.

ಈ ಮೊದಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸರ್ವಿಸ್ ರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಿದ್ದವರನ್ನು ಪೊಲೀಸರು ವಶಕ್ಕೆ ಪಡೆದು ಬುದ್ಧಿವಾದ ಹೇಳಿದ್ದರು. ಇದಾದ ಬಳಿಕ ನಗರದಲ್ಲಿ ಅಲ್ಪಮಟ್ಟಿಗೆ ವ್ಹೀಲಿಂಗ್ ಹಾವಳಿ ಕಡಿಮೆಯಾಗಿತ್ತು.

ಮೈಸೂರಿನ ಗಲ್ಲಿಗಳು, ಪ್ರಮುಖ ರಸ್ತೆಗಳಲ್ಲಿ ಹಾಗೂ ಹೊರ ವರ್ತುಲ ರಸ್ತೆಗಳಲ್ಲಿ ಅಪಾಯಕಾರಿ ಡೆಡ್ಲಿ ವ್ಹೀಲಿಂಗ್ ಮಾಡುವ ಮೂಲಕ ಸಾರ್ವಜನಿಕರಿಗೆ ಭಯ ಹುಟ್ಟಿಸುತ್ತಿದ್ದ ಪುಂಡರ ಗುಂಪು ಮತ್ತೆ ಭಯಾನಕ ಸ್ಟಂಟ್ ಮಾಡಲು ಮುಂದಾಗಿರುವುದು ಪೊಲೀಸರ ಕರ್ತವ್ಯ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ವ್ಯಾಪಕ ಆಕ್ರೋಶ: ಬೈಕ್‌ಗಳಲ್ಲಿ ಒಮ್ಮೆಲೆ ರಸ್ತೆಗೆ ಬಂದು ವೀಲಿಂಗ್ ಮಾಡುತ್ತಿದ್ದರೂ ಪೊಲೀಸರು ಏನು ಮಾಡುತ್ತಿದ್ದರು ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವ್ಹೀಲಿಂಗ್‌ನಿಂದಾಗಿ ಕೇವಲ ವ್ಹೀಲಿಂಗ್ ಮಾಡುವವರು ಮಾತ್ರವಲ್ಲ, ಆ ರಸ್ತೆಯುಲ್ಲಿ ಸಂಚರಿಸುವವರಿಗೂ ಅಪಾಯವಾಗುತ್ತದೆ. ಹೆಲ್ಮೆಟ್ ಇಲ್ಲದೇ ಈ ರೀತಿ ವರ್ತಿಸಿದರೆ ಅವರ ಜೀವಕ್ಕೂ ಅಪಾಯ. ಹೀಗಿದ್ದೂ ಏಕೆ ಈ ರೀತಿ ವರ್ತಿಸುತ್ತಿದ್ದಾರೆ ಎಂದು ಕೆಲವರು ಟೀಕಿಸಿದ್ದಾರೆ.

ಮತ್ತೊಂದೆಡೆ ಅಪ್ರಾಪ್ತ ಬಾಲಕರು ದ್ವಿಚಕ್ರ ವಾಹನಗಳನ್ನು ಅಡ್ಡಾದಿಡ್ಡಿ ಓಡಾಡಿಸುತ್ತಾ, ಜೋರಾಗಿ ಹಾರ್ನ್ ಮಾಡುತ್ತಾ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಪೊಲೀಸರು ಹಾಗೂ ಕಾನೂನಿನ ಮೇಲೆ ಕಿಂಚಿತ್ತಾದರೂ ಭಯವಿದ್ದಿದ್ದರೆ ಅವರು ಈ ದುರ್ವತನೆ ತೋರುತ್ತಿರಲಿಲ್ಲ ಎಂದು ಅಸಮಧಾನ ಹೊರಹಾಕಿದ್ದಾರೆ.



ಹೆಲ್ಮೆಟ್ ಇಲ್ಲದೆ ಅಪ್ರಾಪ್ತರು ಬೈಕ್ ಸವಾರಿ ಮಾಡುತ್ತಿರುವುದು

ಹುಲಿ ಸೆರೆಗೆ ಮಧ್ಯರಾತ್ರಿ ನಡೆದ ರೋಚಕ ಕಾರ್ಯಾಚರಣೆ

20 ದಿನದಿಂದ ಗ್ರಾಮಸ್ಥರು, ಅರಣ್ಯ ಸಿಬ್ಬಂದಿ ಕಾಡುತ್ತಿದ್ದ ವ್ಯಾಘ್ರ

ಮೈಸೂರು,ನ9(ಎಂಟಿವೈ)– ಭೇಟೆಗಾರರು ಅಳವಡಿಸಿದ್ದ ಉರುಳಿಗೆ ಸಿಲುಕಿ ಗಾಯಗೊಂಡು ಜನರ ಮೇಲೆರಗುತ್ತಿದ್ದ ಹುಲಿಯನ್ನು ಅರಣ್ಯ ಸಿಬ್ಬಂದಿಗಳ ತಂಡ ಅಪಾಯವನ್ನು ಲೆಕ್ಕಿಸದೆ ಕ್ಲಿಷ್ಟ ಕಾರ್ಯಾಚರಣೆ ಮೂಲಕ ಮಧ್ಯರಾತ್ರಿ ಸೆರೆ ಹಿಡಿದು ಮುಂದೆ ಆಗುವ ಅಪಾಯವನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಸರಗೂರು ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ, ನುಗು, ಮೊಳೆಯೂರು ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಾದ ಬಡಗಲಪುರ, ಮುಳ್ಳೂರು, ಬೆಣ್ಣೆಗೆರೆ, ಕುರ್ಣೆಗಾಲ, ಹಳೆ ಹೆಗ್ಗುಡಿಲು ಗ್ರಾಮದಲ್ಲಿ ಕಳೆದ 20 ದಿನದಲ್ಲೇ ನಾಲ್ಕು ಹುಲಿ ದಾಳಿ ಪ್ರಕರಣ ನಡೆದಿದ್ದು, ಅದರಲ್ಲಿ ಮೂವರು ಬಲಿಯಾಗಿ ಓರ್ವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜನ–ಜಾನುವಾರಗಳ ಮೇಲೆರಗುತ್ತಿದ್ದ ಹುಲಿಗಳ ಸೆರೆಗೆ ವ್ಯಾಪಕ ಒತ್ತಡ ಉಂಟಾಗಿದ್ದು, ಈಗಾಗಲೇ ಮೊದಲ ಪ್ರಕರಣದಲ್ಲಿ ದಾಳಿ ನಡೆಸಿದ 8 ವರ್ಷ ಹೆಣ್ಣು ಹುಲಿ ಹಾಗೂ ಅದರ ಒಂದೂವರೆ ವರ್ಷ ಎರಡು ಹೆಣ್ಣು ಹುಲಿ ಮರಿಗಳನ್ನು ಸೆರೆ ಹಿಡಿಯಲಾಗಿದೆ.

ರೋಚಕ ಕಾರ್ಯಾಚರಣೆ: ಕಳೆದ ರಾತ್ರಿ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ರೋಚಕ ಕಾರ್ಯಾಚರಣೆ ನಡೆಸಿದೆ. ಹುಲಿ ಸೆರೆ ಕಾರ್ಯಾಚರಣೆಗೆ ಎಸ್‌ಒಪಿ ಅನುಸರಿಸಬೇಕಾಗಿದ್ದು, ಆದರೆ, ಕಳೆದ ರಾತ್ರಿ ಎಸ್‌ಒಪಿಗೆ ಬದಿಗೊತ್ತಿ ಕಾರ್ಯಾಚರಣೆ ಮಾಡಿ ಹುಲಿ ಸೆರೆ ಹಿಡಿದಿದ್ದಾರೆ. ಒಂದು ವೇಳೆ ಎಸ್‌ಒಪಿ ಅನುಸರಿಸಲು ಮುಂದಾಗಿದ್ದರೆ ಆ ಹುಲಿ ಬೆಳಗ್ಗೆ ಗ್ರಾಮದ ಬಳಿ ಬಂದು ಅಮಾಯಕರ ಮೇಲೆ ಮುಗಿ ಬೀಳುವ ಸಾಧ್ಯತೆ ಇತ್ತು. ಅದನ್ನು ಗಮನಿಸಿದ ಅರಣ್ಯಾಧಿಕಾರಿಗಳು ರಾತ್ರಿ ವೇಳೆಯೆ ಹುಲಿ ಹಿಂದೆಬಿದ್ದು, ಸುರಕ್ಷಿತವಾಗಿ ಸೆರೆ ಹಿಡಿದಿದ್ದಾರೆ.

ಸಂಜೆ 5 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ಕಣ್ಣಾಮುಚ್ಚಾಲೆ ಆಟ: ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಸಿಬ್ಬಂದಿಗೆ ಶನಿವಾರ(ನ.8) ಸಂಜೆ 4 ಗಂಟೆಗೆ ದಂಡನಾಯಕನ ಮೇಲೆ ದಾಳಿ ನಡೆಸಿದ ಸ್ಥಳದಿಂದ 500 ಮೀಟರ್ ಅಂತರದಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಹುಲಿ ಇರುವಿಕೆ ಮಾಹಿತಿ ಬಂದಿದೆ. ಕೂಡಲೆ ಅರಣ್ಯ ಸಿಬ್ಬಂದಿ ಥರ್ಮಲ್ ಡ್ರೋನ್ ಹಾರಿಸಿ ಪರಿಶೀಲಿಸಿದಾಗ ಪೊದೆಯೊಂದರಲ್ಲಿ ಹುಲಿ ವಿರಮಿಸುತ್ತಿರುವುದು ಕಂಡು ಬಂದಿದೆ. ನಿರಂತರವಾಗಿ ಡ್ರೋನ್ ಮೂಲಕ ಪರಿಶೀಲಿಸುತ್ತಿದ್ದ ವೇಳೆ ಸಂಜೆ 5.30ಕ್ಕೆ ಹುಲಿ ಪೊದೆಯಿಂದ ಎದ್ದು ಬಂದಿದೆ. ಆಗ ಡ್ರೋನ್‌ನಲ್ಲಿ ಹತ್ತಿರದಿಂದ ಫೋಟೊ ತೆಗೆದು ಪರಿಶೀಲಿಸಿದಾಗ ಅದರ ಕೊರಳಿನ ಸುತ್ತ ಗಾಯವಾಗಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅದನ್ನು ಸೆರೆ ಹಿಡಿಯುವ ಪ್ರಕ್ರಿಯೆ ಆರಂಭಿಸಲಾಯಿತು.

ಸ್ಥಳಕ್ಕೆ ಸಾಕಾನೆಗಳಾದ ಮಹೇಂದ್ರ, ಭೀಮ, ಶ್ರೀಕಂಠ, ಲಕ್ಷ್ಮಣ ಆನೆಯನ್ನು ಕರೆಸಿಕೊಳ್ಳಲಾಯಿತು. ಮಹೇಂದ್ರ ಆನೆ ಮೇಲೆ ಪಶುವೈದ್ಯರಾದ ಡಾ.ರಮೇಶ್, ಭೀಮ ಆನೆ ಮೇಲೆ ಡಾ.ವಾಸಿಂ ಮಿರ್ಜಾ, ಶ್ರೀಕಂಠ ಆನೆ ಮೇಲೆ ಡಾ.ಆದರ್ಶ್, ಲಕ್ಷ್ಮಣ ಆನೆ ಮೇಲೆ ಗುರಿಕಾರ, ಡಿಆರ್‌ಎಫ್‌ಓ ರಂಜನ್ ಕುಳಿತುಕೊಂಡು ಹುಲಿಯನ್ನು ಹಿಂಬಾಲಿಸತೊಡಗಿದರು. ಆದರೆ, ಹುಲಿ ಕಾಡಂಚಿನ ಟ್ರೆಂಚ್ ಬಳಿಯೆ ಸುಮಾರು ಮೂರು ಕಿ.ಮಿ ದೂರ ಕ್ರಮಿಸುತ್ತಾ ಪದೇ ಪದೇ ಪೊದೆಯಲ್ಲಿ ಕುಳಿತು ವಿರಮಿಸುತ್ತಲೇ ರಾತ್ರಿ 11 ಗಂಟೆವರೆಗೆ ಅರಣ್ಯ ಸಿಬ್ಬಂದಿಗೆ ಚಳ್ಳೆ ಹಣ್ಣು ತಿನ್ನಿಸುತ್ತಾ ಸಾಗಿತು.

ಈ ವೇಳೆ ಮತ್ತೆ ಹಳೆ ಹೆಗ್ಗುಡಿಲು ಗ್ರಾಮದತ್ತ ಮುಖ ಮಾಡುತ್ತಿದ್ದ ಹುಲಿಯನ್ನು ಗಮನಿಸಿದ ಕೂಂಬಿಂಗ್ ಸಿಬ್ಬಂದಿ ಹುಲಿ ಗ್ರಾಮದ ಕಡೆ ಬರುವುದನ್ನು ತಡೆಯಲು ಸಾಕಾನೆಗಳೊಂದಿಗೆ ವೈದ್ಯರ ತಂಡ ಅಡ್ಡಿಪಡಿಸಿತು. ಇದರಿಂದ ಮತ್ತೆ ಹುಲಿ ಕಾಡಿನ ಭಾಗದತ್ತ ಸಾಗಿತು. ರಾತ್ರಿ 11 ಗಂಟೆಗೆ ಪೊದೆಯೊಂದರಲ್ಲಿ ಕುಳಿತಿದ್ದ ಹುಲಿಗೆ ಡಾ.ರಮೇಶ್ ಅರವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು. 11.10ಕ್ಕೆ ಹುಲಿ ನಿದ್ರೆಗೆ ಜಾರಿದಾಗ ಅದರ ಬಳಿ ಪಶುವೈದ್ಯರ ತಂಡ ಬಂದು ಪರಿಶೀಲಿಸಿತು. ಆಗ ಕೊರಳಲ್ಲಿದ್ದ ಉರುಳು ಹಾಗೂ ಗಾಯ ಗಮನಕ್ಕೆ ಬಂದಿತು. ಅದನ್ನು ಕತ್ತರಿಸಿ, ಪ್ರಥಮ ಚಿಕಿತ್ಸೆ ನೀಡಿ ಬೋನ್ ಒಳಗೆ ಇಟ್ಟು ಉಪಚರಿಸಲಾಯಿತು.

ಮಹೇಂದ್ರ ಆನೆಯ ಛಲ: ಹುಲಿ ಕಾರ್ಯಾಚರಣೆ ವೇಳೆ ಸಾಕಾನೆ ಮಹೇಂದ್ರ ಆನೆ ಕೊಡುಗೆ ಅಪಾರ. ಥರ್ಮಲ್ ಡ್ರೋನ್‌ನಿಂದ ರಾತ್ರಿ ವೇಳೆಯೂ ಹುಲಿಯ ಚಲನವಲನ ಪತ್ತೆಯಾಗುತ್ತಿತ್ತಾದರೂ ಅದನ್ನು ಹಿಂಬಾಲಿಸಲು ಆನೆಗಳಿಗೆ ಕಷ್ಟವಾಗಿದ್ದರೂ, ಮಹೇಂದ್ರ ಮಾತ್ರ ಸರಾಗವಾಗಿ ಮುನ್ನುಗ್ಗುತ್ತಿತ್ತು. ಹುಲಿ ಮಲಗಿದ್ದ ಪೊದೆ ಬಳಿಯೆ ಭಯಪಡದೆ ತೆರಳಿದ ಮಹೇಂದ್ರ ಅರವಳಿಕೆ ಮದ್ದು ನೀಡಲು ಅವಕಾಶ ಮಾಡಿಕೊಟ್ಟಿತು.

ಅಧಿಕಾರಿಗಳ ಬಲ: ಹುಲಿ ಸೆರೆ ಹಿಡಿಯಲೆಬೇಕೆಂದು ಪಣ ತೊಟ್ಟಿದ್ದ ಸಿಬ್ಬಂದಿಗಳಿಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕ ಎಸ್.ಪ್ರಭಾಕರನ್ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿ ಅಗತ್ಯ ಮಾರ್ಗದರ್ಶನ ನೀಡುವ ಮೂಲಕ ಸಿಬ್ಬಂದಿಗಳನ್ನು ಹುರಿದುಂಬಿಸಿದರು. ಇದರಿಂದ ಊಟದ ವಿರಾಮ ಪಡೆಯದೆ ಸಿಬ್ಬಂದಿಗಳು ಮಾಡಿದ ಕಾರ್ಯಾಚರಣೆಗೆ ಹುಲಿ ಸೆರೆ ಸಿಕ್ಕಿದೆ.



ಹುಲಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಸಿಬ್ಬಂದಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಸ್ ಜಾತರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬೈಸನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ದಿ ಗರ್ಲ್‌ಫ್ರೆಂಡ್ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ಜೈ ಗದಾಕೇಸರಿ (ಲ) + ಕೋಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ, ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಯಾರಿಗೂ ಹೇಳ್ಬೇಡಿ (ಕ): ಬೆ.11.15ಕ್ಕೆ, ಗ್ರೀನ್ (ಕ): ಮ.2.20ಕ್ಕೆ, ಬಿಳಿಚುಕ್ಕಿ ಹಳ್ಳಿಹಕ್ಕಿ (ಕ): ಸಂ.4.35ಕ್ಕೆ, ತಮ್ಮಾ (ಹಿಂ): ರಾ.7.15ಕ್ಕೆ.
ಸ್ಕ್ರೀನ್ 2	ಕಾಂತಾರ –1(ಕ): ಮ.1ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ.
ಸ್ಕ್ರೀನ್ 3	ಕಾಂತಾರ –1(ಕ): ಬೆ.10.45ಕ್ಕೆ, ಮ.2.30ಕ್ಕೆ, ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ತಮ್ಮಾ (ಹಿಂ): ಮ.1ಕ್ಕೆ, ಮ.3.55ಕ್ಕೆ, ರಾ.9.30ಕ್ಕೆ, ಡೂಡ್ (ತ): ಸಂ.6.50ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕುಮಾರಿ ಪ್ರೇಕ್ಷ ಭರತ ನಾಟ್ಯ ರಂಗಪ್ರವೇಶ



ಕುಮಾರಿ ಪ್ರೇಕ್ಷಾ. ಆರ್.

ಮೈಸೂರು, ನ.9– ಮೈಸೂರಿನ ಶ್ರೀ ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ ವತಿಯಿಂದ ಶನಿವಾರ ಬೆಳಗ್ಗೆ ವಿದುಷಿ ಡಾ.ಕೃಪಾ ಫಡ್ಕೆ ಅವರ ಶಿಷ್ಯೆ ಕುಮಾರಿ ಪ್ರೇಕ್ಷಾ. ಆರ್. ಅವರ ರಂಗಪ್ರವೇಶ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ರಾಮಕೃಷ್ಣನಗರದ ಶ್ರೀ ರಮಾಗೋವಿಂದ ರಂಗಮಂದಿರದಲ್ಲಿ ನಡೆದ ಈ ರಂಗ ಪ್ರವೇಶ ಕಾರ್ಯಕ್ರಮ ತೋಡೆಯ ಮಂಗಳಂನಿಂದ ಆರಂಭವಾಗಿ ತಿಲ್ಲಾನದಲ್ಲಿ ಮುಕ್ತಾಯವಾಯಿತು. ಅತ್ಯಂತ ಶಾಸ್ತ್ರಬದ್ಧ ಶೈಲಿಯಲ್ಲಿ ನೃತ್ಯ ಪ್ರದರ್ಶನ ಮಾಡಿದ ಕುಮಾರಿ ಪ್ರೇಕ್ಷ ತನ್ನ ಅಭೂತಪೂರ್ವ ಪ್ರದರ್ಶನದ ಮೂಲಕ ಸಭಿಕರ ಮನಸೂರೆಗೊಂಡಳು.

ರಂಗಪ್ರವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಶ್ರೀವತ್ಸ ಅವರು, ಕುಮಾರಿ ಪ್ರೇಕ್ಷ ನಮ್ಮ ಸನಾತನ ಧರ್ಮದ ನೃತ್ಯ ಕ್ಷೇತ್ರಕ್ಕೆ ಒಂದು ಅಪೂರ್ವವಾದ ಕಾಣಿಕೆ ಎಂದು ಬಣ್ಣಿಸಿದರು. ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು, ಕುಮಾರಿ ಪ್ರೇಕ್ಷಾ ಈ ರಂಗ ಪ್ರವೇಶದ ಮೂಲಕ ವಿಶಿಷ್ಟ ಛಾಪನ್ನು ಮೂಡಿಸಿದ್ದಾಳೆ. ಅವಳ ಕಲೆಗೆ ಎಲ್ಲಾ ರೀತಿಯ ಪ್ರೋತ್ಸಾಹ ಸಿಗಲಿ ಎಂದು ಹಾರೈಸಿದರು.

ಶ್ರೀ ಶಾರದಾ ಪಬ್ಲಿಕ್ ಶಾಲೆ ಕಾರ್ಯದರ್ಶಿ ಮಂಜುನಾಥ್ ರಾಮನಾಥ್ ಅವರು ಮಾತನಾಡಿ, ಬೆಳೆಯುವ ಪೈರು ಮೊಳಕೆಯಲ್ಲಿ ಎನ್ನುವ ನಾಣ್ನುಡಿಯನ್ನು ತನ್ನ ನೃತ್ಯದ ಮೂಲಕ ಪ್ರೇಕ್ಷ ತೋರಿಸಿಕೊಟ್ಟಿದ್ದಾಳೆ ಎಂದು ಸಂತಸ ವ್ಯಕ್ತಪಡಿಸಿದರು. ಹೆಚ್.ಎನ್.ರವಿ ಹಾಗೂ ಎನ್.ಶೃತಿಯವರ ದಂಪತಿ ಪುತ್ರಿ ಕುಮಾರಿ ಪ್ರೇಕ್ಷಳ ಈ ಅಮೋಘ ಈ ನೃತ್ಯ ಪ್ರದರ್ಶನಕ್ಕೆ ಕಿಕ್ಕಿರಿದ ಕಲಾರಸಿಕರು ಸಾಕ್ಷಿಯಾಗಿ ತುಂಬು ಹೃದಯದಿಂದ ಹಾರೈಸಿದರು.

ಹಲವು ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ಪ್ರದಾನ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವಿವಿಧ ಕ್ಷೇತ್ರದ 30ಕ್ಕೂ ಹೆಚ್ಚು ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು,ನ.9(ಎಂಕೆ)–ರಾಜ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವಿವಿಧ ಕ್ಷೇತ್ರದ 30ಕ್ಕೂ ಹೆಚ್ಚು ಮಂದಿ ಸಾಧಕರಿಗೆ ರಾಜ್ಯೋತ್ಸವ ಪುರಸ್ಕಾರ ನೀಡಲಾಯಿತು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಸಾಧಕರನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಹುಟ್ಟು ಆಕಸ್ಮಿಕ. ನಾವ್ಯಾರು ಇಂತಹವರ ಹೊಟ್ಟೆಯಲ್ಲೇ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡು ಹುಟ್ಟುವುದಿಲ್ಲ. ಹುಟ್ಟಿದ ಮೇಲೆ ಸಾಧಕರಾಗಬೇಕೇ ಹೊರತು ಬಾಧಕರಾಗಬಾರದು ಎಂದರು.

ಸಾಧನೆ ಎಂದರೆ ರಾಷ್ಟ್ರಮಟ್ಟದ ಪ್ರಶಸ್ತಿಯನ್ನೇ ತೆಗೆದುಕೊಳ್ಳಬೇಕು ಎಂದೇನಿಲ್ಲ. ಪ್ರತಿಯೊಬ್ಬರು ನಿಮ್ಮಿಂದ ಸಾಧ್ಯವಾಗುವ ಮಟ್ಟದಲ್ಲಿ ಸಹಾಯದ ಮೂಲಕ ಸಾಧನೆ ಮಾಡಬೇಕು. ಸಹಾಯ ಮಾಡಲು ಸಾಧ್ಯವಾಗದಿದ್ದರೂ ಸ್ವಾರ್ಥ ಸಾಧನೆಗಾಗಿ ಬೇರೆಯವರಿಗೆ ತೊಂದರೆ ಕೊಡಬಾರದು. ಕಳ್ಳತನ ಮಾಡಬಾರದು. ನಂಬಿಕೆ ದ್ರೋಹ ಮಾಡಬಾರದು. ಕೊಲೆ–ಸುಲಿಗೆ ಮಾಡಬಾರದು ಎಂದು ತಿಳಿ ಹೇಳಿದರು.

ಪ್ರಶಸ್ತಿ ಪಡೆದಿರುವವರ ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಮ್ಮ ಸೇವೆಯನ್ನು ಗುರ್ತಿಸಿ ಅಭಿನಂದಿಸಿದೆ. ಹಾಗಾಗಿ ಕನ್ನಡ ನಾಡು–ನುಡಿಗಾಗಿ ಪ್ರಶಸ್ತಿ ಪುರಸ್ಕೃತರ ಸೇವಾ ಕಾರ್ಯ ಇನ್ನಷ್ಟು ವಿಶಾಲವಾಗಲಿ ಎಂದು ಆಶಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮ.ನ.ಲತಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ ಪುರಸ್ಕೃತರು: ಹೆಚ್.ಎಸ್.ಹರಿಶಂಕರ್ (ಸಂಶೋಧನೆ), ಮಣಿಶೇಖರ್ (ಕರಕುಶಲ), ಪ್ರಭಾಶಾಸ್ತ್ರಿ ಜೋಶ್ಯುಲ (ಸಾಹಿತ್ಯ), ಬಿ.ಆರ್.ನಾಗರತ್ನ (ಸಾಹಿತ್ಯ), ಡಾ.ಬಲ್ಲೇನಹಳ್ಳಿ ವಿಜಯಕುಮಾರ್ (ಸಾಹಿತ್ಯ), ಅನಿತ ವಿಮಲ ಬ್ರ್ಯಾಗ್ಸ್ (ಆಡಳಿತ), ಲೀಲಾವತಿ (ರಂಗಭೂಮಿ), ಯಶೋಧ ರಾಮಕೃಷ್ಣ (ಸಾಹಿತ್ಯ), ಡಾ.ಸೌಗಂಧಿಕಾ ಜೋಯಿಸ್ (ಸಂಘಟನೆ), ಪದ್ಮಾ ಪಾಂಡುರಂಗ (ನಿರೂಪಣೆ), ಡಾ.ಪೂವಮ್ಮ (ವೈದ್ಯಕೀಯ), ಡಾ.ಅಖಿಲಾ (ಸಂಶೋಧನೆ), ಎನ್.ಆರ್.ರೂಪಶ್ರೀ (ಸಾಹಿತ್ಯ), ಸುಜನಾ (ಸಮಾಜ ಸೇವೆ), ಎಂ.ಎಸ್.ಉಷಾ ಪ್ರಕಾಶ್ (ಸಾಹಿತ್ಯ), ಕೆ.ಲಕ್ಷ್ಮಿ (ಸಾಹಿತ್ಯ), ಪ್ರೊ.ಎಂ.ಎಸ್.ಮನೋನ್ಮಣಿ (ಶಿಕ್ಷಣ), ಎಂ.ಸಿ.ಮಂಜುಳಾ (ಸಾಹಿತ್ಯ), ಭಾರತಿ ಪ್ರಸಾದ್ (ಸಾಹಿತ್ಯ), ವಾಚಮ್ಮ ಮಲ್ಲಿಗೆ (ಪತ್ರಿಕೋದ್ಯಮ), ಡಾ.ಎನ್.ಆರ್.ಚಂದ್ರೇಗೌಡ (ಶೈಕ್ಷಣಿಕ), ಹೆಚ್.ಎಲ್.ಶಿವಬಸಪ್ಪ (ಸಾಹಿತ್ಯ), ಡಾ.ಅವರೇಕಾಡು ವಿಜಯ ಕುಮಾರ್ (ಸಾಹಿತ್ಯ), ಡಾ.ಎಂ.ಕೆ.ಗಿರೀಶ್ ಚಂದ್ರ (ಸಮುದಾಯ ಸೇವೆ), ಅಂಟೋರ ಅಕ್ತರ್ (ಭರತ ನಾಟ್ಯ), ಡಾ.ಚಂದ್ರಪ್ಪ (ರಂಗಭೂಮಿ), ಸರಸ್ವತಿ ಶೆಟ್ಟಿ (ಸಮಾಜಸೇವೆ), ಪಿ.ದೇವರಾಜು ಚಿಕ್ಕಳ್ಳಿ (ಶಿಕ್ಷಣ), ಎ.ಜಿ.ಸುಧೀರ್ (ನ್ಯಾಯಾಂಗ), ಸಿ.ಮಲೆಯೂರು ಪ್ರಭು ಸ್ವಾಮಿ (ಸಮಾಜ ಸೇವೆ), ಅಲಮೇಲಮ್ಮ (ಸಂಘಟನೆ), ಹೆಚ್.ಎ.ಯಾದವ ಹರೀಶ (ಸಮಾಜ ಸೇವೆ), ಎಸ್.ಜ್ಞಾನೇಶ್ವರ್ (ಕ್ರೀಡೆ), ಡಾ.ಪ್ರೀತಮ್ (ಗಾಯನ), ಮಹದೇವಮ್ಮ (ಸಮಾಜಸೇವೆ), ಡಾ.ಚಿನ್ನನಾಗಪ್ಪ (ವೈದ್ಯಕೀಯ), ಕಾಳಿಹುಂಡಿ ಶಿವಕುಮಾರ್ (ಸಂಗ್ರಹ), ವೀಣಾ ಕದಂಬ (ಸಾಹಿತ್ಯ), ಸ್ವರೂಪರಾಣಿ (ಪರಿಸರ), ಭವತಾರಿಣಿ (ಗಾಯನ), ಶೋಭಾ ಚಲುವಯ್ಯ (ಶಿಕ್ಷಣ), ಪದ್ಮಾವತಿ (ಸಮಾಜ ಸೇವೆ), ಸೌರವ್ ಗಜ್ (ಶೈಕ್ಷಣಿಕ), ಪಿ.ಗಿರೀಶ್ (ಸುಮುದಾಯ ಸೇವೆ), ಶಿವಶಂಕರ್ (ಕರಕುಶಲ), ಚನ್ನಬಸಪ್ಪ (ಧಾರ್ಮಿಕ), ಹೆಚ್.ಎಸ್.ಲೋಕೇಶ್ (ಜನಪದ), ಸಿ.ನಾಗರಾಜು (ಬಯಲು ನಾಟಕ), ಕೆ.ಹರ್ಷಿಣಿ (ಶಿಕ್ಷಣ) ಮತ್ತು ಎಂ.ಶಿವರಾಜ್ (ಸಮಾಜ ಸೇವೆ) ಅವರಿಗೆ ಜಿಲ್ಲಾ ಕಸಾಪದಿಂದ ರಾಜ್ಯೋತ್ಸವ ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು.

ಮೈಸೂರಲ್ಲಿ ಬಾಳೆ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ



ಬಾಳೆ ಮೇಳದಲ್ಲಿ ನಡೆದ ಚಿತ್ರಕಲಾ, ಅಡುಗೆ ಸ್ಪರ್ಧೆ ವಿಜೇತರಿಗೆ ಬಹುಮಾನ, ಅಭಿನಂದನಾ ಪತ್ರಗಳನ್ನು ನೀಡಲಾಯಿತು.

ಮೈಸೂರು,ನ.9(ಎಂಕೆ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಕೃಷಿಕರ ಬಳಗ, ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್), ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಕಿಸಾನ್ ಬಂಡಿ, ಅಭಯ್ ನ್ಯಾಚುರಲ್ ಫುಡ್ಸ್, ಬಾಕಾಹು ಅಡ್ಡ ಆರ್ಗ್ಯಾನಿಕ್, ಕೀಸ್ಟೋನ್ ಫೌಂಡೇಷನ್ ಮತ್ತು ಯೂಸಿಂಗ್ ಡೈವರ್ಸಿಟಿ ಸಹಯೋಗ ದೊಂದಿಗೆ ನಡೆದ ಎರಡು ದಿನಗಳ 'ಬಾಳೆ ಮೇಳ' ಯಶಸ್ವಿಯಾಯಿತು.

ಎರಡನೇ ದಿನದ ಮೇಳದಲ್ಲಿ ನಡೆದ 'ನಾ ಕಂಡಂತೆ ಬಾಳೆ' ಚಿತ್ರಕಲಾ ಸ್ಪರ್ಧೆಯ ಕಿರಿಯರ ವಿಭಾಗದಲ್ಲಿ ಎಸ್.ಮೌಲ್ಯ (ಪ್ರಥಮ), ಹೆಚ್.ಆರ್.ನಯನ (ದ್ವಿತೀಯ) ಶ್ರೀಆದ್ಯಾ ಕೋಟ (ತೃತೀಯ) ಹಾಗೂ ಹಿರಿಯರ ವಿಭಾಗದಲ್ಲಿ ಬಿ.ಈಶನ್ (ಪ್ರಥಮ), ಕೆ.ಧೀರಜ್ (ದ್ವಿತೀಯ), ಗೋಕುಲ್(ತೃತೀಯ) ಬಹುಮಾನ ಗಳಿಸಿದರು. ಹಾಗೆಯೇ 'ಬಾಳೆಯ ಅಡುಗೆ ಸ್ಪರ್ಧೆ'ಯಲ್ಲಿ ವತ್ಸಲ (ಪ್ರಥಮ), ಮಂಜುಳ (ದ್ವಿತೀಯ) ಮತ್ತು ನಾಗವೇಣಿ ವಿರೂಪಾಕ್ಷ (ತೃತೀಯ) ಬಹುಮಾನ ಗಳಿಸಿದರು.

ಉತ್ತಮ ಪ್ರತಿಕ್ರಿಯೆ: ಎರಡು ದಿನ ಬಾಳೆ ಮೇಳಕ್ಕೆ ಮೈಸೂರಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಬಾಳೆಯ ಖಾದ್ಯ, ಸಿರಿಧಾನ್ಯ, ದೇಸಿ ಅಕ್ಕಿ, ಸಾವಯವ ಉತ್ಪನ್ನಗಳು, ಕರಕುಶಲ ಕಲಾಕೃತಿ ಹಾಗೂ ತರಹೇವಾರಿ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಭರದಿಂದ ನಡೆಯಿತು. ಶಿರಸಿಯ ಬಾಳೆ ಸಂರಕ್ಷಕ ಪ್ರಸಾದ್ ರಾಮ ಹೆಗಡೆ ಅವರ ನಮಸ್ತೆ ಬಾಳೆ, ಐಸ್ ಕ್ರೀಂ ಬಾಳೆ, ಕರಿ ಬಾಳೆ, ಕಾಡು ಬಾಳೆ, ಕೆಂಪು ಬಾಳೆ, ಸಹಸ್ರ ಬಾಳೆಯ ಕಂದುಗಳ ಕೊಳ್ಳಲು ಜನ ಮುಗಿಬಿದ್ದರು. ಮೈಸೂರಿನ ಸಹಜ ಸೀಡ್ಸ್ ರೈತ ಕಂಪನಿಯ ರಸಬಾಳೆ, ಮದರಂಗಿ, ಫಿಂಗರ್ ಬಾಳೆ, ಪೂವನ್, ಕರ್ಪೂರ ವಲ್ಲಿ, ಚಂದ್ರ ಬಾಳೆ, ಎಲಕ್ಕಿ ಬಾಳೆಯ 2500 ಗಿಡ ಮತ್ತು ಗೆಡ್ಡೆ ಮಾರಾಟವಾದವು. ಹೆಚ್.ಡಿ. ಕೋಟೆ ಹುಲಿಕಾಡು ರೈತ ಉತ್ಪಾದಕರ ಕಂಪನಿಯ ನೇಂದ್ರ, ಪಚ್ಚಬಾಳೆ, ಏಲಕ್ಕಿಯ ಒಂದು ಸಾವಿರ ಗೆಡ್ಡೆ ಬಿಕರಿಯಾದವು. ಜೊತೆಗೆ ಮೈಸೂರು ಭಾಗದಲ್ಲಿ ಬಾಳೆಯ ವೈವಿಧ್ಯ ಸಂರಕ್ಷಣೆಗೆ ಆಸಕ್ತ ಬಾಳೆ ಕೃಷಿಕರ ಸಂಘಕ್ಕೂ ಚಾಲನೆ ನೀಡಲಾಯಿತು.

ಆರ್ಥೋಪೆಡಿಕ್ ಉಚಿತ ಶಿಬಿರ

ಮೈಸೂರು: ಸುಯೋಗ್ ಆಸ್ಪತ್ರೆಯಲ್ಲಿ ನ.10ರಿಂದ 15ರವರೆಗೆ ಉಚಿತ ಆರ್ಥೋಪೆಡಿಕ್ ಶಿಬಿರ ಆಯೋಜಿಸಲಾಗಿದೆ. ನುರಿತ ಕೀಲುಮೂಳೆ ತಜ್ಞರ ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಮೊಣಕಾಲು ನೋವು, ಊತ, ಭುಜದ ನೋವು, ಸೊಂಟದ ನೋವು, ಕೆಳ ಬೆನ್ನು ನೋವು ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವವರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗೆ 0821-253 3600, 9986399862 ಸಂಪರ್ಕಿಸಿ.

ಪ್ರಶಸ್ತಿಗಳಿಂದ ಸಾಧಕರ ಜವಾಬ್ದಾರಿ ಹೆಚ್ಚಳ

ಮೈಸೂರು ವಾಣಿಜ್ಯ–ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು



ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಹಾಗೂ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ನ.9–ಮನುಷ್ಯ ಸಾಧನೆ ಮಾಡಿದಾಗ ಪ್ರಶಸ್ತಿಗಳು ಒಲಿದು ಬರುತ್ತವೆ. ಅದರೊಂದಿಗೆ ಹೆಚ್ಚಿನ ಜವಾಬ್ದಾರಿಗಳು ಸಾಧಕನನ್ನು ಅರಸಿ ಬರುತ್ತವೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಹೇಳಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಚೇರಿಯಲ್ಲಿ ಮೈಸೂರು ಜಿಲ್ಲಾಡಳಿತದ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಸಮಾಜ ಸೇವೆಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಹಾಗೂ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಲಿಂಗರಾಜು, ಸಾಧನೆ ಎಂಬುದು ಸುಲಭದ ಮಾತಲ್ಲ, ಅದು ತಪಸ್ಸಿನ ಹಾಗೆ. ಹಲವು ಅಡೆತಡೆಯನ್ನು ಲೆಕ್ಕಿಸದೆ ದೃಢ ಸಂಕಲ್ಪದಿಂದ ಯಾರು ಬೇಕಾದರೂ ಸಾಧನೆ ಮಾಡ ಬಹುದು. ಪ್ರಶಸ್ತಿಗಳು ಸಾಧಕನಿಗೆ ಸಮಾಜದಲ್ಲಿ ಗೌರವ ತಂದುಕೊಡುವುದರ ಜೊತೆಗೆ ಜವಾಬ್ದಾರಿಗಳನ್ನೂ ಹೆಚ್ಚಿಸುತ್ತದೆ ಎಂದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿದರು. ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಅಖಿಲ ಕರ್ನಾಟಕ ಒಕ್ಕಲಿಗ ಮಹಾಸಭಾ ಅಧ್ಯಕ್ಷ ಎನ್.ಬೆಟ್ಟೇಗೌಡ, ಮೈಸೂರು ಜಿಲ್ಲಾ ಚಳುವಳಿಗಾರರ ಸಂಘದ ಅಧ್ಯಕ್ಷ ಬಿ.ಎ.ಶಿವಶಂಕರ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್, ರಾಜೇಶ್, ಸಚಿನ್ ನಾಯಕ್, ಭಾರತಿ ಮತ್ತಿತರರು ಉಪಸ್ಥಿತರಿದ್ದರು.

ಸಂಗೀತ, ನೃತ್ಯ ಶಿಕ್ಷಕರಿಗೆ ಆಹ್ವಾನ

ಮೈಸೂರು: ಮೈಸೂರಿನಲ್ಲಿರುವ ಜೆಎಸ್‌ಎಸ್ ಶಾಲಾ–ಕಾಲೇಜುಗಳಲ್ಲಿ ಸಂಜೆಯ ವೇಳೆ ನೃತ್ಯ, ಸಂಗೀತ ಮತ್ತು ತಾಳವಾದ್ಯ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸಂಜೆ 5 ಗಂಟೆ ನಂತರ ತರಗತಿ ನಡೆಸಲು ಪರಿಣಿತ ನೃತ್ಯ, ಸಂಗೀತ, ತಾಳವಾದ್ಯಗಳ ಶಿಕ್ಷಕರ ಅಗತ್ಯವಿದೆ. ತರಗತಿಗಳನ್ನು ಕಲಾ ಸಂಸ್ಥೆಗಳವರೂ ನಡೆಸಲು ಅವಕಾಶ ಕಲ್ಪಿಸಲಾಗುವುದು. ಆಸಕ್ತ ಕಲಾವಿದರು ನ.22ರೊಳಗಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿರುವ ಜೆಎಸ್‌ಎಸ್ ಸಂಗೀತ ಸಭಾದ ಕಚೇರಿಗೆ ಭೇಟಿ ನೀಡಲು ಕೋರಿದೆ. ಹೆಚ್ಚಿನ ಮಾಹಿತಿಗೆ ಮೊ.9686677500 ಸಂಪರ್ಕಿಸಬಹುದು.